ಜನಶಕ್ತಿ

ಕನ್ನಡ ವಾರಪತ್ರಿಕೆ

Blog janashakthi.wordpress.com e-mail js_weekly@yahoo.com

ಸಂಪುಟ 7 ಸಂಚಿಕೆ 08
ಫೆಬ್ರವರಿ 24, 2013

ಪುಟ 16 ರೂ. 10/-





ಇದು ಬಜೆಟ್ ಅಲ್ಲ : ಕೊನೆಗಾಲದಲ್ಲಿರುವ ಬಿಜೆಪಿ ಚುನಾವಣಾ ಪ್ರಣಾಳಿಕೆ



352 ಕೋಟಿಗಳ ಹೆಲಿಕಾಪ್ಟರ್ ಹಗರಣ

ಕೇಂದ್ರದ ನಿಷ್ಕ್ರಿಯತೆಯ ಪ್ರದರ್ಶನ



ತುರ್ತು ವಿಸ್ತರಣೆ, ಸಮರಶೀಲ ಹೋರಾಟಗಳಿಗೆ ಆದ್ಯತೆ

ಕೃಷಿ ಕೂಲಿಕಾರರ ಸಮ್ಮೇಳನದ ಕರೆ



ಅಫ್ಜಲ್ ಗುರು : ಪರಕೀಯ ಭಾವಕ್ಕೆ ತಿದಿಯೂದಿದ ನೇಣು ಹಾಕಿದ ರೀತಿ

ಹೊಸ ಲೋಕಾಯುಕ್ತರ ನೇಮಕ. ಮುಂದೇನು?

ಕರಾವಳಿ : ಮಾದಕವಸ್ತು ಮತ್ತು ಕೋಮುವಾದದ ಅಮಲು

ಫೆಬ್ರವರಿ 20, 21 ಮಹಾಮುಷ್ಕರಕ್ಕೆ ಸನ್ನದ್ಧತೆ....

“ನಾವು ಜನರನ್ನು ಎಚ್ಚರ ಮಾಡಬೇಕು. ಹೊಟ್ಟೆ ತುಂಬ ಉಂಡಿದ್ದೀರಾ ಎಂದು ಕೇಳಬೇಕು”

ಸಂದರ್ಶನದಲ್ಲಿ ಖ್ಯಾತ ಚುಟುಕು ಕವಿ ‘ವಿಡಂಬಾರಿ’

ಸಂದರ್ಶಕರು: ಎಸ್.ವೈ. ಗುರುಶಾಂತ್, ಆರ್. ರಾಮಕೃಷ್ಣ.

‘ವಿಡಂಬಾರಿ’ ಎಂದ ತಕ್ಷಣ ನೆನಪಾಗುವುದು ನಾಲ್ಕು ಸಾಲಿನ ಹರಿತ ಪದಗಳ ಚುಟುಕು. ಖ್ಯಾತನಾಮರಾದ ಎಷ್ಟೋ ಚುಟುಕು ಕವಿಗಳು ಕೂಡ ಪ್ರಾಸದ ಚಪಲಕ್ಕಾಗಿ, ಪತ್ರಿಕೆಯ ದೈನಂದಿನ ಕೋಟಾ ಪೂರೈಸುವ ಸಲುವಾಗಿ, ಏನಾದರೂ ಚುಟುಕು ಬರೆಯಲೇ ಬೇಕು ಬರೆಯುವುದು, ಹಾಸ್ಯ, ಪಂಚಿಂಗ್‌ಗಳ ಖಯಾಲಿಯಲ್ಲಿ ಮಹಿಳಾ ವಿರೋಧಿ, ನಿರಾಶಾವಾದಿ ಸಿನಿಕತನ ಬೆಳೆಸುವ, ಪ್ರಗತಿ ವಿರೋಧಿ ನಿಲುವುಗಳನ್ನು ಲೇಖನಿಯಿಂದ ಹರಿಸುವುದನ್ನು ನೋಡುತ್ತಿದ್ದೇವೆ. ಆದರೆ ‘ವಿಡಂಬಾರಿ’ ಕಾವ್ಯನಾಮದ ವಿ.ಜಿ.ಭಂಡಾರಿಯವರ ಚುಟುಕುಗಳು ಎಂದರೆ ನಮ್ಮ ಸಮಾಜದಲ್ಲಿನ ಶೋಷಣೆ, ಅನ್ಯಾಯ, ಮೌಢ್ಯ, ವಿಕಾರಗಳನ್ನು ಎತ್ತಿ ತೋರುವ, ಜನರಲ್ಲಿ ಆ ಬಗೆಗೆ ಜಾಗೃತಿ, ಚಿಕಿತ್ಸಕ ದೃಷ್ಟಿಕೋನ ಬೆಳೆಸುವ ಸತ್ವಯುತ ಅಭಿವ್ಯಕ್ತಿ ಅನ್ನುವುದು ಖಚಿತ.

ಶೋಷಿತ–ವಂಚಿತ ದಲಿತ ದೇವದಾಸಿಯ ಮಗನಾಗಿ ಹುಟ್ಟಿ ಕಡುಬಡತನ ಸಂಕಷ್ಟಗಳನ್ನೇ ಉಂಡು ಬೆಳೆದವರು ವಿ.ಜಿ.ಭಂಡಾರಿ. ತುಣುಕು ಪದಗಳಲ್ಲಿ ಪ್ರಖರ ವಿಶ್ಲೇಷಣೆ, ವಂಚಕ ಸಾಮಾಜಿಕ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಯ ಆಶಯಗಳ ಸಮರ್ಥ ಅಭಿವ್ಯಕ್ತಿ ಇವರ ಸಾಹಿತ್ಯದ ವಿಶೇಷ: ಸಮಾಜಮುಖಿ ಚಿಂತನೆಯ ಈ ಹೆಮ್ಮೆಯ ಚುಟುಕು ಕವಿ ಈಗ ಮಾರ್ಚ್ 2–3, 2013 ರಂದು ಮುಂಡಗೋಡದಲ್ಲಿ ನಡೆಯುವ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಒಂದು ಸಂದರ್ಶನ.

ಜನಶಕ್ತಿ: ಈಗ ನೀವು ಉತ್ತರ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ಆ ಬಗ್ಗೆ ನಿಮಗೆ ಏನನ್ನಿಸುತ್ತಿದೆ. ?

ವಿಡಂಬಾರಿ: ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ. ನನ್ನಷ್ಟಕ್ಕೆ ನಾನು ಕೆಲಸ ಮಾಡಿಕೊಂಡಿದ್ದೇನೆ. ನಿರೀಕ್ಷೆ ಇರಲಿಲ್ಲ. ಸಂತೋಷವಾಗಿದೆ.

ಜನಶಕ್ತಿ: ಸಮ್ಮೇಳನದ ಅಧ್ಯಕ್ಷರಾಗಿ ನೀವು ಯಾವ ವಿಷಯಗಳಿಗೆ ಒತ್ತು ಕೊಡುತ್ತೀರಿ. ?

ವಿಡಂಬಾರಿ: ದೇಶದ ಶೇ. 50 ರಷ್ಟು ಜನರು ಈಗಲೂ ಬಡತನ ರೇಖೆಯ ಕೆಳಗೇ ಇದ್ದಾರೆ. ರೈತರ ಸಮಸ್ಯೆ –ದಲಿತರ ಸಮಸ್ಯೆಗಳು, ಮಹಿಳೆಯರ ಸಮಸ್ಯೆಗಳು ಉಲ್ಬಣಿಸುತ್ತಿವೆ. ಸಾಮಾನ್ಯರಿಗೆ ಉನ್ನತ ಶಿಕ್ಷಣ ಕನಸೇ ಆಗಿದೆ. ಆಳುವ ವರ್ಗಗಳಿಗೆ ವಂಚಿಸುವ ಉದ್ದೇಶ ಇದೆ. ಶಾರದಾ ಮಾತೆಯನ್ನು ಕಡು ಲೋಭಿಗಳಿಗೆ ಹರಾಜು ಹಾಕಿದ್ದಾರೆ. ಈ ಅಂಶಗಳ ಬಗೆಗೆ ಒತ್ತು ಕೊಡಬೇಕಾಗಿದೆ.

ಜನಶಕ್ತಿ: ಶೋಷಿತ ಸಮುದಾಯವನ್ನು ಪ್ರತಿನಿಧಿಸುವ ನೀವು ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ತುಂಬಾ ಸಂತೋಷದ ವಿಷಯ. ಸಾಹಿತ್ಯದಲ್ಲಿ ಈ ಶೋಷಿತರ ಬದುಕು ಹೇಗೆ ಪ್ರತಿಫಲನಗೊಂಡಿದೆ.

ವಿಡಂಬಾರಿ: ನಾನು ಚಿಕ್ಕಂದಿನಲ್ಲೇ ಬಹಳ ಕಷ್ಟಗಳನ್ನು ಅನುಭವಿಸಿದೆ. ಬಡತನ. ಕೂಲಿ ಕೆಲಸಕ್ಕೆ ಹಾಕಿದ್ದರು. 3ನೇ ಈಯತ್ತೆ ನಂತರ ಕಲೀಲಿಕ್ಕೂ ಆಗಲಿಲ್ಲ. ಕನ್ನಡ ಓದಲೂ ಬರುತ್ತಿರಲಿಲ್ಲ. ನಾನು ಕುಡಿಯುತ್ತಿದ್ದೆ. ಡಾ. ಆರ್.ವಿ. ಭಂಡಾರಿ ಅವರು ಕೊಟ್ಟ ಪುಸ್ತಕಗಳು ನನ್ನನ್ನು ಮನುಷ್ಯನನ್ನಾಗಿ ರೂಪಿಸಿದವು. ಮನುಷ್ಯನಾಗಿ ಹುಟ್ಟಿ, ಒಂದಷ್ಟು ತಿಂದು ಸಾಯುವುದಲ್ಲ ಎಂದು ನಾಡಿನ ಪ್ರಸಿದ್ಧ ಸಾಹಿತಿಗಳು ಹೇಳಿದ್ದಾರೆ. ‘ನಿಜವಾದ ಮಾನವನಾಗಿ’ ಬೆಳೆದು ಬದುಕಿ ಮಣ್ಣಲ್ಲಿ ಮಣ್ಣಾಗಬೇಕು. 9 ತಿಂಗಳು ಹೊತ್ತು ಹೆತ್ತು ಸಾಕಿದ ಮಹಾತಾಯಿಯ ಋಣ ತೀರಿಸಬೇಕು.

ಪ್ರಾಚೀನ ಋಗ್ವೇದ ಕಾಲದಿಂದ ಇಲ್ಲಿಯ ಕೆಲವರು ಉಂಡುಟ್ಟು ಬಲಿತರೆ ಸಾಕು ಎಂದು ದಲಿತರನ್ನು ತುಳಿಯುತ್ತ ಬರಲಾಗಿದೆ. ಹೀಗಾಗಿ ನಾನು ದಲಿತರ ಪರವಾಗಿ ಮತ್ತು ನೊಂದವರ ಪರವಾಗಿ ಬರೆಯಲು ಪ್ರಾರಂಭಿಸಿದೆ.

ಸಮ್ಮೇಳನದ ಸಂದರ್ಭದಲ್ಲಿ ಗುಡಿ–ಗುಂಡಾರ, ಮಠಗಳ ಪರವಹಿಸಿ ಏನನ್ನೂ ಹೇಳುವುದಿಲ್ಲ. ಬಹುಸಂಖ್ಯಾತರು ಜ್ಞಾನ ತಿಳಿದು ನಿಂತರೆ ಸೈನ್ಯವೂ ಕೂಡ ತಡೆಯುವುದು ಅಸಾಧ್ಯ ಎಂಬುದು ನಮ್ಮ ರಾಜಕಾರಣಿಗಳಿಗೆ ಗೊತ್ತಿದೆ. ಅದರಿಂದಾಗಿಯೇ ಶಿಕ್ಷಣವನ್ನು ವಂಚಿಸುತ್ತಿದ್ದಾರೆ. ಆದ್ದರಿಂದಲೇ ಜನರಲ್ಲಿ ಮೌಢ್ಯವನ್ನು ಬಿತ್ತುತ್ತಾ ಇದ್ದಾರೆ.


ಜನಶಕ್ತಿ: ಸಾಹಿತ್ಯ ರಂಗದಲ್ಲಿನ ಇತ್ತೀಚಿಗಿನ ಪ್ರವೃತ್ತಿ–ಬೆಳವಣಿಗೆಗಳ ಬಗೆಗೆ ಏನನ್ನಿಸುತ್ತದೆ?

ವಿಡಂಬಾರಿ: ಆರೋಗ್ಯಕರವಾಗಿ ಹೋಗುತ್ತಿದೆ ಅಂತ ಅನಿಸುತ್ತಿಲ್ಲ. ಹಣ ಸಿಗುವ ಕಡೆ ದೊಡ್ಡ ದೊಡ್ಡ ಸಾಹಿತಿಗಳು ಇದ್ದಾರೆ. ಪ್ರಶಸ್ತಿ ಇಟ್ಟಿದ್ದಾರಲ್ಲ !! ಸಂತೋಷ ಎಂದರೆ ಉತ್ತರ ಕನ್ನಡ ಜಿಲ್ಲೆಯ ಮಹಿಳಾ ಸಾಹಿತಿಗಳು ಬೆಳೆಯುತ್ತಾ ಇದ್ದಾರೆ. ಬಹಳಷ್ಟು ಮುಂದೆ ಬಂದಿದ್ದಾರೆ.

ಜನಶಕ್ತಿ: ನೀವು ಚುಟುಕು ಸಾಹಿತಿಯಾಗಿ ರೂಪುಗೊಳ್ಳಲು ಪ್ರೇರಣೆ ಏನು ?

ವಿಡಂಬಾರಿ: ಒಂದು ಪದವಿ ಕಾಲೇಜಿನಲ್ಲಿ ನಡೆದ ವಿಷಯ. ಲೆಕ್ಚರರ್ ಒಬ್ಬರು (‘ಕಳುಹಿದನಾ ಕೌರವ ರಾಯ’) ಎಂಬ ಕಾವ್ಯ ಭಾಗವೊಂದನ್ನು ತಪ್ಪಾಗಿ ವಿವರಿಸಿದ್ದರು. ಆ ಹಿನ್ನೆಲೆಯಲ್ಲಿ ನಾನು ಒಂದು ಚುಟುಕು ಬರೆದಿದ್ದೆ.

ಬೀದಿಯಲಿ ತಿರುಗುತಿಹ ಹಲವಾರು ಎಮ್ಮೆ
ಇಣುಕಿಣುಕಿ ನೋಡಿದವು ಹತ್ತಿರದಿ ಒಮ್ಮೆ



ಅವುಗಳಲ್ಲಿ ಹಿಂಡುವವು ಹತ್ತಕ್ಕೆ ಎರಡು
ಉಳಿದ ಎಮ್ಮೆಗಳೆಲ್ಲ ಸಂಪೂರ್ಣ ಬರಡು

ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಈ ಚುಟುಕು ಖ್ಯಾತ ಚುಟುಕು ಕವಿ ದಿನಕರ ದೇಸಾಯಿ ಅವರ ಕಣ್ಣಿಗೆ ಬಿತ್ತು. ಹತ್ತು ಚುಟುಕುಗಳೊಂದಿಗೆ ಬರಲು ಹೇಳಿ ಕಳಿಸಿದರು. ಅಂಚೆ ಇಲಾಖೆ ನೌಕರನಾಗಿ ಅವರ ಮನೆಗೆ ಅಂಚೆ ಪತ್ರ, ಟೆಲಿಗ್ರಾಂ ಇತ್ಯಾದಿ ಕೊಡುತ್ತಿದ್ದೆ. ಆದರೆ ಮಾತನಾಡಿಸಿರಲಿಲ್ಲ. ಹೋದಾಗ ನಡುಗುತ್ತಿದ್ದೆ. ದಿನಕರ ದೇಸಾಯಿಯವರು ಚುಟುಕುಗಳನ್ನು ಮೆಚ್ಚಿಕೊಂಡು ಬೆನ್ನು ತಟ್ಟಿದರು. ಆಮೇಲೆ ಕಂಡಾಗ ...ಓಹೋಹೋ ಚುಟುಕು ಕವಿ ಮಹಾರಾಜರು, ಬರೆಯುತ್ತಿರಿ...ಎನ್ನುತಿದ್ದರು. ತುಂಬಾ ಪ್ರೋತ್ಸಾಹಿಸಿದರು.

ಜನಶಕ್ತಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋಮುಗಲಭೆಗಳನ್ನು ಹುಟ್ಟು ಹಾಕುವ ವ್ಯವಸ್ಥಿತ ಸಂಚುಗಳು ಸಕ್ರಿಯವಾಗಿವೆ. ಹಿಂದೆ ಭಟ್ಕಳ ಮುಂತಾದಲ್ಲಿ ಕೋಮುಗಲಭೆಗಳು ನಡೆದಾಗ ಸಾಹಿತಿಗಳು ಸ್ಪಂದಿಸಿದ್ದಿತ್ತು. ಕೋಮುವಾದ ಜಾತಿವಾದಗಳ ಬಗೆಗೆ ನಿಮ್ಮ ಅನಿಸಿಕೆ ?

ವಿಡಂಬಾರಿ: ಹಿಂದೆ ಭಟ್ಕಳದಲ್ಲಿ ಕೋಮುಗಲಭೆಗಳು ನಡೆದಾಗ ಸಾಹಿತಿಗಳು ಸಕ್ರಿಯವಾಗಿ ಮಧ್ಯ ಪ್ರವೇಶ ಮಾಡಿದ್ದೆವು. ಡಾ. ಎನ್.ಆರ್. ನಾಯಕರು, ನಾನು ಕೂಡ ಹೋಗಿದ್ದೆವು. ಸೌಹಾರ್ದತೆಗಾಗಿ ಕವಿಗೋಷ್ಠಿಯನ್ನೂ ಮಾಡಿದ್ದೆವು. ರಂಜಾನ್ ದರ್ಗಾ ಅವರು ಬಂದಿದ್ದರು. ಕೋಮುಗಲಭೆ ರಾಜಕೀಯ ಪ್ರೇರಿತ. ಬಸ್ಸಿಗೆ ಕಲ್ಲು ಹೊಡೆಯುವುದು... ಮುಸ್ಲಿಮರ ಮೇಲೆ ಹಾಕುವುದು. ಬಹಳಷ್ಟು ಸಂದರ್ಭಗಳಲ್ಲಿ ಮುಸ್ಲಿಮ್ ಯುವಕರು ಹಾಗೇ ಮಾಡಿರುವುದಿಲ್ಲ.

ಜಾತಿವಾದದ ಬೆಳವಣಿಗೆ ಕೂಡ ಇದೆ. ಮೇಲ್ನೋಟಕ್ಕೆ ಅಷ್ಟು ಕಾಣುವುದಿಲ್ಲ. ಒಳಗೊಳಗೆ ಇದೆ. ಎಸ್‌ಸಿ ವ್ಯಕ್ತಿ ಬಂದರೆ ಹೊರಗೆ. ಕೂಲಿ ಬಂದರೆ ಹೊರಗೆ. ಆದರೆ ಎಸ್‌ಸಿ ತಹಸೀಲ್ದಾರ್ ಬಂದರೆ ಒಳಗೆ ಇಂತಹದ್ದು ಇದೆ. ಕ್ಯಾತ್ಯಾಯಿನಿ ಅವರ್‌ಸಾ ಅಂತ ಅಲ್ಲಿ ಒಂದು ದೇವಿ ಮಂದಿರ. ಅಲ್ಲಿ ಮಡೆಸ್ನಾನ ಇದೆಯಂತೆ. ಈ ವರ್ಷ ... ಚಳುವಳಿ ಕೂಡ ನಡೆದಿದೆ.

ಜನಶಕ್ತಿ: ಉತ್ತರ ಕನ್ನಡ ಜಿಲ್ಲೆಯ ಜನರು ಎದುರಿಸುತ್ತಿರುವ ಗಂಭೀರ ಪ್ರಶ್ನೆ ಏನು ? ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಏನಾಗಬೇಕಿದೆ.?

ಜಿಲ್ಲೆಯ ಜೋಯಿಡಾದಂತಹ ಊರಿನಲ್ಲಿ ಕಾಲು ಸಂಕ(ಬೊಂಬು ಅಥವಾ ಮರಮುಟ್ಟಿನಿಂದ ಸ್ಥಳೀಯರೆ ನಿರ್ಮಿಸಿಕೊಂಡ ಕಿರು ಸೇತುವೆ) ದಂತಹದ್ದನ್ನು ದಾಟಿ (ನದಿ–ಹೊಳೆಯ)ಆಚೆ ಬದಿಗೆ ಹೋಗುವಂತಹ ಪರಿಸ್ಥಿತಿ ಇದೆ. ಡಾ. ಆರ್.ವಿ. ಭಂಡಾರಿಯವರು ಸಮ್ಮೇಳನದ ಅಧ್ಯಕ್ಷರಾಗಿದ್ದಾಗ ಇಂತಹ ಸಮಸ್ಯೆಗಳ ಬಗೆಗೆ ಹೇಳಿದ್ದರು. ಸಮಸ್ಯೆಗಳು ಈಗಲೂ ಹಾಗೇ ಇವೆ.

ಅಡವಿ ಜನರನ್ನು ಒಕ್ಕಲೆಬ್ಬಿಸುವುದು ಜೋಯಿಡಾದಲ್ಲಿ ತುಂಬಾ ನಡೆಯುತ್ತಿದೆ. ಆರು ದಶಕಗಳಿಂದ ಎಲ್ಲ ಪಕ್ಷಗಳನ್ನು ನೋಡುತ್ತಿದ್ದೇವೆ. ಎಡಪಂಥೀಯ ಪಕ್ಷದಿಂದ ಮಾತ್ರ ಬಡತನ ನಿವಾರಣೆ, ನೋವು ನಿವಾರಣೆ ಸಾಧ್ಯ. ಹಲವಾರು ರಾಜಕೀಯ ಪಕ್ಷಗಳನ್ನು ಜಾಲಾಡಿ ನೋಡಿದ್ದೇನೆ. ಆಡುವುದೊಂದು ಮಾಡುವುದೊಂದು. ಎಡಪಕ್ಷ ಬಂದರೆ ಜನರಿಗೆ ಒಳ್ಳೆಯದಾದೀತು ಎನ್ನುವುದು ನನ್ನ ನಂಬಿಕೆ. ಜನರನ್ನು ನಾವು ಎಚ್ಚರ ಮಾಡಬೇಕು. ಹೊಟ್ಟೆ ತುಂಬ ಉಂಡಿದ್ದೀರ ಎಂದು ಕೇಳಬೇಕು.

ಜನಶಕ್ತಿ: ನೀವು ಇಲ್ಲಿಯವರೆಗೆ ಎಷ್ಟು ಚುಟುಕುಗಳನ್ನು ಪ್ರಕಟಿಸಿದ್ದೀರಿ. ಪ್ರಕಟಿತ ಕೃತಿಗಳು ಯಾವುವು ?

ವಿಡಂಬಾರಿ: ಇಲ್ಲಿಯವರೆಗೆ ಸುಮಾರು 7,000 ಚುಟುಕುಗಳನ್ನು ಬರೆದಿದ್ದೇನೆ. ಹುಬ್ಬಳ್ಳಿಯ ಪಿ.ಎಂ. ಬಂಕಾಪುರ್ ಅವರು ... ‘ವಿಶಾಲ ಕರ್ನಾಟಕ’ ಪತ್ರಿಕೆಯ ‘ಮಸಿಗುಂಡು’

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕಾವೇರಿ ನೀರು ಹಂಚಿಕೆ ವಿವಾದ ಸುಪ್ರೀಂ ಕೋರ್ಟಿಗೆ ಪುನರ್ ಪರಿಶೀಲನಾ ಅರ್ಜಿ ಸರಿಯಾದ ಕ್ರಮ

ತಮಿಳುನಾಡಿನ ಬೇಸಿಗೆ ಬೆಳೆ ರಕ್ಷಣೆಗೆ 2.44 ಟಿ.ಎಂ.ಸಿ. ಕಾವೇರಿ ನೀರು ಬಿಡುಗಡೆ ಮಾಡಬೇಕೆಂದು ನೀಡಿರುವ ಆದೇಶವನ್ನು ಪುನರ್ ಪರಿಶೀಲಿಸುವಂತೆ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದು ಸರಿಯಾದ ಹಜ್ಜೆಯಾಗಿದೆ.

ತಮ್ಮ ರಾಜ್ಯದಲ್ಲಿ ಬೆಳೆದು ನಿಂತಿರುವ ಬತ್ತದ ಬೆಳೆಗೆ 9 ಟಿ.ಎಂ.ಸಿ. ನೀರು ಬೇಕೆಂದು ತಮಿಳುನಾಡು ಒತ್ತಾಯ ಮಾಡಿತ್ತು. ತಮಿಳುನಾಡಿನ ವಾದ ಸರಿಯಾಗಿಲ್ಲ ಎಂದು ರಾಜ್ಯದ ವಕೀಲರ ತಂಡ ಅಂಕಿಅಂಶಗಳ ಮೂಲಕ ನ್ಯಾಯಲಯಕ್ಕೆ ಮನವರಿಕೆ ಮಾಡಲು ಪಯತ್ನಿಸಿತ್ತು. ನ್ಯಾಯಾಲಯವು ಕೇಂದ್ರೀಯ ಜಲ ಆಯೋಗಕ್ಕೆ ಸೂಚನೆ ನೀಡಿ, ಕೂಡಲೇ ತಜ್ಞರನ್ನು ತಮಿಳುನಾಡಿಗೆ ಕಳುಹಿಸಿ, ಈಗ ಅಲ್ಲಿ ಬೆಳೆದು ನಿಂತಿರುವ ಬತ್ತ ಎಷ್ಟು, ಅದಕ್ಕೆ ಇನ್ನೂ ಎಷ್ಟು ನೀರು ಬೇಕು ಎಂಬುದನ್ನು ಲೆಕ್ಕಹಾಕಿ ವರದಿ ಮಾಡುವಂತೆ ಆದೇಶಿಸಿತು. ಕೇಂದ್ರೀಯ ಜಲ ಆಯೋಗದ ತಜ್ಞರು ತಮಿಳುನಾಡಿಗೆ ಭೇಟಿ ನೀಡಿ 24 ಗಂಟೆಗಳಲ್ಲಿ ತಮಿಳುನಾಡಿನ ವಾದ ಸರಿಯಾಗಿಲ್ಲ ಎಂಬುದನ್ನು ತಿಳಿಸಿದರಲ್ಲದೆ ಈಗ ಬೆಳೆದು ನಿಂತಿರುವ ಬೆಳೆಗೆ 2.44 ಟಿ.ಎಂ.ಸಿ. ನೀರು ಸಾಕು ಎಂದು ವರದಿ ನೀಡಿದರು. ಸುಪ್ರೀಂ ಕೋರ್ಟ್ ಈ ವರದಿಯನ್ನು ಒಪ್ಪಿಕೊಂಡು 2.44 ಟಿ.ಎಂ.ಸಿ. ನೀರನ್ನು ಮಾತ್ರ ತಮಿಳುನಾಡಿಗೆ ಬಿಡುವಂತೆ ಆದೇಶ ನೀಡಿತು.


ಸುಪ್ರೀಂ ಕೋರ್ಟ್ ತಮಿಳುನಾಡಿಗೆ 2.44 ಟಿ.ಎಂ.ಸಿ. ನೀರು ಬಿಡುಗಡೆ ಮಾಡುವಂತೆ ಇದೇ ಫೆಬ್ರವರಿ ತಿಂಗಳ 7 ರಂದು ಆದೇಶ ನೀಡಿದ ಮರುದಿನದಿಂದ ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೆ ಕೆ.ಆರ್.ಎಸ್. ನಿಂದ ನಿತ್ಯ 1,585 ಕ್ಯೂಸೆಕ್ಸ್ ಮತ್ತು ಕಬಿನಿಯಿಂದ 500 ಕ್ಯೂಸೆಕ್ಸ್ ನೀರು ಬಿಡುಗಡೆ ಮಾಡಲಾಗಿದೆ. ತಮಿಳುನಾಡಿಗೆ ಈ ಪ್ರಮಾಣದಲ್ಲಿ ನೀರು ಬಿಡುಗಡೆ ಮಾಡಿದ್ದು ರಾಜ್ಯಕ್ಕೆ ಬಗೆದ ದ್ರೋಹ ಎಂದು ಟೀಕಿಸುವುದು ಸರಿಯಲ್ಲ. ಸುಪ್ರೀಂ ಕೋರ್ಟ್ ಆದೇಶ ಮಾಡಿದ ಪ್ರಮಾಣದಲ್ಲಿ ಅಲ್ಲದಿದ್ದರೂ ಸಾಧ್ಯವಿರುವಷ್ಟು ನೀರನ್ನು ಬಿಡುಗಡೆ ಮಾಡಿ ಆದೇಶವನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದು ಸರಿಯಾದ ಕ್ರಮವಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ನ್ಯಾಯಾಂಗಕ್ಕೆ ಅತ್ಯುನ್ನತವಾದ ಸ್ಥಾನ ಇದೆ. ಅಂತರ್ ರಾಜ್ಯ ವಿವಾದಗಳು ತಲೆದೋರಿದಾಗ ನ್ಯಾಯಾಲಯದ ಆದೇಶಕ್ಕೆ ಎಲ್ಲರೂ ತಲೆಬಾಗಬೇಕಾಗುತ್ತದೆ.

ತಮಿಳುನಾಡಿನಲ್ಲಿ ಶೇ.50ರಷ್ಟು ಬತ್ತದ ಬೆಳೆ ಈಗಾಗಲೇ ಕೊಯ್ಲು ಮಾಡಲಾಗಿದೆ. ಇನ್ನೂ ಶೇ.40ರಷ್ಟು ಕೊಯ್ಲಿಗೆ ಸಿದ್ಧವಾಗಿದೆ. ಉಳಿದ ಬೆಳೆಗೆ ಮೆಟ್ಟೂರು ಜಲಾಶಯದಲ್ಲಿ ಸಂಗ್ರಹವಾಗಿರುವ 8.463 ಟಿ.ಎಂ.ಸಿ. ನೀರಿನಲ್ಲಿ ಒಂದು ಟಿ.ಎಂ.ಸಿ.ಗೂ ಹೆಚ್ಚು ನೀರನ್ನು ಬಳಕೆ ಮಾಡಿಕೊಳ್ಳಬಹುದಾಗಿದೆ. ತಮಿಳುನಾಡಿಗೆ 2.44 ಟಿ.ಎಂ.ಸಿ. ನೀರು ಬಿಡುಗಡೆ ಮಾಡುವಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶವನ್ನು ಪಾಲಿಸಿದರೆ ಕಾವೇರಿ ನದಿ ಪಾತ್ರದ ಪ್ರದೇಶಗಳಿಗೆ ಮುಖ್ಯವಾಗಿ ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಪೂರೈಕೆಗೆ ತೊಂದರೆ ಆಗುವುದನ್ನು ಸುಪ್ರಿಂ ಕೋರ್ಟಿಗೆ ಮನವರಿಕೆ ಮಾಡುವ ಕೆಲಸ ಆಗಬೇಕಾಗಿದೆ.

ರಾಜ್ಯದ ಕಬ್ಬಿನ ಬೆಳೆ, ಪರಿಸರ ರಕ್ಷಣೆ, ಕುಡಿಯುವ ನೀರಿನ ಪೂರೈಕೆಯನ್ನು ಒಳಗೊಂಡಂತೆ ಒಟ್ಟಾರೆ ಅಗತ್ಯಗಳನ್ನು ಪೂರೈಸಲು ಕನಿಷ್ಠ 24.25 ಟಿ.ಎಂ.ಸಿ. ನೀರು ಬೇಕಾಗಲಿದೆ. ಕಾವೇರಿ ಜಲಾಶಯಗಳಲ್ಲಿ ಜನವರಿ 31ರ ವರೆಗೆ ಸಂಗ್ರಹವಾಗಿದ್ದ ನೀರಿನ ಪ್ರಮಾಣ 14.27 ಟಿ.ಎಂ.ಸಿ. ಮೇ ಅಂತ್ಯದ ವರೆಗೆ 3.9 ಟಿ.ಎಂ.ಸಿ. ನೀರು ಹರಿದು ಬರಬಹುದು ಎಂದು ನೀರಿಕ್ಷಿಸಲಾಗಿದೆ. ಅದು ಸೇರಿದರೂ ಲಭ್ಯವಾಗುವ ಒಟ್ಟು ನೀರಿನ ಪ್ರಮಾಣ 18.17 ಟಿ.ಎಂ.ಸಿ. ಮಾತ್ರ, ಇನ್ನೂ 6.08 ಟಿ.ಎಂ.ಸಿ. ನೀರು ಕೊರತೆ ಬೀಳಲಿದೆ. ಸುಪ್ರೀಂ ಕೋರ್ಟ್ ಆದೇಶ ಸಂಪೂರ್ಣ ಪಾಲನೆ ಮಾಡಿ ತಮಿಳುನಾಡಿಗೆ 2.44 ಟಿ.ಎಂ.ಸಿ. ನೀರನ್ನು ಹರಿಸಿದರೆ ರಾಜ್ಯಕ್ಕೆ 8.52 ಟಿ.ಎಂ.ಸಿ.ಯಷ್ಟು ನೀರಿನ ಕೊರತೆ ಉಂಟಾಗಲಿದೆ. ಈ ಅಂಕಿಅಂಶಗಳ ಆಧಾರದಲ್ಲಿ ಸುಪ್ರಿಂ ಕೋರ್ಟಿಗೆ ರಾಜ್ಯದ ಅಹವಾಲುಗಳನ್ನು ಮನವರಿಕೆ ಮಾಡಲು ಸಾಧ್ಯವಾದರೆ ರಾಜ್ಯಕ್ಕೆ ನ್ಯಾಯ ಸಿಗದೆ ಇರಲಾರದು.

ತಮಿಳುನಾಡು ಸರ್ಕಾರವಾದರೂ ತನ್ನ ರೈತರ ಪರವಾಗಿ ವಾದಿಸುವುದನ್ನು ನಾವು ತಪ್ಪಾಗಿ ಪರಿಗಣಿಸಬೇಕಾಗಿಲ್ಲ. ಅದು ಅದರ ಕರ್ತವ್ಯವೂ ಹೌದು. ಯಾರಿಗೂ ನೂರಕ್ಕೆ ನೂರು ನ್ಯಾಯ ಸಿಗುವುದು ಅಸಾಧ್ಯ. ವಸ್ತುಸ್ಥಿತಿಯ ಆಧಾರದಲ್ಲಿ, ಸಂಕಷ್ಟವನ್ನು ಹಂಚಿಕೊಳ್ಳಲು ನ್ಯಾಯಾಲಯ ನೀಡುವ ತೀರ್ಪನ್ನು ಎರಡೂ ರಾಜ್ಯಗಳು ಪಾಲಿಸುವುದರಲ್ಲಿ ನಮ್ಮ ಒಕ್ಕೂಟದ ಹಿತ ಅಡಗಿದೆ.

ಲೋಕಾಯುಕ್ತರ ನೇಮಕವೇನೋ ಆಗಿದೆ. ಮುಂದೇನು?



ಅಂತೂ ಇಂತೂ ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ಕೊನೆಗೆ ಲೋಕಾಯುಕ್ತರ ನೇಮಕವಾಗಿದೆ. ನಿವೃತ್ತ ಮುಖ್ಯ ನ್ಯಾ.ವೈ.ಭಾಸ್ಕರರಾವ್ ರವರು ನೂತನ ಲೋಕಾಯುಕ್ತರಾಗಿ ನೇಮಕಗೊಂಡಿದ್ದಾರೆ, 2011 ರ ಸೆಪ್ಟಂಬರ್ 19ರಿಂದ ಈ ಸ್ಥಾನಕ್ಕೆ ನೇಮಕಾತಿ ಮಾಡದೇ ಹಾಗೇ ಖಾಲಿ ಇಡಲಾಗಿತ್ತು. ಇದರ ನೇಮಕಾತಿಯ ವಿಳಂಬದ ವಿಷಯವೇ ಕರ್ನಾಟಕದ ಬಿಜೆಪಿ ಪಕ್ಷದ ದುರಾಡಳಿತ, ಭ್ರಷ್ಟತೆ ಮತ್ತು ಸಂದರ್ಭಸಾಧಕ, ಪ್ರಜಾಪ್ರಭುತ್ವ ವಿರೋಧಿ ರಾಜಕಾರಣದ ಅತಿ ದೊಡ್ಡ ಕಥಾ ಸಂಪುಟವಾಗಿದೆ.

ಹಗರಣ, ಭ್ರಷ್ಟಾಚಾರಗಳು ಬಯಲಿಗೆ


ಹಿಂದಿದ್ದ ಲೋಕಾಯುಕ್ತರಾದ ನ್ಯಾ.ಸಂತೋಷ ಹೆಗಡೆ ಮತ್ತವರ ತಂಡ ರಾಜ್ಯದಲ್ಲಿ ಬಹು ದೊಡ್ಡ ಭೂ ಹಾಗೂ ಗಣಿ ಹಗರಣಗಳನ್ನು ಬಯಲಿಗೆಳೆಯುವ ಮೂಲಕ ದೇಶದ ಗಮನ ಸೆಳೆದರಲ್ಲದೇ ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ಅತೀ ಗೌರವ ತಂದರು. ಅಲ್ಲದೇ ಅದರ ಅಧಿಕಾರ ಮತ್ತು ಶಕ್ತಿಯನ್ನು ನಾಡಿನ ಹಿತಕ್ಕೆ ಬಳಸುವ ಹಾಗೂ ಭ್ರಷ್ಟಾಚಾರವನ್ನು ಜನರೆದುರು ಬಯಲಿಗೆಳೆದು ಎತ್ತಿ ತೋರಿಸುವಲ್ಲಿ ಒಂದು ಮಾದರಿ ಹಾದಿಯನ್ನು ಹಾಕಿ ಕೊಟ್ಟರು. ಹೀಗಾಗಿಯೇ ಬಿಜೆಪಿ. ಸರಕಾರದ ಮುಖ್ಯಮಂತ್ರಿಯನ್ನೂ ಒಳಗೊಂಡು ಹಲವಾರು ಪ್ರಮುಖ ಸಚಿವರು, ರಾಜ್ಯ ನಾಯಕರು ನಡೆಸಿದ ಭೂ ಡೀ ನೋಟಿಫಿಕೇಶನ್ ಹಗರಣಗಳು , ಅಲ್ಲೋಲ ಕಲ್ಲೋಲ ಸೃಷ್ಟಿಸಿ ದಕ್ಷಿಣ ಭಾರತದ ಬಿಜೆಪಿ ಸರಕಾರದ ಮೊದಲ ಮುಖ್ಯಮಂತ್ರಿ ಭಂಡತನದಲ್ಲಿ ಸ್ಥಾನದಲ್ಲಿ ಉಳಿಯುವ ಪ್ರಯತ್ನ ನಡೆಸಿದರೂ ಕೊನೆಗೆ ಅನಿವಾರ್ಯವಾಗಿ ರಾಜಿನಾಮೆ ಕೊಡಬೇಕಾಗಿ ಬಂದುದು ಅವರನ್ನೂ ಒಳಗೊಂಡು ಹಲವು ಸಚಿವರು ಜೈಲು ಪಾಲಾದುದು ಉಲ್ಲೇಖನೀಯ.

ಒತ್ತಡ ಮತ್ತು ಕುತಂತ್ರಗಳು

ಹೀಗಿರುವಾಗ ನ್ಯಾ. ಸಂತೋಷ ಹೆಗಡೆಯವರ ನಿವೃತ್ತಿ ನಂತರ ನ್ಯಾ. ಶಿವರಾಜ್ ಪಾಟೀಲ್ ರವರನ್ನು ನೇಮಿಸಲಾಗಿತ್ತು. ಅಕ್ರಮ ಗಣಿಗಾರಿಕೆಯ ವರದಿ ಹಿನ್ನೆಲೆಯಲ್ಲಿ ವರದಿ ಆಧರಿಸಿ ಅವರೆಲ್ಲರ ಮೇಲೆ ನಿಷ್ಠುರ ಕ್ರಮ ಜರುಗಿಸುವ ಗುರುತರವಾದ ಹೊಣೆಯಿತ್ತು. ಆದರೆ ಅವರು ಅಕ್ರಮ ನಿವೇಶನ ಪಡೆದಿದ್ದಾರೆಂಬ ಆರೋಪದ ವಿವಾದದಲ್ಲಿ ರಾಜೀನಾಮೆ ನೀಡಬೇಕಾಯಿತು. ಆ ಬಳಿಕ ಕೇರಳ ಹೈಕೋರ್ಟಿನ ಮುಖ್ಯ ನ್ಯಾ. ಎಸ್.ಆರ್.ಬನ್ನೂರಮಠ ರವರನ್ನು ನೇಮಿಸಲು ರಾಜ್ಯ ಸರಕಾರ ಬಯಸಿತು. ಆದರೆ ಅವರೂ ಕಾನೂನುಬಾಹೀರವಾಗಿ ನಿವೇಶನ ಪಡೆದಿದ್ದಾರೆಂಬ ತೀವ್ರ ಆರೋಪ ಬಂದಿತಲ್ಲದೇ ಅವರು ಹಿಂದಿನ ಮುಖ್ಯಮಂತ್ರಿಗಳ ಆಪ್ತರು ಎಂಬ ಮಾತುಗಳೂ ಕೇಳಿದವು. ನಾಡಿನ ಚಿಂತಕರು ಸ್ಥಾನ ನಿರಾಕರಿಸುವಂತೆ ಬಹಿರಂಗ ಪತ್ರವನ್ನೂ ಬರೆದರು. ಇಂತಹ ವಿವಾದಗಳು ಇದ್ದುದರಿಂದಲೂ ರಾಜ್ಯಪಾಲರು ಸರಕಾರದ ಶಿಫಾರಸನ್ನು ಒಪ್ಪಿರಲಿಲ್ಲ. ಹೀಗಾಗಿ ಅವರು ಹುದ್ದೆಯ ಆಹ್ವಾನವನ್ನು ಒಪ್ಪಿಕೊಳ್ಳಲಿಲ್ಲ. ಅಲ್ಲಿಂದ ಈ ಹುದ್ದೆಗೆ ನೇಮಕಾತಿಯಾಗದೇ ಖಾಲಿಯಾಗೇ ಉಳಿದುರಲ್ಲಿ ಬಿಜೆಪಿಯ ಕುತಂತ್ರವೇ ಪ್ರಧಾನ. ಇಲ್ಲವಾದಲ್ಲಿ ಎಂದೋ ನೇಮಕ ನಡೆದು ಹೋಗುತ್ತಿತ್ತು.

ಈ ಹುದ್ದೆಗೆ ಯಾರನ್ನೂ ನೇಮಿಸಲೇಬಾರದೆಂದೂ, ಅದು ಹಾಗೇ ಖಾಲಿಯಾಗಿಯೇ ಉಳಿಯಬೇಕೆಂದು ಆಡಳಿತರೂಢ ಬಿಜೆಪಿಯು ಶತಾಯಗತಾಯ ಪ್ರಯತ್ನ ನಡೆಸುತ್ತಲೇ ಬಂದಿತು. ಮಾತ್ರವಲ್ಲ, ಲೋಕಾಯುಕ್ತ ಸ್ಥಾನವನ್ನು ದುರ್ಬಳಕೆ ಮಾಡಿ ತಮ್ಮ ಮೇಲಿನ ಎಲ್ಲಾ ಭ್ರಷ್ಟಾಚಾರದ ಹಗರಣಗಳಿಂದ ಖುಲಾಸೆಯಾಗುವ ಹಲವಾರು ಹಂಚಿಕೆಗಳನ್ನು ನಡೆಸಿತು. ಕೊನೆಗೆ ಯಾರೂ ನೇಮಕಗೊಳ್ಳದೇ ಖಾಲಿಯಾಗುಳಿದಾದರೂ ಕಾಲ ತಳ್ಳುವ ಪ್ರಯತ್ನವನ್ನು ಬಿಟ್ಟೂ ಬಿಡದೇ ನಡೆಸಿತು. ಬೇಕೆಂದೇ ಲೋಕಾಯುಕ್ತರ ನೇಮಕಾತಿ ನಿಯಮಗಳ ಬಗ್ಗೆ ಸುಪ್ರಿಂ ಕೋರ್ಟ್‌ನ ಅಭಿಪ್ರಾಯ ಕೇಳುವ ನೆಪದಲ್ಲಿ ಕಾಲ ವಿಳಂಬದ ತಂತ್ರವನ್ನು ಅನುಸರಿಸಿತು. ಈ ಪ್ರಯತ್ನಗಳು ಬಿಜೆಪಿಯೊಳಗಿನ ತೀವ್ರತರ ಕಿತ್ತಾಟ, ಮುಖ್ಯಮಂತ್ರಿಗಳ ಬದಲಾವಣೆ, ಪಕ್ಷದ ವಿಭಜನೆಗೆ ಒಂದು ಕಾರಣವಾಗುವ ಮಟ್ಟಕ್ಕೆ ಹೋದುದನ್ನು ರಾಜ್ಯದ ಜನತೆ ಕಂಡಿದ್ದಾರೆ.

ವಿಚಿತ್ರ ಹಾಗೂ ವಿಶೇಷವೆಂದರೆ ಕಾಂಗ್ರೆಸ್ .ಜೆಡಿಎಸ್ ಒಳಗೊಂಡು ಬಹುತೇಕ ವಿರೋಧ ಪಕ್ಷಗಳಿಗೂ ಲೋಕಾಯುಕ್ತರ ನೇಮಕದಲ್ಲಿ ನಿರಾಸಕ್ತಿ ಹೊಂದಿದ್ದು. ಕಾರಣ ಅವರೂ ಇಂತಹ ಹಲವು ಹಗರಣಗಳಲ್ಲಿ ಭಾಗಿಯಾಗಿರುವುದು! ಆದ್ದರಿಂದಲೇ ಲೋಕಾಯುಕ್ತ ಸಂಸ್ಥೆಗೆ ಹೆಚ್ಚಿನ ಅಧಿಕಾರ ನೀಡಿ



ಅದನ್ನು ಬಲ ಪಡಿಸಬೇಕೆಂಬ ಕೂಗು ಜನತೆಯಿಂದ ಕೇಳುತ್ತಿರುವಾಗಲೇ ಇಂತಹ ಸಂಸ್ಥೆಯನ್ನು ದುರ್ಬಲಗೊಳಿಸುತ್ತಾ ಕೊನೆಗೆ ಮುಚ್ಚಿದರೂ ಚಿಂತೆಯಿಲ್ಲ ಎನ್ನುವವರೆಗೆ ಹೋದುದು ರಾಜ್ಯದ ದುರಂತವೇ ಆಗಿದೆ. ಆದ್ದರಿಂದ ಕಳ್ಳರಿಗೆ ಬೇಕಿಲ್ಲ ಕಾವಲು ನಾಯಿ ಅನ್ನೋಣವೇ? ಆದರೆ ಜನತೆಗೆ ಅದು ಬೇಕು.

ಪುಟ 4 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

"ಪಂಕ್ತಿಬೇಧ ಮತ್ತು ಮಡೆಸ್ನಾನ ಪದ್ಧತಿಗಳ ಆಚರಣೆಯು ಮಾನವ ಘನತೆಗೆ ಕಳಂಕ"


ಸಹಿ ಸಂಗ್ರಹಣಾ ಆಂದೋಲನ ಉದ್ಘಾಟಿಸಿದ ಡಾ.ಎಂ.ಎಂ.ಕಲಬುರ್ಗಿ ಖಂಡನೆ

ಪಂಕ್ತಿಬೇಧ ಮತ್ತು ಮಡೆಸ್ನಾನ ಪದ್ಧತಿಗಳ ಆಚರಣೆಯು ಮಾನವ **ಘನತೆಗೆ ಕಳಂಕ** ತರುವಂತಹುದು. ಇಂತಹ ಜಾತಿ ತಾರತಮ್ಯದ ಪದ್ಧತಿಗಳನ್ನು ಸರಕಾರ ನಿಲ್ಲಿಸಬೇಕು ಎಂದು ಖ್ಯಾತ ಸಂಶೋಧಕ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ.ಎಂ.ಎಂ.ಕಲಬುರ್ಗಿಯವರು ಒತ್ತಾಯಿಸಿದರು. ಬಿಜಾಪುರದಲ್ಲಿ ನಡೆದ 78 ನೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಫೆಬ್ರವರಿ 10 ರಂದು ಸಿಪಿಐ(ಎಂ) ಹಾಗೂ ಪ್ರಗತಿಪರ ಸಂಘಟನೆಗಳು, ಸಾಹಿತಿಗಳು, ಆಯೋಜಿಸಿದ ಪಂಕ್ತಿಬೇಧ ಮತ್ತು ಮಡೆಸ್ನಾನ ಪದ್ಧತಿಗಳನ್ನು ನಿಷೇಧಿಸುವಂತೆ ರಾಜ್ಯ ಸರಕಾರವನ್ನು ಆಗ್ರಹಿಸುವ ಮನವಿ ಪತ್ರಕ್ಕೆ ಸಹಿ ಸಂಗ್ರಹಣಾ ಆಂದೋಲನವನ್ನು ಉದ್ಘಾಟಿಸಿ ಮಾತನಾಡುತ್ತಾ ಅವರು ಈ ರೀತಿ ಆಗ್ರಹಿಸಿದರು.

'ಮಾನವ ಕುಲಂ ತಾನೊಂದೇ ವಲಂ' ಎಂಬ ಪರಂಪೆಯಲ್ಲಿ ಬೆಳೆದಿರುವ ಕರ್ನಾಟಕದ ಜನತೆ ಇಂತಹ ಪದ್ಧತಿಗಳನ್ನು ಧಿಕ್ಕರಿಸಬೇಕು. ಇದಕ್ಕಾಗಿ ನಡೆವ ಎಲ್ಲಾ ಪ್ರಯತ್ನಗಳನ್ನು ಹೃದಯಪೂರ್ವಕವಾಗಿ ಬೆಂಬಲಿಸುತ್ತೇನೆ ಎಂದು ಆಂದೋಲನಕ್ಕೆ ಶುಭ ಹಾರೈಸಿದರು.

ಈ ಆಂದೋಲನದ ಬಗ್ಗೆ ವಿವರಿಸಿ ಮಾತನಾಡಿದ ಜಿ.ಎನ್.ನಾಗರಾಜ್ ರವರು ಪಂಕ್ತಿಬೇಧವು ಮಡೆಸ್ನಾನಕ್ಕೆ ಮೂಲವಾಗಿದೆ. ಮಾನವರನ್ನು ಮೇಲು ಕೀಳು ಎಂದು ವಿಭಜಿಸುವ ಈ ಪದ್ಧತಿಯು ರಾಜ್ಯದಲ್ಲಿ ಎಲ್ಲೇ ಆಚರಣೆಯಲ್ಲಿರಲಿ ಅದನ್ನು ನಿಷೇಧಿಸಬೇಕು. ಈ ಮೂಲಕ ಸರಕಾರ ತನ್ನ ಸಂವಿಧಾನಿಕ ಕರ್ತವ್ಯವನ್ನು ನಿರ್ವಹಿಸಬೇಕು ಎಂದರು. ನಮ್ಮಲ್ಲಿ ಜಾತಿ ಅಸಮಾನತೆ, ಮೌಢ್ಯತೆಯನ್ನು ವಿರೋಧಿಸಿದ ದೊಡ್ಡ ಪರಂಪರೆಯೇ ಇದೆ. ಶರಣರು, ದಾಸರು, ದಾರ್ಶನಿಕರು, ಸಮಾಜ ಬದಲಾವಣೆಯ ಹೋರಾಟಗಾರರು ಇಂತಹ ಅನಿಷ್ಟಗಳ ವಿರುದ್ಧ ಧ್ವನಿ ಎತ್ತಿರುವುದನ್ನು ಉಲ್ಲೇಖಿಸಿ ಈ ಪದ್ಧತಿ ತೊಲಗಲಿ ಎಂದರು.

ಅಸಮಾನತೆ, ಜಾತಿ ತಾರತಮ್ಯಗಳನ್ನು ಹಾಗೂ ಮೌಢ್ಯತೆಗಳನ್ನು ಬೆಳೆಸುವ ಅರ್ಥಹೀನ ಆಚರಣೆಗಳನ್ನು ಅವರವರ ವೈಯುಕ್ತಿಕ ನಂಬಿಕೆ ಎಂಬ ಹೆಸರಿನಲ್ಲಿ ರಕ್ಷಿಸಿ ಮುಂದುವರಿಸಲು ಹವಣಿಸಲಾಗುತ್ತಿದೆ. ಇದಕ್ಕೆ ಕೆಳವರ್ಗದ ಜನತೆಯನ್ನೇ ಬಳಸಲಾಗುತ್ತಿದೆ. ಅದನ್ನು ಪ್ರಶ್ನಿಸಿದವರನ್ನು ದಮನಿಸಲು ನಡೆಸಿದ ಪ್ರಯತ್ನಗಳು ಖಂಡನೀಯ. ಸರಕಾರ್ಧದ ಸಮ್ಮತಿಯನ್ನು ಪ್ರತಿಭಟಿಸಿ ರಾಜ್ಯದಾದ್ಯಂತ ಹೋರಾಟವನ್ನು ನಡೆಸಲಾಗುತ್ತಿದೆ. ಜಿಲ್ಲಾ ಮಟ್ಟದ ಸಮಾವೇಶಗಳು ಹಾಗೂ ರಾಜ್ಯ ಮಟ್ಟದ ಸಮಾವೇಶ ನಡೆಸಿ ಆಂದೋಲನವನ್ನು ವ್ಯಾಪಕಗೊಳಿಸಲಾಗುವುದು. ಇದರಲ್ಲಿ ನಾಡಿನ ಎಲ್ಲಾ ಪ್ರಗತಿಪರರು ಒಟ್ಟಿಗೆ ಸೇರುತ್ತಿರುವುದು ಮಹತ್ವದ ಬೆಳವಣಿಗೆ, ಇದಕ್ಕೆ ಸಮಾನತೆ, ಮಾನವನ ಘನತೆಯನ್ನು ಬಯಸುವವರೆಲ್ಲಾ ಬೆಂಬಲಿಸಿ ಚಳುವಳಿಯಲ್ಲಿ ತೊಡಗಬೇಕೆಂದು ಎಸ್.ವೈ.ಗುರುಶಾಂತ್ ವಿನಂತಿಸಿದರು.



ಈ ಕಾರ್ಯಕ್ರಮದಲ್ಲಿ ಕವಿ ಡಾ.ಕಾಶಿನಾಥ ಅಂಬಲಗೆ, ಬಂಡಾಯ ಸಾಹಿತಿ ಶಂಕರ ಕಟಗಿ, ಡಾ.ಪ್ರಭು ಖಾನಾಪುರೆ, ಖ್ಯಾತ ಬರಹಗಾರ್ತಿ, ಕರ್ನಾಟಕ ವೈದ್ಯ ಪರಿಷತ್‌ನ ರಾಜ್ಯ ಕಾರ್ಯದರ್ಶಿ ಡಾ.ವಸುಂಧರಾ ಭೂಪತಿ, ಚಿಂತಕಿ ಡಾ.ಮೀನಾಕ್ಷಿ ಬಾಳಿ, ಕೆ.ನೀಲಾ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಭೀಮಶಿ ಕಲಾದಗಿ, ಅಣ್ಣಾರಾಯ ಈಳಗೇರಾ, ಪತ್ರಕರ್ತ ಸನತ್‌ಕುಮಾರ್ ಬೆಳಗಲಿ, ಮಹಿಳಾ ನಾಯಕಿ ಸುರೇಖಾ ರಜಪೂತ, ಡಿವೈಎಫ್ಐನ ಸೋಮಪ್ಪ ಆಯಟ್ಟಿ, ಗೋಪಾಲ ಹತ್ತರಗಾ, ಬಿಜೆವಿಎ[ಸ್]ನ ಎನ್.ಪ್ರಭಾ, ನೌಕರರ ಒಕ್ಕೂಟದ ಸುರೇ[ಶ್] ಅಲ್ಲದೇ ವಿವಿದೆಡೆಗಳಿಂದ ಬಂದಿ[ದ್ದ] ಬರಹಗಾರರು, ಸಾಮಾಜಿಕ ಕಾರ್ಯಕರ್ತ[ರು] ಮುಂತಾದವರು ಭಾಗವಹಿಸಿ ಸಹಿ ಹಾಕಿದ[ರು].

ಈ ಮನವಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ[ದ] ಮಾಜಿ ಅಧ್ಯಕ್ಷ, ನಾಡೋಜ ಪ್ರೊ.ಚಂದ್ರಶೇಖ[ರ] ಪಾಟೀಲ್, ಮಾಜಿ ಸಚಿ[ವೆ] ಬಿ.ಟಿ.ಲಲಿತಾನಾಯಕ್, ರಮಜಾನ್ ದರ್ಗಾ[,] ಹೊಸತು ಪತ್ರಿಕೆಯ ಸಂಪಾದ[ಕ] ಡಾ.ಸಿದ್ಧನಗೌಡ ಪಾಟೀಲ್, ಪ್ರಕಾ[ಶ್] ಸಿ.ಚನ್ನಬಸಣ್ಣ, ಕವಿ ಹುರುಕ[ಡ್ಲಿ] ಶಿವಕುಮಾರ್, ಚನ್ನಬಸಪ್ಪ ಹುಲಿಕ[...] ಮುಂತಾದವರು ಸೇರಿದಂತೆ ನೂರಾ[ರು] ಬರಹಗಾರರು, ಸಾಹಿ[ತ್ಯ] ಅಭಿಮಾನಿಗಳು, ಮಾಧ್ಯಮಗಳ ಮಿತ್ರ[ರು] ಸಹಿ ಹಾಕಿದ್ದಾರೆ.

ಪ್ರಧಾನ ವೇದಿಕೆಯ ಪರಿಸರದ[ಲ್ಲಿ] ಅತ್ಯಂತ ಸರಳವಾಗಿ ನಡೆದ[...] ಕಾರ್ಯಕ್ರಮವನ್ನು ಸಮುದಾಯ[...] ಸಾಂಸ್ಕೃತಿಕ ಸಂಘಟನೆಯ ಬಿಜಾಪು[ರ] ಸಂಚಾಲಕ ಲಕ್ಷ್ಮಣ ಹಂದ್ರಾಳ ನಿರ್ವಹಿಸಿದರು[.] ನಂತರದಲ್ಲಿ ಆ ಪರಿಸರದಲ್ಲಿದ್ದ 'ಪುಸ್ತಕಮಾ[...] ಪುಸ್ತಕ ಮಳಿಗೆಯಲ್ಲಿ ಸಹಿ ಸಂಗ್ರ[ಹ] ಆಂದೋಲನ ಮುಂದುವರಿಯಿತು. ಪಂಕ್ತಿಬೇ[ಧ] ಮತ್ತು ಮಡೆಸ್ನಾನದ ವಿಷಯ ವರ್ತಮಾನ[...] ತಲ್ಲಣಗಳು ಸಮಾನಾಂತರ ಗೋಷ್ಠಿಯ[ಲ್ಲಿ] ಪ್ರತಿಧ್ವನಿಸಿತು. ಇದು ಜನತೆಯ ಗಮ[ನ] ಸೆಳೆಯಿತು, ಕೆಲವರು ಚರ್ಚೆಗಿಳಿದಿದ್ದು ವಿಶೇ[ಷ].

– ಸೋಮಪ್ಪ ಆಯ[ಟ್ಟಿ]

ಈ ವಾರ.........

ಪುಟ 3 ರಿಂದ

ಮುಂದಿರುವ ಸವಾಲುಗಳು

ಇನ್ನೇನು ಮೂರು ತಿಂಗಳಲ್ಲೇ ವಿಧಾನಸಭೆಗೆ ಚುನಾವಣೆಗಳು ನಡೆಯಲಿವೆ. ಹೊಸ ಸರಕಾರವನ್ನು ಜನತೆ ಆರಿಸಲಿದ್ದಾರೆ. ಈ ಎದುರಿನಲ್ಲಿ ಲೋಕಾಯುಕ್ತರ ನೇಮಕವಾಗಿದೆ. ಇಲ್ಲಿ ಸಾರ್ವಜನಿಕ ಒತ್ತಡದ ಹಿನ್ನೆಲೆಯಿದೆ. ದೇಶದ ತುಂಬಾ ಕಾಂಗ್ರೆಸ್ ನ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಬಿಜೆಪಿ ತನ್ನ ಆಡಳಿತದ ರಾಜ್ಯದಲ್ಲಿ ಗುಜರಾತ್ ನ ಮೋದಿ ಮಾದರಿಯಂತೆ ಲೋಕಾಯುಕ್ತರನ್ನೇ ನೇಮಿಸದೇ ಮೋಸದಾಟ ಆಡುವ ಬಗ್ಗೆ ವ್ಯಾಪಕ ಟೀಕೆಗಳು ವ್ಯಕ್ತವಾಗಿರುವ ಹಿನ್ನೆಲೆಯೂ ಇದೆ. ಆದ್ದರಿಂದ ಸಾಕಷ್ಟು ವಿಳಂಬವಾದರೂ, ಇದಕ್ಕೆ ಕೆಲವರಿಂದ ವಿರೋಧವಿದ್ದರೂ ನೇಮಕಾತಿ ಸ್ವಾಗತಾರ್ಹವಾಗಿದೆ. ಇಂದಿನ ಒಟ್ಟು ಸನ್ನಿವೇಶ, ಸೂಕ್ಷ್ಮಗಳನ್ನು ಗಮನದಲ್ಲಿರಿಸಿ ಲೋಕಾಯುಕ್ತರು ನಿಷ್ಠುರ, ನಿಷ್ಪಕ್ಷಪಾತವಾದ ಹೆಜ್ಜೆ ಇಡಬೇಕು. ಯಾವುದರಲ್ಲಿಯೂ ರಾಜಿ ಮಾಡಿಕೊಳ್ಳಬಾರದು. ಅವರ ಮುಂದೆ ಲಕ್ಷಾಂತರ ಕೋಟಿಗಳ ಗಣಿ ಹಗರಣದ ವರದಿ ಕ್ರಮಕ್ಕಾಗಿ ಕಾದು ಕುಳಿತಿದೆ. ಹಲವಾರು ಭೂ ಹಗರಣಗಳು ಇವೆ. ಇದರಲ್ಲಿ ಭಾರೀ ತಿಮಿಂಗಲಗಳೇ ಇವೆ. ಆದ್ದರಿಂದ ನಿಷ್ಠುರ ಕ್ರಮಗಳು ಮತ್ತು ಅಂತಹ ನಡೆಯ ಮೂಲಕ ಲೋಕಾಯುಕ್ತರ ಘನತೆಯನ್ನು ಎತ್ತಿ ಹಿಡಿಯಬೇಕು. ನಾಡಿಗೆ, ಜನತೆಗೆ ನ್ಯಾಯ ದೊರೆಯುವಂತೆ ಸಂವಿಧಾನ ಬದ್ಧತೆಯಿಂದ ಕಾರ್ಯವೆಸಗಬೇಕು. ರಾಜ್ಯದ ಹಾಗೂ ದೇಶದ ಜನತೆ ಬಹು ಕಾತುರ ಮತ್ತು ಎಚ್ಚರದಿಂದ ಅವರ ನಡೆಯನ್ನು ಕಾದು ನೋಡುತ್ತಿದ್ದಾರೆ ಎಂಬುದು ಎಲ್ಲರಿಗೂ ನೆನಪಿರಲಿ.

ಆದರೆ ಅದೇ ಹೊತ್ತಿನಲ್ಲಿ ಕಾನೂನು ಬಾಹೀರವಾಗಿ ನಿವೇಶನ ಪಡೆದಿರುವ ಆರೋಪವೂ ಕೇಳಿರುವುದು ಮುಂದಿನ ಪ್ರಕ್ರಿಯೆಯ ಬಗ್ಗೆ ಹಲವು ಅನುಮಾನ ಹುಟ್ಟಿಸುವಂತಿದೆ. ಇಂತಹ ಆರೋಪಗಳ ನಡುವೆ ಒತ್ತಡಗಳಿಗೆ ಈಡಾಗದೇ ಕೆಲಸ ಮಾಡಬೇಕಾದ ಅನಿವಾರ್ಯತೆಯೂ ಇದೆ ಎಂಬುದನ್ನು ಸಹ ಮರೆಯಬಾರದು.

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು : ಮೊದಲ ಹಂತದಲ್ಲೇ ಸೋಲೊಪ್ಪಿಕೊಂಡ ಆಡಳಿತ, ವಿರೋಧ ಪಕ್ಷಗಳು

ತೀವ್ರ ಹಗ್ಗ ಜಗ್ಗಾಟ, ಸರಕಾರ, ವಿರೋಧ ಪಕ್ಷ ಮತ್ತು ಚುನಾವಣಾ ಆಯೋಗದ ನಡುವೆ ಜಟಾಪಟಿ ನಡೆದ ಬಳಿಕ ನ್ಯಾಯಾಲಯದ ಸ್ಪಷ್ಟ ನಿರ್ದೇಶನದ ಹಿನ್ನೆಲೆಯಲ್ಲಿ ಮಾರ್ಚ 7ರಂದು ಮತದಾನಕ್ಕೆ ನಿಗದಿ ಪಡಿಸಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು ಘೋಷಿತವಾಗಿದೆ. ಇವುಗಳನ್ನು ಮುಂದೂಡಲು ಪ್ರಯತ್ನಿಸಿದವರಿಗೆ ಆಘಾತವಾಗಿದೆ. ಆದರೆ ವೇಳಾ ಪಟ್ಟಿ ಪ್ರಕಟವಾಗಿರುವುದು ಚುನಾವಣಾ ಹೋರಾಟವನ್ನು ಎಲ್ಲರಿಗೂ ಅನಿವಾರ್ಯವಾಗಿಸಿದೆ.

ಜನತೆಯ ಕೈಗೆ ಅಧಿಕಾರ ನೀಡುವಲ್ಲಿ , ಅಧಿಕಾರದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದಲ್ಲಿ ಈ ಸಂಸ್ಥೆಗಳ ಪಾತ್ರ ಮಹತ್ವವಿದೆ. ಅವಧಿ ಮುಗಿಯುತ್ತಿರುವಂತೆ ಸಕಾಲದಲ್ಲಿ ಚುನಾವಣೆಗಳನ್ನು ನಡೆಸಲು ಸರಕಾರ ಕ್ರಮ ವಹಿಸದೇ ಹಲವಾರು ಒಳ ತಂತ್ರಗಳ ಮೂಲಕ ವಿಳಂಬಿಸಿದ್ದು ಅಕ್ಷಮ್ಯ ಮತ್ತು ಬಿಜೆಪಿಯ ಪ್ರಜಾಪ್ರಭುತ್ವ ವಿರೋಧಿ ನಿಲುವಿಗೆ ಮತ್ತೊಂದು ಉದಾಹರಣೆ.. ತನ್ನ ದುರಾಡಳಿತದಿಂದ ಈಗಾಗಲೇ ಜನತೆಯ ಆಕ್ರೋಶಕ್ಕೆ ಈಡಾಗಿರುವ ಬಿಜೆಪಿಗೆ ಸೋಲುವ ಭಯವಿದೆ ಮತ್ತು ಈ ಫಲಿತಾಂಶ ಮುಂಬರುವ ವಿಧಾನಸಭಾ ಚುನಾವಣೆಯಲ್ಲೂ ಪ್ರಭಾವಿಸುವ ಆತಂಕವಿದೆ. ಹೀಗಾಗಿಯೇ ಮೀಸಲಾತಿ ಪಟ್ಟಿಯನ್ನು ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್‌ಗ[ಳ] ಸೂಚನೆಯ ಬಳಿಕವೂ ನೀಡದೇ ತನ್ನ ರಕ್ಷಣೆ[...] ವಾದ ಹೂಡುತ್ತಲೇ ಇತ್ತು. ಅದರ ಹತಾಶೆಯ[...] ಈ ಪ್ರಯತ್ನ ಫಲ ನೀಡಲಿಲ್ಲ. ಇಲ್ಲಿಯೂ [...] ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಕೊ[...] ಗಳಿಗೆಯವರೆಗೂ ಆಡಳಿತ ಪಕ್ಷದ ಆಟದ[...] ಕೈ ಕಲೆಸಿದ್ದು ರಾಜಕೀಯ ದಿವಾಳಿತನದ ಸೂಚ[...] ಅದರ ಜನ ವಿರೋದಿ ನೀತಿಗಳಿಗೆ ತಕ್ಕ ಉತ್ತ[ರ] ಸಿಗಬಹುದೆಂಬ ಭಯ! ಒಂದು ರೀತಿಯ[ಲ್ಲಿ] ಆರಂಭದಲ್ಲೇ ಸೋಲೊಪ್ಪಿಕೊಂಡಂತಾಗಿದೆ.

ಇಲ್ಲಿ ಗಮನಿಸಬೇಕಾದ್ದು ಎಡ ಪಕ್ಷಗ[ಳು] ಆಡಳಿತವಿರುವ , ಇದ್ದ ರಾಜ್ಯಗಳಲ್ಲಿ ಸಕಾಲದ[ಲ್ಲಿ] ಯಾವುದೇ ಗೊಂದಲ, ಗೋಜುಗಳಿಲ್ಲದ[ೆ] ಚುನಾವಣೆಗಳು ನಡೆಯುತ್ತವೆ, ನಡೆದಿ[ವೆ] ಎಂಬುದು.

ಇಂತಹ ರಾಜಕೀಯ ಸನ್ನಿವೇಶದಲ್ಲಿ ಜನ[ತೆ] ಸಂಕಷ್ಟಗಳ ಸೃಷ್ಟಿಕರ್ತರಿಗೆ ತಕ್ಕ ಉತ್ತ[ರ] ಹೇಳಬೇಕಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗ[ಳ] ದುರಾಡಳಿತ ,ಜನವಿರೋಧಿ ನೀತಿಗಳ[...] ರಾಜಕೀಯವಾಗಿ ಉತ್ತರಿಸಬೇ[ಕು] ಎಡಶಕ್ತಿಗಳನ್ನು ಹೆಚ್ಚಿನ ಸಂಖ್ಯೆಯ[ಲ್ಲಿ] ಗೆಲ್ಲಿಸಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಜೆಟ್ ಅಲ್ಲ ; ಕೊನೆಗಾಲದಲ್ಲಿರುವ ಬಿಜೆಪಿ ಸರ್ಕಾರದ ಚುನಾವಣಾ ಪ್ರಣಾಳಿಕೆ

ಜಿ.ವಿ. ಶ್ರೀರಾಮರೆಡ್ಡಿ

ವಸಾನದ ಅಂಚಿನಲ್ಲಿರುವ ಬಿಜೆಪಿ ಸರ್ಕಾರ ನ್ನ ಅನೈತಿಕ ಬಜೆಟ್‌ನ್ನು ಫೆಬ್ರವರಿ 8 ರಂದು ಸನ ಸಭೆಯಲ್ಲಿ ಮಂಡಿಸಿದೆ. ದೇಶದ ಮತ್ತು ಜ್ಯದ ಅರ್ಥವ್ಯವಸ್ಥೆಯ ಬಗ್ಗೆ ಕನಿಷ್ಠ ನವಿರುವ ಯಾರೂ ಕೂಡ ಇಂತಹ ರ್ಭದಲ್ಲಿ ಬಜೆಟ್ ಮಂಡಿಸುವುದಿಲ್ಲ. ಈ ಜೆಟ್ ಮಂಡನೆ ಪ್ರಜಾಪ್ರಭುತ್ವ ವಿರೋಧಿ ಮತ್ತು ಅನೈತಿಕ. ಎರಡು ಕಾರಣಗಳಿಗಾಗಿ. ಂದು ಈ ಸರ್ಕಾರಕ್ಕೆ ಸ್ಪಷ್ಟ ಬಹುಮತವಿಲ್ಲ. ರಡು ಇದರ ಅವಧಿ ಇನ್ನು ಕೇವಲ ಮೂರು ಂಗಳು ಮಾತ್ರ. ತನ್ನ ಅಧಿಕಾರ ವ್ಯಾಪ್ತಿಯನ್ನು ೀರಿ ಒಂದು ರಾಜ್ಯದ ಆರ್ಥಿಕ ಭವಿಷ್ಯವನ್ನು ೂಪಿಸುವ ಅಧಿಕಾರ ಈ ಸರ್ಕಾರಕ್ಕೆ ಇಲ್ಲ. ದರಿಂದಾಗಿ ಇದು ಅನೈತಿಕ. ಹೆಚ್ಚೆಂದರೆ 6 ಂಗಳುಗಳಿಗೆ ಲೇಖಾನುದಾನವನ್ನು ಪಡೆಯ ಹುದಿತ್ತು. ಅದು ಬಿಟ್ಟು ಪೂರ್ಣ ವರ್ಷದ ವಧಿಗೆ ಅಯ-ವ್ಯಯವನ್ನು ಮಂಡಿಸಿರುವುದು ಜಾಪ್ರಭುತ್ವ ವಿರೋಧಿ ಕ್ರಮ.

ಜೆಟ್ ಎಂದರೆ...

ಂದು ರಾಜ್ಯದ ಅಯ-ವ್ಯಯವೆಂದರೆ ಆ ಜ್ಯದ ಆರ್ಥಿಕ ಕಾರ್ಯಕ್ರಮ. ಬರೀ ದಾಯ ಮತ್ತು ವೆಚ್ಚಗಳನ್ನು ಪಟ್ಟಿ ಾಡುವುದಲ್ಲ. ಯಾಕೆಂದರೆ ರಾಜ್ಯದ ವಾರ್ಷಿಕ ಯವ್ಯಯವು ರಾಜ್ಯದ ಸಮಗ್ರ ಅಭಿವೃದ್ಧಿಯ ರ್ಯಕ್ರಮವಾಗಿರಬೇಕು. ಆಗ ರಾಜ್ಯದ ರ್ಥಿಕ ಸ್ಥಿತಿ ಅಭಿವೃದ್ಧಿಯಾಗುತ್ತದೆ ಮತ್ತು ಜನರ ೀವನವು ಉತ್ತಮಗೊಳ್ಳುತ್ತದೆ. ಆದರೆ ಫೆಬ್ರವರಿ 2013 ರಂದು ಮಂಡಿಸಲಾದ ಅಯ-ಯವು ರಾಜ್ಯದ ಅಭಿವೃದ್ಧಿಗೆ ರೂಪಿಸಿದ ರ್ಯಕ್ರಮವೂ ಅಲ್ಲ. ಅದು ಅಭಿವೃದ್ಧಿಗೆ ೂರಕವೂ ಅಲ್ಲ.

ರಾಜ್ಯದ ಅಭಿವೃದ್ಧಿಯಾಗ ಬೇಕಾದರೆ ಜ್ಯದ ಸಂಪತ್ತು ಹೆಚ್ಚಾಗ ಬೇಕು. ಸಂಪತ್ತೆಂದರೆ, ರ್ಥಿಕ ಸಂಪತ್ತು ಮತ್ತು ಮಾನವ ಸಂಪತ್ತು. ವೆರಡು ಅಭಿವೃದ್ಧಿ ಆಗಬೇಕಾದರೆ ಮುಖವಾಗಿ ಕೃಷಿ ಮತ್ತು ಕೈಗಾರಿಕೆ ಅಭಿವೃದ್ಧಿ ೇಕು. ಅದಕ್ಕೆ ಪೂರಕವಾಗಿ ಕೃಷಿ ಮತ್ತು ರಿಕೆಗಳನ್ನು ಅಭಿವೃದ್ಧಿ ಪಡಿಸಲು ಬೇಕಾದ ಗತ್ಯ ಬಂಡವಾಳವನ್ನು ಒದಗಿಸಿ, ಅದಕ್ಕೆ ಬೇಕಾಗುವ ಮೂಲಭೂತ ಅಗತ್ಯಗಳನ್ನು ಅಭಿವೃದ್ಧಿ ಪಡಿಸಬೇಕು. ಇನ್ನೊಂದು ಪ್ರಮುಖ ವಲಯವಾದ ಶಿಕ್ಷಣವನ್ನು ಅಭಿವೃದ್ಧಿ ಪಡಿಸದೆ ಸೇವಾವಲಯದ ಶಕ್ತಿ ಹೆಚ್ಚಾಗಲಾರದು. ಆದರೆ ಈ ವರ್ಷದ ಅಯ-ವ್ಯಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಬೇಕಾದ ಒಂದು ಕಾರ್ಯಕ್ರಮವಿಲ್ಲ. ಕೃಷಿ ಅಭಿವೃದ್ಧಿಗೆ ಯಾವ.ವಿಶೇಷ ಅದ್ಯತೆಯು ಇಲ್ಲ.

ಕುಸಿದಿರುವ ಉತ್ಪಾದನೆ-ಆರ್ಥಿಕ ಹಿನ್ನಡೆ

ಫೆಬ್ರವರಿ 7 ರಂದು ಶಾಸನ ಸಭೆಯಲ್ಲಿ ಸರ್ಕಾರ ಮಂಡಿಸಿದ 2012-13ರ ಆರ್ಥಿಕ ಸಮೀಕ್ಷೆಯಲ್ಲಿ ಸರ್ಕಾರವೇ ಒಪ್ಪಿಕೊಂಡ ರೀತಿಯಲ್ಲಿ ಕಳೆದ 5 ವರ್ಷಗಳ ಬಿಜೆಪಿ ಸರ್ಕಾರದ ಆಡಳಿತದ ಒಟ್ಟು ಫಲಿತಾಂಶವಾಗಿ ರಾಜ್ಯದ ಆರ್ಥಿಕ ಅಭಿವೃದ್ಧಿ ಗಂಭೀರವಾಗಿ ಕುಂಟಿತವಾಗಿದೆ. ಅದರಲ್ಲಿ ಪ್ರತ್ಯೇಕವಾಗಿ ಕೃಷಿ ಮತ್ತು ಕೈಗಾರಿಕಾ ಉತ್ಪಾದನೆ ತೀವ್ರ ರೀತಿಯಲ್ಲಿ ಕುಸಿದಿದೆ. ಕೃಷಿ ಉತ್ಪಾದನೆಯ ಬೆಳವಣಿಗೆ ದರ ಶೇ. 2 ಕೂಡ ಇಲ್ಲ. ಶೇ. 1.8 ಮಾತ್ರ ಇರಲಿದೆ ಎಂಬುದು ಈಗ ಖಚಿತವಾಗಿದೆ. ಅದರಲ್ಲಿ ಪ್ರತ್ಯೇಕವಾಗಿ ಆಹಾರಧಾನ್ಯಗಳ ಉತ್ಪಾದನೆ ಸರ್ಕಾರ ಗುರಿ ನಿಗದಿಪಡಿಸಿಕೊಂಡಿದ್ದಂತೆ ನೀರಿಕ್ಷಿತ 136.5 ಲಕ್ಷಟನ್ ಮುಟ್ಟುತ್ತಿಲ್ಲ. ಅದು ಕೇವಲ 125 ಲಕ್ಷಟನ್‌ಗಳಷ್ಟಾಗಲಿದೆ. ಹಾಗಾಗಿ ಈ ವರ್ಷದ ಗುರಿಯನ್ನೆ 10% ಕಡಿಮೆ ಮಾಡಲಾಗಿದೆ.


ವಿದುತ್-ಕೃಷಿ-ನೀರಾವರಿ ನಿರ್ಲಕ್ಷ್ಯ

ಬಜೆಟ್‌ನಲ್ಲಿ ಕೃಷಿ ಅಭಿವೃದ್ಧಿಗೆ ಬೇಕಾಗುವ ಮೂಲಭೂತ ಅವಶ್ಯಕಗಳಾದ ನೀರು ಮತ್ತು ವಿದ್ಯುತ್ ಒದಗಿಸಲು ಯಾವ ಕ್ರಮವು ಇಲ್ಲ. ವಿದ್ಯುತ್ ಉತ್ಪಾದನೆಗೆ ತೆಗೆದಿಟ್ಟಿರುವ 5,000 ಕೋಟಿ ರೂಗಳು 3,600 ಕೋಟಿಯಲ್ಲಿ ವಿದ್ಯುತ್ ಖರೀದಿಗೆ ಹೊಗುತ್ತದೆ. ಇನ್ನು ಹೊಸದಾಗಿ ವಿದ್ಯುತ್ ತಯಾರಿಸುವುದೆಲ್ಲಿ ? ಹೆಚ್ಚಿನ ಅಂಶ ಹಳೆಯ ಬಿಲ್ಲುಗಳ ಪಾವತಿಗೆ ಹೋಗುತ್ತದೆ. ಹೊಸ ನೀರಾವರಿ ಯೋಜನೆಗಳಿಗೆ ಹಣ ಎಲ್ಲಿ? ನೀರಾವರಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಎರಡಕ್ಕೂ ಈ ಸಾಲಿನ ಅಯವ್ಯಯದಲ್ಲಿ ಶೇಕಡ 18% ಮಾತ್ರ ತೆಗದಿಡಲಾಗಿದೆ.

ಕೈಗಾರಿಕೆಗಳ ಅಭಿವೃದ್ಧಿ ಇಲ್ಲದೆ ರಾಜ್ಯದ ನಿರುದ್ಯೋಗ ಸಮಸ್ಯೆ ಪರಿಹಾರ ಆಗದು. ಆದರೆ ಅದಕ್ಕೆ ಬೇಕಾದ ಯಾವ ಕಾರ್ಯಕ್ರಮವೂ ಬಜೆಟ್‌ನಲ್ಲಿ ಇಲ್ಲ. ಶಿಕ್ಷಣಕ್ಕೆ, ಶಿಕ್ಷಣ ವಲಯಕ್ಕೆ ಶೇ. 18 ಪಾಲು ನಿಗಿದಿಪಡಿಸಲಾಗಿದೆ. ಇದರಲ್ಲಿ ಶೇ. 80% ಬಾಕಿ ಸಂಬಳ ಮತ್ತು ನಿವೃತ್ತಿ ವೇತನಕ್ಕೆ ಹೋಗುತ್ತದೆ.

ತೆಗೆದಿಟ್ಟದ್ದನ್ನೂ ಖರ್ಚು ಮಾಡಿಲ್ಲ

ಯೋಜನಾ ಗಾತ್ರವನ್ನು 42 ಸಾವಿರ ಕೋಟಿಗಳಿಗೆ ಹೆಚ್ಚಿಸಲಾಗಿದೆಯೆಂದು ಅಯ-ವ್ಯಯದಲ್ಲಿ ಹೇಳಲಾಗಿದೆ. ಹಿಂದಿನ ಸಾಲಿನಲ್ಲಿ 32 ಸಾವಿರ ಕೋಟಿ ತೆಗೆದಿಟ್ಟು ಅದರಲ್ಲಿ ಖರ್ಚಾಗಿರುವುದು 40% ಮಾತ್ರ . ಘೋಷಿತ ಯೋಜನೆಗಳಿಗೆ ನಿಗದಿ ಪಡಿಸಲಾಗಿದ ಹಣವನ್ನು ಯಾವ ಯೋಜನೆಯಲ್ಲಿಯೂ ಪೂರ್ತಿಯಾಗಿ ಉಪಯೋಗಿಸಲು ಸಾಧ್ಯವಾಗಿಲ್ಲ. ಹಾಗಾಗಿ ಯೋಜನಾ ಗಾತ್ರವನ್ನು ಹೆಚ್ಚಿಸುವುದು ಸಾಧನೆ ಆಗಲಾರದು. ಇದರ ಬಹುಪಾಲು ಯೋಜನೇತರ ವೆಚ್ಚಗಳಿಗೆ ಹೋಗುತ್ತದೆ ಎಂಬುವುದು ಕಟು ಸತ್ಯ. ಅಭಿವೃದ್ಧಿಯ ಬಗ್ಗೆ ಸರಿಯಾದ ಕಣ್ಣೋಟ ಮತ್ತು ಬದ್ದತೆ ಇಲ್ಲದ ಸರ್ಕಾರಗಳು ಎಂತಹದ್ದೇ ಯೋಜನೆಯನ್ನು ರೂಪಿಸಿದರೂ ಅದು ನಿಷ್ಪ್ರಯೋಜಕವಾಗುತ್ತದೆ.



ಬರಲಿಲ್ಲ ಅಳೆದು ಎಳೆದು ತೋರಿಸಿದ್ದ ಆದಾಯ

2013-2014 ನೇ ವರ್ಷದ ರಾಜ್ಯದ ಆಯ-ವ್ಯಯವು 1,17,005 ಕೋಟಿ. ಕಳೆದ ಸಾಲಿನಲ್ಲಿ ಇದು 1 ಲಕ್ಷ 4 ಸಾವಿರ ಕೋಟಿಗಳು. ಇದರಲ್ಲಿ ಖರ್ಚಾಗಿರುವುದು ಶೇಕಡ 60% ಮಾತ್ರ ಉಳಿದಿದ್ದು ಖರ್ಚು ಆಗಲಿಲ್ಲ. ಸರ್ಕಾರ ಬಜೆಟ್‌ನಲ್ಲಿ ಅಳೆದು ಎಳೆದು ತೋರಿಸಿದಷ್ಟು ಆದಾಯವೂ ಬರಲಿಲ್ಲ. ಈಗ ಮತ್ತೆ 1,17,005 ಕೋಟಿ ಅಯ-ವ್ಯಯಕ್ಕೆ ಆದಾಯದ ಮೂಲಗಳೇನು? ಆದಾಯ ಬರುತ್ತದೆ ಎನ್ನಲಾಗಿರುವ ಆದಾಯದ ಒಂದು ಪಟ್ಟಿಯನ್ನು ಕೊಟ್ಟಿರುವುದು ಬಿಟ್ಟರೆ, ಆದಾಯ ಕ್ರೋಢೀಕರಣಕ್ಕೆ ಪೂರ್ಣವಾದ ಯಾವ ನಿರ್ದಿಷ್ಟ ಸೂಚನೆಯೇ ಇಲ್ಲ. ಹೀಗಾಗಿ ಆದಾಯ ಕ್ರೋಢೀಕರಣದ ಸಾಧ್ಯತೆಯೂ ಇಲ್ಲ.

ಸಾಲದ ಶೂಲ

ಇದಲ್ಲದೆ ಇಪ್ಪತ್ತು ಸಾವಿರ ಕೋಟಿಗಳನ್ನು ಸಾಲದ ರೂಪದಲ್ಲಿ ಪಡೆಯಲಾಗುವುದೆಂಬುದನ್ನು ಅಯ-ವ್ಯಯದಲ್ಲಿ ಪ್ರಸ್ತಾಪಿಸಲಾಗಿದೆ. ಈಗಾಗಲೆ ರಾಜ್ಯದ ಒಟ್ಟು ಸಾಲ 1,37,994 ಕೋಟಿಗಳಾಗಿದೆ. ಇದಕ್ಕೆ ಇಪ್ಪತ್ತು ಸಾವಿರ ಕೋಟಿಗಳು ಸೇರಿದರೆ ಒಟ್ಟು ಹೆಚ್ಚು ಕಡಿಮೆ 1,60,000 ಕೋಟಿಗಳಾಗಲಿದೆ. ಈಗ ಇರುವ ಸಾಲಕ್ಕೆ ನಮ್ಮ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ 11 ರಷ್ಟು ಬಡ್ಡಿಯನ್ನು ಕೊಡಬೇಕಾಗಿದೆ. ಇದು ಮುಂದೆ ಹೆಚ್ಚು ಕಡಿಮೆ ಶೇ. 16% ಕ್ಕೆ ಏರಿ ಹೋಗುತ್ತದೆ. 2008 ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ ರಾಜ್ಯದ ಒಟ್ಟು ಸಾಲ ಇದ್ದದ್ದು 63 ಸಾವಿರ ಕೋಟಿ. ಈಗ 1,37,994 ಕೋಟಿ. ಅಂದರೆ 73,000 ಸಾವಿರ ಕೋಟಿ ಕಳೆದ 5 ವರ್ಷಗಳಲ್ಲಿ ಹೆಚ್ಚಾಗಿದೆ.

ತೆರಿಗೆ ಹೊರೆ

ಇನ್ನು ಸಂಪನ್ಮೂಲಗಳ ಕ್ರೋಢೀಕರಣದ ಬಹುದೊಡ್ಡ ಪ್ರಸ್ತಾಪ. ಹೆಚ್ಚು ಕಡಿಮೆ 9 ಸಾವಿರ ಕೋಟಿಗಳಷ್ಟು ಹೆಚ್ಚಿನ ಹೊಸ ತೆರಿಗೆಗಳನ್ನು ಹಾಕಲಾಗಿದೆ. ಇದರಿಂದ ಹಣದುಬ್ಬರ ಮತ್ತು ಬೆಲೆಯೇರಿಕೆ ವಿಪರೀತವಾಗಿ ಸಾಮಾನ್ಯ ಜನರ ಬದುಕು ದುಸ್ತರವಾಗುತ್ತದೆ. ಅನ್ನುವುದರಲ್ಲಿ ಯಾವ ಅನುಮಾನವು ಇಲ್ಲ. ಈಗಲೇ ಬೆಲೆಯೇರಿಕೆಯಿಂದ ತತ್ತರಿಸಿ ಹೋಗಿರುವ ಜನ ಇನ್ನಷ್ಟು ಕಷ್ಟಕ್ಕೆ ಒಳಗಾಗುತ್ತಾರೆ.

ದುಡಿಯುವ ಜನರ ಬದುಕಿನ ಬವಣೆಗಳಿಗೆ ಇಲ್ಲ ಪರಿಹಾರ

ಕಳೆದ 5 ವರ್ಷಗಳಿಂದ ರೈತರು, ಕೃಷಿ ಕಾರ್ಮಿಕರ ಹತ್ತಾರು ಹೋರಾಟಗಳನ್ನು ನಡೆಸಿ ಅವರ ಕನಿಷ್ಟ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದ್ದರೂ ಸರ್ಕಾರ ಈ ಅಯ-ವ್ಯಯದಲ್ಲಿ ಯಾವ ಪರಿಹಾರವನ್ನು ಘೋಷಿಸಿಲ್ಲ. ಕೇವಲ ಅಂಗನವಾಡಿ ಕೆಲಸಗಾರರಿಗೆ 250ರೂ ಗೌರವಧನವನ್ನು ಹೆಚ್ಚಿಸಿರುವುದು ಬಿಟ್ಟರೆ ದುಡಿಯುವ ಜನಕ್ಕೆ ಬೇರೇನು ಇಲ್ಲದಂತಾಗಿದೆ. ಇನ್ನು ರೈತರ ಸಾಲದ ಮಾಫಿ ಬಗ್ಗೆ ಪ್ರಶ್ನೆಗಳು ಕೇವಲ ಪ್ರಚಾರಕ್ಕೆ ಮಾತ್ರ ಸೀಮಿತಗೊಂಡಂತೆ ಇದೆ. ಯಾವ ಸ್ಪಷ್ಟತೆ ಮತ್ತು ನಿರ್ದಿಷ್ಟತೆಯೂ ಇಲ್ಲ. ಘೋಷಣೆ ಮಾಡಿರುವ ಯಾವ ರಿಯಾಯಿತಿಗಳೂ ಸಂಪೂರ್ಣವಾಗಿ ಇದುವರೆಗೂ ರೈತರಿಗೆ ಸಿಕ್ಕಿಲ್ಲ. ಇನ್ನು ಬಡವರಿಗೆ 2 ರೂಪಾಯಿಗೆ ಕೆ.ಜಿ. ಅಕ್ಕಿ ಎಂಬ ಘೋಷಣೆ ಆಗಿದ್ದರೂ ಈ ಸರ್ಕಾರವಂತೂ ಅದನ್ನು ಜಾರಿ ಮಾಡುವ ಸಾಧ್ಯತೆ ಇಲ್ಲ. ಇನ್ನು ಬಡವರ ನಿವೇಶನ ಮತ್ತು ಮನೆಗಳ ನಿರ್ಮಾಣಕ್ಕೆ ತೆಗೆದಿಟ್ಟಿರುವ ಹಣ ಹಿಂದಿನ ಬಾಕಿಗಳಿಗೆ ಸಾಕಾಗುವುದಿಲ್ಲ. ಜನರ ಗಂಭೀರ ಸಮಸ್ಯೆಯಾದ ನಿವೇಶನಗಳ ಪ್ರಶ್ನೆ ಅಯ-ವ್ಯಯದಲ್ಲಿ ಪರಿಹಾರ ಕಾಣದೆ ಇರುವುದು ಈ ಸರ್ಕಾರದ ಬಡವರ ವಿರೋಧಿ ನೀತಿಯನ್ನು ಬಹಿರಂಗ ಪಡಿಸಿದೆ. ನಿವೇಶನಗಳನ್ನು ಒದಗಿಸಲು ಪ್ರತ್ಯೇಕ ಹಣವನ್ನು ನಿಗದಿಪಡಿಸಿಲ್ಲ. ಮನೆಗಳ ನಿರ್ಮಾಣಕ್ಕೆ ಈಗ ನಿಗದಿಪಡಿಸಿರುವ

ಪುಟ 11 ಕ್ಕೆ

ಜಾತೀಯ ಮತೀಯ ಮಠಗಳಿಗೆ ಹೇರಳ ಹಣ

ರಾಜ್ಯದ ಅಯ-ವ್ಯಯದ ಪರಿಸ್ಥಿತಿ, ಆರ್ಥಿಕ ಪರಿಸ್ಥಿತಿ ಇಂತಹ ಆತಂಕದ ದುಸ್ಥಿತಿಯಲ್ಲಿ ಇದ್ದರೆ ಜಗದೀಶ್ ಶೆಟ್ಟರ್ ರವರು ಮಠ ಮಾನ್ಯಗಳಿಗೆ ಮತ್ತು ಜಾತಿ ಮತದ ಸಂಸ್ಥೆಗಳಿಗೆ 268 ಕೋಟಿ ದಾನ ಕೊಟ್ಟಿದ್ದಾರೆ. ಈ ಹಣ ಯಾರದೆಂದು ಅವರಿಗೆ ಕೊಟ್ಟಿದ್ದಾರೆ ? ಮಠಗಳಿಗೆ, ಜಾತಿ-ಮತ ಸಂಘಟನೆಗಳಿಗೆ ಹಣ ಕೊಟ್ಟರೆ ರಾಜ್ಯದ ಅಭಿವೃದ್ಧಿ ಹೇಗಾಗುತ್ತದೆ? ಯಾವ ಲೆಕ್ಕದಲ್ಲಿ ಹಣ ಕೊಟ್ಟಿದ್ದಾರೆ? ಇದಕ್ಕೆ ಉತ್ತರದಾಯಿತ್ವ ಯಾರದು ?

ಫೆ.20,21 ರ ಮಹಾ ಮುಷ್ಕರ ಯಶಸ್ಸಿಗೆ ದ.ಕ.ಜಿಲ್ಲೆಯಲ್ಲಿ ವಾಹನ ಪ್ರಚಾರ ಜಾಥಾ

ಕಾರ್ಮಿಕ ವರ್ಗದ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಫೆಬ್ರವರಿ 20, 21 ರಂದು ವಿವಿಧ ಕಾರ್ಮಿಕ ಸಂಘಟನೆಗಳು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸಲಿದ್ದು, ಇದರ ಯಶಸ್ಸಿಗಾಗಿ ಜಿಲ್ಲಾ ಕಾರ್ಮಿಕ ಸಂಘಗಳ ಜಂಟಿ ಸಮಿತಿ ಆಶ್ರಯದಲ್ಲಿ ನಡೆಯಲಿರುವ 3 ದಿನಗಳ ವಾಹನ ಪ್ರಚಾರ ಜಾಥಾಕ್ಕೆ ಫೆಬ್ರವರಿ 11 ರಂದು ಬೆಳಿಗ್ಗೆ ದ.ಕ. ಜಿಲ್ಲಾಧಿಕಾರಿಗಳ ಕಚೇರಿ ಎದುರು ನಡೆದ ಸಭೆಯಲ್ಲಿ ಚಾಲನೆ ನೀಡಲಾದ ಜಾಥಾ ಜಿಲ್ಲೆಯಾದ್ಯಂತ ಸಂಚರಿಸಿದೆ.

ಬಿಎಂಎಸ್ ಸಂಘಟನೆಯ ಮುಖಂಡ ವಿಶ್ವನಾಥ ಶೆಟ್ಟಿ ಜಾಥಾಕ್ಕೆ ಚಾಲನೆ ನೀಡಿ, ಅಖಿಲ ಭಾರತ ಮುಷ್ಕರ, ಹರತಾಳವನ್ನು ಯಶಸ್ವಿಗೊಳಿಸಲು ಜಿಲ್ಲೆಯ ಜನತೆಗೆ ಕರೆ ನೀಡಿದರು. ಜಾಥಾ ಉದ್ಘಾಟನಾ ಸಮಾರಂಭದಲ್ಲಿ ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಎಐಟಿಯುಸಿಯ ಶೇಖರ್, ಕರುಣಾಕರ್, ಸಂಜೀವ, ಎಚ್‌ಎಂಎಸ್‌ನ ಸುರೇಶ್ಚಂದ್ರ ಮೊದಲಾದವರು ಉಪಸ್ಥಿತರಿದ್ದರು.

ಜಾಥಾಕ್ಕೆ ಜಿಲ್ಲೆಯ ವಿವಿದೆಡೆ ಸ್ವಾಗತ:

ಜಾಥಾ ಮಂಗಳೂರಿನಿಂದ ಫೆಬ್ರವರಿ 11 ರಂದು ತೊಕ್ಕೊಟ್ಟಿಗೆ ಆಗಮಿಸಿದಾಗ ಸಿಐಟಿಯು ಉಳ್ಳಾಲ ವಲಯ ಸಮಿತಿಯು ಬಾರೀ ಸ್ವಾಗತ ನೀಡಿರುತ್ತದೆ.

ಫೆ.20,21ರ ಹರತಾಳ ಯಶಸ್ವಿಗೊಳಿಸುವಂತೆ ಸಿಐಟಿಯು ಉಳ್ಳಾಲ ವಲಯ ಅಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್ ಕರೆ ನೀಡಿದರು. ಜಿಲ್ಲಾ ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಮೋಟಾರ್ ಯೂನಿಯನ್ ಮುಖಂಡ ಡೊಂಬಯ್ಯ, ಎಐಟಿಯುಸಿ ಮುಖಂಡರು ಜಾಥಾದಲ್ಲಿ ಆಗಮಿಸಿದ್ದರು. ಉಳ್ಳಾಲ ವಲಯದ ಸಿಐಟಿಯು ಮುಖಂಡರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್, ಶಶೀಂದ್ರ ಕುಕ್ಯಾನ್ ಮೊದಲಾದವರು ಉಪಸ್ಥಿತರಿದ್ದರು.

ಜಾಥಾವು ಫೆಬ್ರವರಿ 11 ರಂದು ವಿಟ್ಲ, ಬಂಟ್ವಾಳಗಳಲ್ಲೂ, 12 ರಂದು ಪುತ್ತೂರು,ಸುಳ್ಯ, ಕಡಬ, ಬೆಳ್ತಂಗಡಿಗಳಲ್ಲೂ, 13 ರಂದು ಮೂಡಬಿದ್ರೆ, ಕೈಕಂಬ, ಸುರತ್ಕಲ್‌ನಿಂದ ಮಂಗಳೂರು ತಲುಪಿರುತ್ತದೆ. 13ರ ಸಾಯಂಕಾಲ ಮಂಗಳೂರು ಉರ್ವಸ್ಟೋರ್‌ನಲ್ಲಿ ಜಾಥಾ ಸಮಾರೋಪ ನಡೆಯಿತು. ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಜಾಥಾಕ್ಕೆ ಉತ್ತಮ ಸ್ವಾಗತ ದೊರೆತಿದೆ.

ಬೆಳ್ತಂಗಡಿಯಲ್ಲಿ ಮತ್ತೊಮ್ಮೆ ನಿವೇಶನ ರಹಿತರ ಧರಣಿ

ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ನೇತೃತ್ವದಲ್ಲಿ ಬೆಳ್ತಂಗಡಿ ತಾಲೂಕು ಕಚೇರಿ ಎದುರು ಫೆಬ್ರವರಿ 11 ರಂದು ಮತ್ತೊಮ್ಮೆ ನಿವೇಶನ ರಹಿತರು ಧರಣಿ ನಡೆಸಿದರು.

ಕೆಲವು ದಿನಗಳ ಹಿಂದೆ ಉಜಿರೆಯ ಅರಳಿ ಎಂಬಲ್ಲಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಸರಕಾರಿ ಭೂಮಿ ಆಕ್ರಮಿಸಿ ನಿವೇಶನ ರಹಿತರು ಟೆಂಟು ಹಾಕಿ ವಾಸವಾಗಿದ್ದರು. ಅವರಲ್ಲಿ ಅರ್ಹರಿಗೆ ಈಗಾಗಲೇ ಅರ್ಜಿ ಸಲ್ಲಿಸಿದ ಆಧಾರದಲ್ಲಿ ಪುನರ್ವಸತಿ ನಡೆಸಲಾಗುವುದು ಎಂದು ಪುತ್ತೂರು ವಿಭಾಗಾಧಿಕಾರಿಯವರು ಹೋರಾಟಗಾರರಿಗೆ ಭರವಸೆ ನೀಡಿದ ಹಿನ್ನೆಲೆಯಲ್ಲಿ ಭೂ ಆಕ್ರಮಣವನ್ನು ತೆರವುಗೊಳಿಸಲಾಗಿತ್ತು. ಈಗಾಗಲೇ ನಿವೇಶನ ನೀಡಿಕೆಯ ಪ್ರಕ್ರಿಯೆ ಚಾಲನೆ ಗೊಂಡಿದ್ದು, 15 ದಿನಗಳೊಳಗೆ ನಿವೇಶನ ನೀಡುವುದಾಗಿ ಪುತ್ತೂರು ವಿಭಾಗಾಧಿಕಾರಿ ತಿಳಿಸಿದ್ದರು. 15 ದಿನಗಳಾದ್ರರೂ ಭರವಸೆ ಈಡೇರದ ಹಿನ್ನೆಲೆಯಲ್ಲಿ ಫೆಬ್ರವರಿ 11 ರಂದು ಮತ್ತೊಮ್ಮೆ ನಿವೇಶನ ರಹಿತರು ಪ್ರತಿಭಟನೆ ನಡೆಸುವಂತಾಗಿದೆ. ಈ ದಿನ ಪ್ರತಿಭಟನೆ ಮುಗಿದ ಬಳಿಕವೂ ಧರಣಿ ನಿರತರೊಂದಿಗೆ ಮಾತುಕತೆ ನಡೆಸಲು ಯಾವ ಅಧಿಕಾರಿಗಳೂ ಬಾರದೆ ಇರುವ ಹಿನ್ನೆಲೆಯಲ್ಲಿ ಮುಂದಿನ ಹಂತದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲು ಹೋರಾಟಗಾರರು ನಿರ್ಧರಿಸಿದ್ದಾರೆ. ಬೇಡಿಕೆ ಈಡೇರುವವರೆಗೆ ಹೋರಾಟ ಮುಂದುವರೆಸಲು ನಿರ್ಧರಿಸಲಾಗಿದೆ.

ಪ್ರತಿಭಟನೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಪಿಐ(ಎಂ) ಮುಖಂಡರಾದ ಬಿ.ಎಂ.ಭಟ್, ತಾಲೂಕು ಕಾರ್ಯದರ್ಶಿ ಎಸ್.ಎಂ.ಶಿವಕುಮಾರ್, ಮುಖಂಡರಾದ ಶೇಖರ ಲಾಯಿಲ, ಈಶ್ವರಿ ಮಾತನಾಡಿದರು.

ಪ್ರತಿಭಟನೆಯ ನೇತೃತ್ವವನ್ನು ಜಯರಾಂ, ನೆಬಿಸ, ವಸಂತ ನಡ, ನೀಲೇಶ್ ಪೆರಿಂಜೆ, ಶ್ಯಾಮರಾಜ್, ಮಹಾಬಲ ಕೋಟ್ಯಾನ್ ಮತ್ತಿತರರು ವಹಿಸಿದ್ದರು.

ಪ್ರತಿಭಟನೆಗೂ ಮೊದಲು ನೂರಾರು ಸಂಖ್ಯೆಯಲ್ಲಿದ್ದ ನಿವೇಶನ ರಹಿತರು ಸಿಪಿಐ(ಎಂ) ಕಚೇರಿಯಿಂದ ಮೆರವಣಿಗೆ ಹೊರಟು, ಸರಕಾರದ ವಿರುದ್ಧ ಘೋಷಣೆ ಕೂಗುತ್ತಾ ನಗರದ ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ತಾಲೂಕು ಕಚೇರಿ ಎದುರು ಧರಣಿ ಕುಳಿತರು.

ಹೋರಾಟಕ್ಕೆ ನೇತೃತ್ವ ನೀಡಿದ್ದ ಬಿ.ಎಂ.ಭಟ್ ಅವರ ಮೇಲೆ ಹಲ್ಲೆ ನಡೆಸಿದ್ದವರನ್ನು ಇನ್ನೂ ಬಂಧಿಸದಿರುವುದಕ್ಕೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತ ಪಡಿಸಿದರು.

ಆಹಾರದ ಹಕ್ಕಿಗಾಗಿ ಉಡುಪಿಯಲ್ಲಿ ಸಹಿ ಸಂಗ್ರಹ:

ರೇಷನ್ ವ್ಯವಸ್ಥೆಯಲ್ಲಿ ಪ್ರತಿ ಕುಟುಂಬಕ್ಕೂ ಕೆ.ಜಿ.ಗೆ ರೂ.2 ದರದಲ್ಲಿ 35 ಕೆ.ಜಿ. ಅಕ್ಕಿ ಒದಗಿಸಬೇಕು, ಆಹಾರ ವಸ್ತುಗಳ ಬದಲು ನಗದು ವರ್ಗಾವಣೆ ಮಾಡುವ ಯೋಜನೆಯನ್ನು ಕೈಬಿಡಬೇಕು ಎಂದು ಆಗ್ರಹಿಸಿ ಉಡುಪಿ ತಾಲೂಕು ಸಿಪಿಐ(ಎಂ) ನೇತೃತ್ವದಲ್ಲಿ ಫೆಬ್ರವರಿ 12 ರಂದು ಉಡುಪಿ ನಗರದಲ್ಲಿ ಸಹಿ ಸಂಗ್ರಹ ಚಳುವಳಿ ನಡೆಸಲಾಯಿತು.

ಈಗಾಗಲೇ ಉಡುಪಿ ಜಿಲ್ಲೆಯಲ್ಲಿ 10,000 ಮಂದಿಯಿಂದ ಸಹಿ ಸಂಗ್ರಹ ನಡೆದಿದೆ. ನಗರ ಸಂಚಾರದ ಸಹಿ ಸಂಗ್ರಹ ಚಳುವಳಿಯಲ್ಲಿ 1,200 ಜನರ ಸಹಿ ಸಂಗ್ರಹಿಸಲಾಗಿದೆ. ಈ ನಗರ ಅಭಿಯಾನದ ನೇತೃತ್ವವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಪಿ.ವಿಶ್ವನಾಥ ರೈ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಬಾಲಕೃಷ್ಣ ಶೆಟ್ಟಿ ವಹಿಸಿದ್ದರು.

.....ಚುಟುಕು ಕವಿ 'ವಿಡಂಬಾರಿ'

ಪುಟ 2 ರಿಂದ

ಎಂಬ ಶಿರ್ಷಿಕೆಯಲ್ಲಿ ಸತತವಾಗಿ ಮೂರು ವರ್ಷಗಳ ಕಾಲ ಚುಟುಕುಗಳನ್ನು ಪ್ರಕಟಿಸಿದರು.

ಒಗ್ಗರಣೆ(1981), ಕವಳಿ(1986), ಕುದಿಬಿಂದು(2003), ಅಂಚೆಪೇದೆಯ ಆತ್ಮಕತೆ(2005), ವಿಡಂಬಾರಿ ಕಂಡದ್ದು(2007) ಇವು ಪ್ರಕಟಿತ ಕೃತಿಗಳು.

ವಿಡಂಬಾರಿಯವರನ್ನು 'ಜನಶಕ್ತಿ' ಮಾತನಾಡಿಸಿದ್ದು ಶಿರಸಿಯಲ್ಲಿ. ಸಿಐಟಿಯು ಸಂಘಟನೆಯ 12ನೇ ರಾಜ್ಯ ಸಮ್ಮೇಳನದ ಸಂದರ್ಭಕ್ಕೆ ಅವರು ಬಂದಿದ್ದಾಗ. ಸಂದರ್ಶನದ ಕೊನೆಯಲ್ಲಿ ಜನಶಕ್ತಿಯ ಪರವಾಗಿ ಧನ್ಯವಾದ ಹೇಳಿದಾಗ ಅವರು ಹೇಳಿದರು. "ಎಷ್ಟೋ ಪತ್ರಿಕೆಗಳಲ್ಲಿ ನನ್ನ ಚುಟುಕುಗಳು ಪ್ರಕಟವಾಗಿರಬಹುದು. ಆದರೆ ಜನಶಕ್ತಿಯಲ್ಲಿ ಪ್ರಕಟವಾದಾಗ ಆಗುವ ಸಂತೋಷವೇ ಬೇರೆ. 'ಜನಶಕ್ತಿ' ನನ್ನ ಮನೆಯ ಪತ್ರಿಕೆ."

ಪತ್ರಿಕೆಯ ಬಗೆಗಿನ ತುಂಬು ಅಭಿಮಾನಕ್ಕೆ ವಿಡಂಬಾರಿಯವರಿಗೆ ಧನ್ಯವಾದ ಮತ್ತು ಶುಭಾಶಯ ಹೇಳಿ ಬೀಳ್ಕೊಂಡೆವು.

ಬಂದರು ರಸ್ತೆ ದುರಸ್ಥಿ ಆಗ್ರಹಿಸಿ ಮಂಗಳೂರು ಪಾಲಿಕೆಗೆ ಮುತ್ತಿಗೆ

ಹದಗೆಟ್ಟು ಹೋಗಿರುವ ಮಂಗಳೂರು ಹಳೆ ಬಂದರು ಪ್ರದೇಶದ ರಸ್ತೆಗಳ ದುರಸ್ತಿಗೆ ಆಗ್ರಹಿಸಿ ಬಂದರು ಶ್ರಮಿಕರ ಸಂಘ (ಸಿಐಟಿಯು ಸಂಯೋಜಿತ) ಕಾರ್ಮಿಕರು ಮಂಗಳೂರು ಮಹಾನಗರ ಪಾಲಿಕೆ ಕಚೇರಿ ಎದುರು ಫೆಬ್ರವರಿ 7 ರಂದು ಪ್ರತಿಭಟನೆ ನಡೆಸಿದ್ದಾರೆ.

ಬಂದರು ವ್ಯಾಪಾರಿಗಳು ಹಲವು ಬಾರಿ ಪ್ರತಿಭಟನೆ ನಡೆಸಿದರೂ ಸಂಬಂಧಿತ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ತೆಗೆದುಕೊಳ್ಳಲಿಲ್ಲ. ಬಂದರು ಶ್ರಮಿಕ ಸಂಘದ ಕಾರ್ಮಿಕರು ಈ ಹಿಂದೆ ಜಿಲ್ಲಾಧಿಕಾರಿಗಳ ಕಚೇರಿವರೆಗೆ ತಳ್ಳುಗಾಡಿಗಳ ಮೆರವಣಿಗೆ ನಡೆಸಿ ಪ್ರತಿಭಟನಾ ಪ್ರದರ್ಶನ ನಡೆಸಿದ್ದರು. ಆದಾಗ್ಯೂ ಪಾಲಿಕೆಯ ಉಪಕ್ರಮ ಪ್ರಾರಂಭವಾಗಿಲ್ಲ. ರಸ್ತೆ ಡಾಮರು ಕಾಣದೆ ಹಲವು ವರ್ಷಗಳಾಗಿರುವುದರಿಂದ ತಳ್ಳುಗಾಡಿಯಲ್ಲೇ ಕಾರ್ಮಿಕರು ಸಾಮಾಗ್ರಿ ಸಾಗಣೆ ಮಾಡಬೇಕಾಗಿದೆ. ಇದನ್ನು ಆಡಳಿತದ ಗಮನಕ್ಕೆ ತರುವ ಸಲುವಾಗಿ ತಳ್ಳುಗಾಡಿಗಳ ಪ್ರದರ್ಶನ ನಡೆಸಿದರೂ ಪಾಲಿಕೆಯ ಗಮನಕ್ಕೆ ಬಾರದಿರುವು ಖೇದಕರ ಎಂಬುದಾಗಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ದೂರಿದರು.

ಬೆಳಿಗ್ಗೆ 10.30ಕ್ಕೆ ಹಳೆ ಬಂದರಿನಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗುತ್ತಾ ಪಾಲಿಕೆ.ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು. ಪಾಲಿಕೆ ಆಯುಕ್ತರು ಪ್ರತಿಭಟನೆ ನಡೆಯುವ ಸ್ಥಳಕ್ಕೆ ಆಗಮಿಸಿ ಮನವಿ ಪರಿಶೀಲಿಸಿ, ಈಗಾಗಲೇ ಕೈಗೊಂಡಿರುವ ಕೆಲವು ಕ್ರಮಗಳ ಬಗ್ಗೆ ತಿಳಿಸಿ, ಶೀಘ್ರ ರಸ್ತೆ ದುರಸ್ತಿ ನಡೆಸಲಾಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆಯ ನೇತೃತ್ವವನ್ನು ಸಂಘದ ಮುಖಂಡರಾದ ಬಿ.ಕೆ.ಇಮ್ತಿಯಾಜ್, ವಿಲ್ಸನ್, ಯೋಗೀಶ್ ಜಪ್ಪಿನಮೊಗರು, ಲ್ಯಾನ್ಸಿ ನೊರೊನ್ಹಾ, ಹರೀಶ್ ಕೆರೆಬೈಲ್, ಚಂದ್ರಹಾಸ ಕುತ್ತಾರ್, ಅಬ್ದುಲ್ಲ, ಫಾರೂಕ್ ಉಳ್ಳಾಲ್ ಮತ್ತಿತರರು ವಹಿಸಿದ್ದರು.

ಕಾಶ್ಮೀರಿಗಳ ಪರಕೀಯ ಭಾವಕ್ಕೆ ತಿದಿಯೂದಿರುವ ಅಫ್ಜಲ್ ಗುರುವನ್ನು ನೇಣಿಗೆ ಹಾಕಿರುವ ರೀತಿ

ಭಯೋತ್ಪಾದನೆ ಸಂಬಂಧಿತ ಅಪರಾಧಗಳಿಗೆ ಮರಣ ದಂಡನೆಗೆ ಗುರಿಯಾದ ಇತರ ವ್ಯಕ್ತಿಗಳೂ ಇದ್ದಾರೆ. ಅವರೆಲ್ಲರಿಗಿಂತ ಭಿನ್ನವಾಗಿ ಅಫ್ಜಲ್ ಗುರುವಿನ ಕ್ಷಮಾದಾನ ಅರ್ಜಿಯನ್ನು ತಿರಸ್ಕರಿಸಿದ ಕೂಡಲೇ ನೇಣಿಗೆ ಹಾಕಲಾಗಿದೆ. ಇದು ವಿವಿಧ ರಾಜಕೀಯ ಪರಿಗಣನೆಗಳಿಂದಾಗಿ ಕೈಗೊಂಡ ಕ್ರಮ ಎಂಬ ತೀರ್ಮಾನಕ್ಕೆ ಕಾಶ್ಮೀರದ ಜನತೆ ಬರಲು ಸಾಧ್ಯವಿದೆ. ಈ ನಡುವೆ, ಬಿಜೆಪಿ ಮತ್ತು ಕಾರ್ಪೊರೇಟ್ ಮಾಧ್ಯಮಗಳು ಕುರುಡು ದೇಶಭಕ್ತಿಯ ಕರ್ಕಶ ಪ್ರದರ್ಶನ ನಡೆಸಿವೆ, ವಿಜಯೋತ್ಸವದ ಕೇಕೆ ಹಾಕುತ್ತಿವೆ.

ಸೀತಾರಾಂ ಯೆಚೂರಿ

ಸಂಸತ್ತಿನ ಮೇಲೆ ದಾಳಿಯ ಮೊಕದ್ದಮೆಯಲ್ಲಿ ಮೊಹಮ್ಮದ್ ಅಫ್ಜಲ್ ಗುರುವನ್ನು ನೇಣಿಗೆ ಹಾಕಿದ ನಂತರ. ಹಲವು ಪ್ರಶ್ನೆಗಳು ಎದ್ದು ಬಂದಿವೆ. ಗೃಹಮಂತ್ರಿ ಸುಶೀಲ್ ಕುಮಾರ್ ಶಿಂಧೆಯವರ ಪತ್ರಿಕಾ ಸಮ್ಮೇಳನದ ನಂತರ ಈ ಪ್ರಶ್ನೆಗಳು ಇನ್ನಷ್ಟು ಗಟ್ಟಿಯಾಗಿವೆ. ಅಫ್ಜಲ್ ಗುರುವಿನ ಕ್ಷಮಾದಾನ ಅರ್ಜಿಯನ್ನು ತಿರಸ್ಕರಿಸಿದ ಮೇಲೆ ನ್ಯಾಯಾಲಯಗಳ ಮುಂದೆ ಯಾವುದೇ ಮನವಿಯನ್ನು ತಪ್ಪಿಸುವುದಕ್ಕಾಗಿ ಆತನನ್ನು ತ್ವರಿತವಾಗಿ ನೇಣಿಗೇರಿಸಲಾಯಿತು ಎಂದು ಅವರು ಒಪ್ಪಿಕೊಂಡಿದ್ದಾರೆ.

ಈ ಮೊಕದ್ದಮೆಯಲ್ಲಿ ದೀರ್ಘಕಾಲದ ವರೆಗಿನ ಕಾನೂನು ಮತ್ತು ನ್ಯಾಯಾಂಗ ಪ್ರಕ್ರಿಯೆ ನಡೆದಿದೆ. ಅಫ್ಜಲ್ ಗುರುವನ್ನು ಡಿಸೆಂಬರ್ 2002ರಲ್ಲಿ ಮರಣ ದಂಡನೆಗೆ ಗುರಿಪಡಿಸಲಾಯಿತು. ನಂತರ ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟಿಗೆ ಅದರ ವಿರುದ್ಧ ಅಪೀಲು ಮಾಡಿಕೊಳ್ಳಲಾಯಿತು. ಆಗಸ್ಟ್ 2005ರಲ್ಲಿ ಸುಪ್ರಿಂ ಕೋರ್ಟ್ ಮರಣ ದಂಡನೆಯನ್ನು ಎತ್ತಿ ಹಿಡಿದ ಮೇಲೆ ಆತನ ಪತ್ನಿಯ ಕ್ಷಮಾದಾನ ಅರ್ಜಿಯನ್ನು ಅಕ್ಟೋಬರ್ 2006ರಲ್ಲಿ ರಾಷ್ಟ್ರಪತಿಗಳಿಗೆ ಕಳಿಸಲಾಯಿತು. ರಾಷ್ಟ್ರಪತಿಗಳು ಫೆಬ್ರುವರಿ 3, 2013ರಂದು ಆ ಅರ್ಜಿಯನ್ನು ತಿರಸ್ಕರಿಸಿದರು.

ನಿರ್ಲಕ್ಷ್ಯದ ಕೃತ್ಯ

ಮರಣ ದಂಡನೆಯನ್ನು ಜಾರಿಗೊಳಿಸಿದ ರೀತಿಯ ಬಗ್ಗೆ ಬಂದಿರುವ ಟೀಕೆ ಪರಿಗಣಿಸಬೇಕಾದ್ದೇ. ಕ್ಷಮಾಧಾನ ಅರ್ಜಿಯನ್ನು ತಿರಸ್ಕರಿಸಿರುವ ಬಗ್ಗೆ ಶಿಕ್ಷೆಗೆ ಗುರಿಯಾದವನಿಗೆ ಮತ್ತು ಆತನ ಕುಟುಂಬಕ್ಕೆ ತಿಳಿಸಲಿಲ್ಲ, ಮತ್ತು ಆತನ ಕುಟುಂಬ ಈ ವಿಷಯದಲ್ಲಿ ನ್ಯಾಯಾಲಯಗಳ ಮೊರೆ ಹೋಗಲು ಸಮಯ ಕೊಡಲಿಲ್ಲ. ಅಫ್ಜಲ್ ಗುರುವಿನ ಕುಟುಂಬದವರು ಆತನನ್ನು ಕೊನೆಯ ಬಾರಿಗೆ ನೋಡಲು ಅವಕಾಶ ನೀಡಲಿಲ್ಲ. ಕ್ಷಮಾದಾನ ಅರ್ಜಿಯನ್ನು ತಿರಸ್ಕರಿಸುವುದನ್ನು ಮತ್ತು ನೇಣು ಹಾಕುವ ದಿನಾಂಕವನ್ನು ಕುಟುಂಬದವರಿಗೆ ತಿಳಿಸುವ ಪತ್ರವನ್ನು ರಿಜಿಸ್ಟರ್ಡ್ ಅಂಚೆ ಮೂಲಕ ಸ್ಪೀಡ್ ಪೋಸ್ಟಿನಲ್ಲಿ ಕಳಿಸಲಾಗಿದೆ ಎಂಬ ಸಂಗತಿ ಇದು ಇನ್ನಷ್ಟು ನಿರ್ಲಕ್ಷ್ಯದ ಕೃತ್ಯವಾಗಿ ಕಣ್ಣಿಗೆ ರಾಚಿದೆ.

ಈ ಸಮಯದಲ್ಲಿ ಈ ಶಿಕ್ಷೆಯ ಜಾರಿ ಇನ್ನೂ ಒಂದು ಹೆಚ್ಚು ಮಹತ್ವದ ಪ್ರಶ್ನೆಯನ್ನು ಎತ್ತಿದೆ. ಭಯೋತ್ಪಾದನೆ ಸಂಬಂಧಿತ ಅಪರಾಧಗಳಿಗೆ ಮರಣ ದಂಡನೆಗೆ ಗುರಿಯಾದ ಇತರ ವ್ಯಕ್ತಿಗಳೂ ಇದ್ದಾರೆ. ದೇವೇಂದ್ರಪಾಲ್ ಸಿಂಗ್ ಭುಲ್ಲರ್‌ನ ಕ್ಷಮಾದಾನ ಅರ್ಜಿ ತಿರಸ್ಕೃತವಾಗಿದೆ. ಇನ್ನೊಬ್ಬ ವ್ಯಕ್ತಿ ಬಲ್ವಂತ್ ಸಿಂಗ್ ರಾಜೊನ, ಪಂಜಾಬಿನ ಆಗಿನ ಮುಖ್ಯಮಂತ್ರಿ ಬಿಯಾಂತ್ ಸಿಂಗ್‌ರ ಹತ್ಯೆಯ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾದಾತ. ಇನ್ನು ಮೂವರು ರಾಜೀವ್ ಗಾಂಧಿ ಹತ್ಯೆಯ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾದವರು. ಅವರ ಮರಣ ದಂಡನೆಯನ್ನು ಸುಪ್ರಿಂ ಕೋರ್ಟ್ ಎತ್ತಿ ಹಿಡಿದಿದೆ. ರಾಷ್ಟ್ರಪತಿಗಳು ಅವರ ಕ್ಷಮಾದಾನ ಅರ್ಜಿಗಳನ್ನು ತಿರಸ್ಕರಿಸಿದ್ದಾರೆ. ನಂತರ ಅವರು ನ್ಯಾಯಾಲಯದ ಮೊರೆ ಹೋದರು. ಮದ್ರಾಸ್ ಹೈಕೋರ್ಟ್ ಅವರನ್ನು ನೇಣಿಗೇರಿಸದಂತೆ ತಡೆಯಾಜ್ಞೆ ನೀಡಿದೆ.

ರಾಜಕೀಯ ಪರಿಗಣನೆ

ಇವೆಲ್ಲಕ್ಕಿಂತ ಭಿನ್ನವಾಗಿ ಅಫ್ಜಲ್ ಗುರುವಿನ ಕ್ಷಮಾದಾನ ಅರ್ಜಿಯನ್ನು ತಿರಸ್ಕರಿಸಿದ ಕೂಡಲೇ ಆತನನ್ನು ನೇಣಿಗೆ ಹಾಕಲಾಗಿದೆ. ಇತರ ಸಂದರ್ಭಗಳಲ್ಲಿ ನ್ಯಾಯಾಂಗದ ತೀರ್ಪುಗಳ ಜಾರಿಯನ್ನು ರಾಜಕೀಯ ಪರಿಗಣನೆಗಳು ನಿರ್ಧರಿಸಿವೆ. ತಮಿಳುನಾಡಿನಲ್ಲಿ ರಾಜ್ಯ ವಿಧಾನ



ಸಭೆ ಮೂವರು ವ್ಯಕ್ತಿಗಳ ಮರಣ ದಂಡನೆಯನ್ನು ಆಜೀವನ ಜೈಲುವಾಸವಾಗಿ ಪರಿವರ್ತಿಸಬೇಕು ಎಂದು ಒಂದು ನಿರ್ಣಯವನ್ನು ಅಂಗೀಕರಿಸಿತು. ಪಂಜಾಬಿನ ಅಕಾಲಿ ದಳ ಸರಕಾರ ಪಂಜಾಬಿಗೆ ಸಂಬಂಧಪಟ್ಟ ಮೊಕದ್ದಮೆಗಳಲ್ಲಿ ಮರಣ ದಂಡನೆಯ ಜಾರಿಯನ್ನು ವಿರೋಧಿಸಿದೆ. ರಾಜೊನನನ್ನು ನೇಣಿಗೆ ಹಾಕುವುದನ್ನು ವಿರೋಧಿಸಿ ಪಂಜಾಬಿನಲ್ಲಿ ಬಂದ್ ನಡೆಸಲಾಯಿತು. ಅದನ್ನು ಕಂಡು ಕೇಂದ್ರ ಸರಕಾರ ನೇಣು ಹಾಕುವುದಕ್ಕೆ ತಡೆ ಹಾಕಿತು.

ಇದರಿಂದ ಕಾಶ್ಮೀರದ ಜನತೆ ಅಫ್ಜಲ್ ಗುರುವನ್ನು ವಿವಿಧ ರಾಜಕೀಯ ಪರಿಗಣನೆಗಳಿಂದಾಗಿ ನೇಣಿಗೆ ಹಾಕಲಾಗಿದೆ, ಇದು ಒಂದು ಹೆಕ್ಕಿ ಮಾಡಿದ ಕೃತ್ಯ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿದೆ. ಅಫ್ಜಲ್ ಗುರುವನ್ನು ನೇಣಿಗೆ ಹಾಕಬೇಕು ಎಂಬ ಬಿಜೆಪಿ ಮತ್ತು ನರೇಂದ್ರ ಮೋದಿಯ ಅಬ್ಬರದ ಬೇಡಿಕೆಗೆ ಯುಪಿಎ ಸರಕಾರ ಸ್ಪಂದಿಸಿದೆ. ಇದರಿಂದ ಒಬ್ಬ ಕಾಶ್ಮೀರಿಗೆ ಏನಾದರೂ ಪರವಾಗಿಲ್ಲ, ದೇಶದ ಬೇರೆ ಭಾಗಗಳವರಿಗೆ ಮಾತ್ರ ಏನೂ ಆಗಬಾರದು ಎಂದಿದೆ ಎಂಬ ಭಾವನೆ ಅವರಲ್ಲಿ ಗಟ್ಟಿಗೊಳ್ಳುತ್ತದಷ್ಟೇ. ಕಾಶ್ಮೀರದಲ್ಲಿ ಎದುರಿಸುವ ಸಮಸ್ಯೆಗಳು ಇನ್ನಷ್ಟು ಜಟಿಲಗೊಳ್ಳುತ್ತವೆ. ಅತ್ತ ಯುಪಿಎ ಸರಕಾರ ರಾಜಕೀಯ ಸಂವಾದ ಮತ್ತು ಒಂದು ರಾಜಕೀಯ ಪರಿಹಾರಕ್ಕೆ ಯಾವುದೇ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವಲ್ಲಿಯಂತೂ ಸಂಪೂರ್ಣವಾಗಿ ವಿಫಲವಾಗಿದೆ. ಈಗ ಅಫ್ಜಲ್ ಗುರುವನ್ನು ನೇಣಿಗೆ ಹಾಕಿರುವ ರೀತಿ ಇನ್ನಷ್ಟು ಪರಕೀಯ ಭಾವಕ್ಕೆ, ಪ್ರತ್ಯೇಕವಾದಿ ಭಾವನೆಗಳ ಬೆಂಕಿಗೆ ತುಪ್ಪ ಸುರಿಯಲಿದೆಯಷ್ಟೇ.

ಮರಣ ದಂಡನೆಯನ್ನೇ ರದ್ದು ಮಾಡಬೇಕು ಎಂಬ ವಾದ ಸಾಕಷ್ಟು ಬಲಯುತವಾದದ್ದು, ಬಹಳಷ್ಟು ಪ್ರಸ್ತುತವಾದದ್ದು ಕೂಡ. ಸಿಪಿಐ(ಎಂ) ಸದ್ಯಕ್ಕೆ ಈ ವಿಷಯದಲ್ಲಿ ತನ್ನ ನಿಲುವಿನ ಪರಾಮರ್ಶೆಯ ಕುರಿತು ಚರ್ಚೆಯಲ್ಲಿ ತೊಡಗಿದೆ.

ಈ ನಡುವೆ, ಬಿಜೆಪಿ ಮತ್ತು ಕಾರ್ಪೊರೇಟ್ ಮಾಧ್ಯಮಗಳು ಪ್ರದರ್ಶಿಸುತ್ತಿರುವ ಕರ್ಕಶ ಕುರುಡು ದೇಶಭಕ್ತಿ ಮತ್ತು ವಿಜಯೋತ್ಸವದ ಕೇಕೆ ಖಂಡನಾರ್ಹ. ಬಿಜೆಪಿಗೆ ಭಯೋತ್ಪಾದನೆಯ ವಿರುದ್ಧ ಹೋರಾಟ ಅವರ ಸಂಕುಚಿತ ರಾಜಕೀಯ ಹಿತಗಳನ್ನು ಈಡೇರಿಸಿ ಕೊಳ್ಳುವ ಒಂದು ಪಕ್ಷಪಾತಪೂರಿತ ರಾಜಕೀಯ ವೇದಿಕೆಯಾಗಿ ಬಿಟ್ಟಿದೆ.

ನೀವು 'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ಚಂದಾದಾರರೇ? ಏಜೆನ್ಸಿದಾರರೇ? ಹಾಗಿದ್ದರೆ ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ . ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ, C/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ಸಂಪಾದಕೀಯ ವಿಭಾಗಕ್ಕೆ ಸಂಬಂಧಿಸಿದ ಸೂಚನೆಗಳು

ಪತ್ರಿಕೆಗೆ ಕಳುಹಿಸಲಾಗುವ ಲೇಖನಗಳು, ವರದಿ, ಬರಹಗಳು, ಪೋಟೋ ಇತ್ಯಾದಿಗಳನ್ನು ಎಂದಿನಂತೆ ಮಹಾಲಕ್ಷ್ಮಿ ಬಡಾವಣೆಯ ಈ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು.

'ಜನಶಕ್ತಿ ಕನ್ನಡ ವಾರಪತ್ರಿಕೆ'
ಇಎಂಎಸ್ ಭವನ, ನಂ: 37/ಎ, 8 ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಹತ್ತಿರ, ಮಹಾಲಕ್ಮಿ ಬಡಾವಣೆ, ಬೆಂಗಳೂರು-560086. ಫೋ: 080-23491114

ಲೇಖನ-ವರದಿ ಮತ್ತು ಫೋಟೋಗಳನ್ನು ಮೈಲ್ ಮಾಡುವವರು ಪತ್ರಿಕೆಯ ಈ ಕೆಳಕಂಡ ಇ-ಮೈಲ್ ವಿಳಾಸಕ್ಕೆ ಕಳುಹಿಸುವುದು.
js_weekly@yahoo.com
ನಿಮ್ಮ ಲೇಖನ-ವರದಿಗಳು ನುಡಿ ತತ್ರಾಂಶ (nudi 01e)ದಲ್ಲಿರಲಿ.

-ಸಂಪಾದಕರು

ಸಂಪರ್ಕಕ್ಕೆ :
ಆರ್. ರಾಮಕೃಷ್ಣ : **9448505789**

ತುರ್ತು ವಿಸ್ತರಣೆ ಮತ್ತು ಸಮರಶೀಲ ಹೋರಾಟಗಳಿಗೆ ಆದ್ಯತೆ

ಕೃಷಿ ಕೂಲಿಕಾರರ 5ನೇ ರಾಜ್ಯ ಸಮ್ಮೇಳನದ ನಿರ್ಧಾರ

ರಾಜ್ಯದ ಒಟ್ಟು 30 ಜಿಲ್ಲೆಗಳ ಪೈಕಿ ಕನಿಷ್ಠ 25 ಜಿಲ್ಲೆಗಳ 75 ಕ್ಕೂ ಹೆಚ್ಚು ತಾಲೂಕುಗಳಿಗೆ ಸಂಘಟನೆಯನ್ನು ತುರ್ತಾಗಿ ವಿಸ್ತರಣೆ ಮಾಡಿ ಕೃಷಿ ಕೂಲಿಕಾರರನ್ನು ತೀವ್ರವಾಗಿ ಬಾಧಿಸುತ್ತಿರುವ ಸಮಸ್ಯೆಗಳು ಹಾಗೂ ಸ್ಥಳೀಯ ಬೇಡಿಕೆಗಳಿಗಾಗಿ ಸಮರಶೀಲ ಹೋರಾಟಗಳನ್ನು ನಡೆಸಲು ನಿರ್ಧರಿಸುವುದರೊಂದಿಗೆ, ದಲಿತ ಕೃಷಿ ಕೂಲಿಕಾರರ ಸಂಘಟನೆಯ ಪ್ರವರ್ತಕ, ತೆಲಂಗಾಣ ರೈತರ ಸಶಸ್ತ್ರ ಹೋರಾಟದ ಮಹಾನ್ ನಾಯಕ ಕಾಮ್ರೇಡ್ ಪಿ. ಸುಂದರಯ್ಯ ಅವರ ಜನ್ಮ ಶತಾಬ್ಧಿ ಹೋರಾಟದ ಸ್ಮರಣಾರ್ಥ, ಕೊಪ್ಪಳ ಜಿಲ್ಲೆ, ಗಂಗಾವತಿಯಲ್ಲಿ ಕಾಮ್ರೇಡ್ ಕೆ. ಬಾಳಪ್ಪ ನಗರ, ಕಾಮ್ರೇಡ್ ಡೇವಿಡ್ ವೇದಿಕೆಯಲ್ಲಿ ಇದೇ ಫೆಬ್ರವರಿ 7 ರಂದು ಆರಂಭವಾದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 5ನೇ ರಾಜ್ಯ ಸಮ್ಮೇಳನವು ಫೆ. 9 ರಂದು ಯಶಸ್ವಿಯಾಗಿ ಮುಕ್ತಾಯವಾಯಿತು. ರಾಜ್ಯದ ಮಂಡ್ಯ, ಚಿಕ್ಕಬಳ್ಳಾಪುರ, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೀದರ್, ಬೆಳಗಾವಿ, ಗದಗ, ದಾವಣಗೆರೆ, ಉಡುಪಿ, ದ.ಕ; ಮತ್ತು ಉ.ಕ. ಜಿಲ್ಲೆಗಳಿಂದ ಒಟ್ಟು 241 ಜನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರಲ್ಲಿ 77 ಜನ ಮಹಿಳೆಯರು.



ಎ. ವಿಜಯರಾಘವನ್

ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ : ಸಮ್ಮೇಳನದ ಅಂಗವಾಗಿ ಕೃಷಿ ಕೂಲಿಕಾರರ ಬೃಹತ್ ಮೆರವಣಿಗೆಯೊಂದನ್ನು ಏರ್ಪಡಿಸಲಾಗಿತ್ತು. ಸಿಬಿಎಸ್ ವೃತ್ತದಿಂದ ಆರಂಭಗೊಂಡ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬಸ್ ನಿಲ್ದಾಣದ ಎದುರು ನಿರ್ಮಿಸಲಾಗಿದ್ದ ಬೃಹತ್ ವೇದಿಕೆಯ ಮುಂದೆ ಸಮಾವೇಶಗೊಂಡಿತು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ, ಹಾಗೂ ಮಾಜಿ ಸಂಸದ ಎ. ವಿಜಯರಾಘವನ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ "ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಭ್ರಷ್ಟಾಚಾರದ ತನ್ನ ವಿರಾಟ ಸ್ವರೂಪವನ್ನು ಮರೆಮಾಚಲು ರಾಹುಲ್ ಗಾಂಧಿಯನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸಲು ಹೊರಟಿದೆ. ಆದರೆ ಶ್ರೀಮಂತರಿಗೆ ರಿಯಾಯಿತಿಗಳನ್ನು ನೀಡುವ ಮತ್ತು ಬಡವರ ಮೇಲೆ ಹೊರೆಗಳನ್ನು ಹೇರುವ ಉದಾರೀಕರಣದ ನೀತಿಗಳನ್ನು ಮಾತ್ರ ಅದು ಕೈಬಿಡುತ್ತಿಲ್ಲ. ವಿವಿಧ ಯೋಜನೆಗಳ ಸಬ್ಸಿಡಿ ಹಣವನ್ನು ಫಲಾನುಭವಿಗಳ

ಚಂದ್ರಪ್ಪ ಹೊಸ್ಕೇರಾ

ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ ಮಾಡಲು ಮುಂದಾಗುವ ಮೂಲಕ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಡವರ ಓಟುಗಳನ್ನು ಬುಟ್ಟಿಗೆ ಹಾಕಿಕೊಳ್ಳಬಹುದೆಂದು ಅದು ಕನಸು ಕಾಣುತ್ತಿದೆ. ಶಿಕ್ಷಣ, ಆರೋಗ್ಯ, ಆಹಾರ ಮೊದಲಾದ ಕ್ಷೇತ್ರಗಳ ವಿವಿಧ ಯೋಜನೆಗಳಿಗೆ ಇದುವರೆಗೆ ಕೇಂದ್ರ ಸರ್ಕಾರ ನೀಡುತ್ತಿದ್ದ ಸಬ್ಸಿಡಿಯನ್ನು ಹಂತ ಹಂತವಾಗಿ ಕಡಿತ ಮಾಡಿ ಜನಸಾಮಾನ್ಯರ ಮೇಲೆ ಪೂರ್ಣ ಪ್ರಮಾಣದ ಭಾರ ಹೇರಲು ನೇರ ನಗದು ವರ್ಗಾವಣೆಗೆ ಅದು ಮುಂದಾಗಿದೆ. ಜೀವನಾವಶ್ಯಕ ಆಹಾರ ಸಾಮಾಗ್ರಿಗಳನ್ನು ಮಾರುಕಟ್ಟೆಯಿಂದ ಖರೀದಿಸಿದ ಆರು ತಿಂಗಳ ಬಳಿಕ ಸರ್ಕಾರ ಫಲಾನುಭವಿಗಳಿಗೆ ಸಬ್ಸಿಡಿ ಹಣವನ್ನು ವರ್ಗಾಯಿಸಲಿದ್ದು ಅದಕ್ಕಾಗಿ ಜನಸಾಮಾನ್ಯರು ಬ್ಯಾಂಕುಗಳಿಗೆ ಅಲೆದ್ಹಲೆದು ಸುಸ್ತಾಗಿ ಸಬ್ಸಿಡಿ ಹಣವನ್ನು ಕೇಳದಂತಹ ಪರಿಸ್ಥಿತಿಯನ್ನು ನಿರ್ಮಿಸುವ ದುರುದ್ದೇಶ ಕಾಂಗ್ರೆಸ್ ಸರ್ಕಾರದ್ದು. ಆದರೆ ಕೃಷಿ ಕೂಲಿಕಾರರ ಸಂಘ ಕೇಂದ್ರ ಸರ್ಕಾರದ ಈ



ದುರುದ್ದೇಶವನ್ನು ವಿಫಲ ಗೊಳಿಸಬೇಕು. ಸಂಘದ ಕಾರ್ಯಕರ್ತರು ಮನೆ ಮನೆಗಳಿಗೆ ತೆರಳಿ ನೇರ ನಗದು ವರ್ಗಾವಣೆಯ ಹಿಂದಿನ ಮೋಸವನ್ನು ಜನರಿಗೆ ಮನವರಿಕೆ ಮಾಡಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಠೇವಣಿ ಕಳೆದುಕೊಳ್ಳುವಂತೆ ಮಾಡಬೇಕು" ಎಂದು ಹೇಳಿದರು.

"ಆರ್ಥಿಕ ನೀತಿಗಳ ವಿಷಯದಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷಕ್ಕೂ ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಪಕ್ಷಕ್ಕೂ ಏನೂ ವ್ಯತ್ಯಾಸವಿಲ್ಲ" ಎಂದು ಆರೋಪಿಸಿದ ಅವರು "ಕೇಂದ್ರ ಕಾಂಗ್ರೆಸ್ ಸರ್ಕಾರ ತರಂಗಾಂತರ ಲೂಟಿಯ ಮೂಲಕ ಆಕಾಶದಲ್ಲಿ ಭ್ರಷ್ಟಾಚಾರದ ದಾಖಲೆಯನ್ನು ನಿರ್ಮಾಣ ಮಾಡಿದ್ದರೆ ಕರ್ನಾಟಕದ ಬಿಜೆಪಿ ಸರ್ಕಾರ ಭೂ ಗರ್ಭವನ್ನು ಬಗೆದು ಗಣಿ ಲೂಟಿಯ ದಾಖಲೆಯನ್ನು ಸ್ಥಾಪಿಸಿದೆ" ಎಂದು ಲೇವಡಿ ಮಾಡಿದರು.

ಇದೇ ಸಂದರ್ಭದಲ್ಲಿ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರು ಹಾಗೂ ಆಂಧ್ರ ಪ್ರದೇಶ ವಿಧಾನಸಭೆಗೆ 4 ಬಾರಿ ಶಾಸಕರಾಗಿ ಆಯ್ಕೆ ಯಾಗಿದ್ದ ಕಾಮ್ರೇಡ್ ಪಿ. ರಾಮಯ್ಯ ಅವರು ಮಾತನಾಡಿ "ಕೇಂದ್ರದ ಕಾಂಗ್ರೆಸಿಗೆ ಮತ್ತು ರಾಜ್ಯದ ಬಿಜೆಪಿಗೆ ಎಡ ಪಕ್ಷಗಳೇ ನಿಜವಾದ ಪರ್ಯಾಯ" ಎಂದು ಸ್ಪಷ್ಟಪಡಿಸಿದರು. ಮೊದಲು ಕೇರಳದಲ್ಲಿ ಮತ್ತು ನಂತರ ಪಶ್ಚಿಮ ಬಂಗಾಳ ಹಾಗೂ ತ್ರಿಪುರ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಪ್ರಗತಿಪರವಾದ ಭೂಸುಧಾರಣೆಗಳನ್ನು ಜಾರಿಗೆ ತಂದು ಭೂರಹಿತ ಗೇಣಿದಾರರಿಗೆ ಮತ್ತು ದಲಿತ ಕುಟುಂಬಗಳಿಗೆ ಹೆಚ್ಚುವರಿ ಭೂಮಿಯನ್ನು ವಿತರಣೆ ಮಾಡುವ ಮೂಲಕ ಗ್ರಾಮೀಣ ಭಾರತವನ್ನು ಪಾಳೆಗಾರಿ ಹಿಡಿತದಿಂದ ಬಿಡುಗಡೆಗೊಳಿಸುವ ಸ್ಪಷ್ಟವಾದ ಪರ್ಯಾಯ ದಾರಿಯನ್ನು ದೇಶದ ಮುಂದಿಟ್ಟಿವೆ" ಎಂದ ಹೇಳಿದ ಅವರು ಕರ್ನಾಟಕದ ಶೋಷಿತರು ಹಾಗೂ ದಲಿತರು ಎಡಶಕ್ತಿಗಳನ್ನು ಬೆಂಬಲಿಸಿ ಬಲಪಡಿಸುವುದಾಗಬೇಕು ಎಂದು ಕರೆ ನೀಡಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೃಷಿ ಕೂಲಿಕಾರರ ಸಂಘದ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ, ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಆರಂಭದಲ್ಲಿ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರೂ ಹಾಗೂ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ಜಿ. ನಾಗರಾಜ ಎಲ್ಲರನ್ನೂ ಸ್ವಾಗತಿಸಿದರು. ಕೊನೆಯಲ್ಲಿ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಹುಸೇನಪ್ಪ ವಂದಿಸಿದರು. ಸ್ಥಳೀಯ ಎಸ್ಎಫ್ಐ ತಂಡದವರು ಮತ್ತು ಬಾಗೇಪಲ್ಲಿ ತೆಲುಗು ಕಲಾ ತಂಡದವರು ಕ್ರಾಂತಿಕಾರಿ ಹಾಡುಗಳನ್ನು ಹಾಡುವ ಮೂಲಕ ಸಭಿಕರಲ್ಲಿ ಹೋರಾಟದ ಭಾವನೆಗಳನ್ನು ಬಡಿದೆಬ್ಬಿಸಿದರು.


ಬಹಿರಂಗ ಸಭೆಯಲ್ಲಿ ಜನಸ್ತೋಮ

ಜನಶಕ್ತಿ
ಕನ್ನಡ ವಾರಪತ್ರಿಕೆ

ಪ್ರತಿನಿಧಿಗಳ ಅಧಿವೇಶನ :

ಫೆ. 7 ರಂದು ಸಂಜೆ 6 ಗಂಟೆಗೆ ಸಮ್ಮೇಳನದ ಸಭಾಂಗಣದ ಆವರಣದಲ್ಲಿ ರಾಜ್ಯ ಸಮಿತಿಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಯವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನದ ಕಲಾಪಗಳಿಗೆ ಚಾಲನೆ ನೀಡಿದರು. ಅನಂತರ ಎಲ್ಲರೂ ಸಾಲಾಗಿ ತೆರಳಿ ಹುತಾತ್ಮರ ಸ್ತಂಭಕ್ಕೆ ನಮನ ಸಲ್ಲಿಸಿದರು. ಸಮ್ಮೇಳನದ ಕಲಾಪಗಳನ್ನು ನಡೆಸಲು ಜಿ.ಎನ್. ನಾಗರಾಜ, ಭೀಮಶೆಟ್ಟಿ ಯಂಪಳ್ಳಿ, ರಾಜೀವ ಪಡುಕೋಣೆ, ಸರೋಜಮ್ಮ ಮತ್ತು ಅಮಿನಾಬಿ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಅಗಲಿದ ಹೋರಾಟಗಾರರಿಗೆ ಸಮ್ಮೇಳನವು ಎರಡು ನಿಮಿಷಗಳ ಮೌನ ಆಚರಿಸುವ ಮೂಲಕ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿತು.

ಪ್ರತಿನಿಧಿಗಳ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದ ಕಾಮ್ರೆಡ್ ವಿಜಯರಾಘವನ್ "ಅಖಿಲ ಭಾರತ ಕೃಷಿ ಕೂಲಿಕಾರರ 8ನೇ ಅಖಿಲ ಭಾರತ ಸಮ್ಮೇಳನ 2013 ನೇ ಸಾಲಿನ ಕೊನೆಯಲ್ಲಿ ಆಂಧ್ರಪ್ರದೇಶದಲ್ಲಿ ನಡೆಯಲಿದೆ. ಅದೇ ರೀತಿಯಲ್ಲಿ ಅಖಿಲ ಭಾರತ ಕಿಸಾನ್ ಸಭಾ ಸಮ್ಮೇಳನವೂ ನಡೆಯಲಿದೆ. ಕೃಷಿ ರಂಗದ ಮೇಲೆ ದಾಳಿಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ನಮ್ಮ ಸಮ್ಮೇಳನಗಳು ನಡೆಯುತ್ತಿವೆ. ನವ ಉದಾರವಾದಿ ನೀತಿಗಳ ಅನುಷ್ಠಾನ ಆರಂಭವಾದ ದಿನಗಳಿಂದ ಇಲ್ಲಿಯವರೆಗೆ ದೇಶದಲ್ಲಿ ಭೂರಹಿತರ ಪ್ರಮಾಣ 23% ದಿಂದ 42% ಕ್ಕೆ ಏರಿದೆ. ಕೃಷಿ ಸಬ್ಸಿಡಿಗಳನ್ನು ಕಡಿತಗೊಳಿಸಲಾಗಿದೆ. ಆತ್ಮಹತ್ಯೆಗಳು ಎಂಬ ಹೆಸರಿನ ರೈತರತ್ಯೆಗಳು ನಿಂತಿಲ್ಲ. ಒಟ್ಟು ಉತ್ಪಾದನೆಯಲ್ಲಿ ಕೃಷಿ ರಂಗದ ಪಾಲು 32% ದಿಂದ 16% ಕ್ಕೆ ಕುಸಿದಿದೆ. ರೈತರ ಕೈಯಿಂದ ಕೃಷಿಯನ್ನು ಕಿತ್ತುಕೊಂಡು ಕಂಪನಿಗಳಿಗೆ ಹಸ್ತಾಂತರಿಸಲು ಸರ್ಕಾರ ತುದಿಗಾಲ ಮೇಲೆ ನಿಂತಿದೆ.

1957 ರಲ್ಲಿ ಮೊಟ್ಟ ಮೊದಲ ಬಾರಿಗೆ ಕೇರಳದಲ್ಲಿ ಇ.ಎಂ.ಎಸ್. ನಂಬೂದರಿಪಾದ್ ಅವರ ಸರ್ಕಾರ ಭೂಸುಧಾರಣಾ ಕಾಯ್ದೆಯನ್ನು ಅಂಗೀಕರಿಸಿತು. ಮುಂದೆ 1967 ರಲ್ಲಿ ಸಿಪಿಐ(ಎಂ) ನೇತೃತ್ವದ ಎಡಪ್ರಜಾಸತ್ತಾತ್ಮಕ ರಂಗದ ಸರ್ಕಾರ ಅದನ್ನು ಜಾರಿಗೊಳಿಸಿ ಲಕ್ಷಾಂತರ ಮಂದಿ ಉಳುವವರನ್ನು ಭೂ ಒಡೆಯರನ್ನಾಗಿಸಿತು, 1977ರಲ್ಲಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ವಹಿಸಿಕೊಂಡ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರವೂ ಸಹ ವ್ಯಾಪಕವಾದ ಭೂಸುಧಾರಣೆಗಳನ್ನು ಜಾರಿಗೆ ತಂದಿತು. ಆದರೆ ಕಾಂಗ್ರೆಸ್ ಪಕ್ಷದ ಸರ್ಕಾರಗಳು ಎಲ್ಲಿಯೂ ಪರಿಣಾಮಕಾರಿ ಯಾದ ಭೂ ಸುಧಾರಣೆಗಳನ್ನು ಜಾರಿಗೆ ತರಲಿಲ್ಲ. ಇಂದು ಪರಿಸ್ಥಿತಿ ಇನ್ನೂ ಬದಲಾಗಿದೆ. ಸರ್ಕಾರಗಳು ಭೂಸುಧಾರಣೆಗಳ ಬಗ್ಗೆ ಮಾತನಾಡುವುದನ್ನೇ ಕೈಬಿಟ್ಟಿವೆ. ಅದರ ಬದಲು ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿ ಕಂಪನಿಗಳಿಗೆ ದಾನ



ಸಮ್ಮೇಳನದ ವೇದಿಕೆಯಲ್ಲಿ ಕಾಂ. ನಿತ್ಯಾನಂದ ಸ್ವಾಮಿ

ಮಾಡಲಾಗುತ್ತಿದೆ. ಭೂರಹಿತರ ಸಂಖ್ಯೆ ಬೆಳೆಯುತ್ತಿರುವುದರ ಬಗ್ಗೆ ನಮ್ಮ ಸಂಘ ಚಿಂತಿಸಬೇಕಾಗಿದೆ. ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವವರ ಹಾವಳಿ ಯಿಂದಾಗಿ ಒಬ್ಬ ಕೃಷಿ ಕೂಲಿಕಾರ ಮನೆಕಟ್ಟಿಕೊಳ್ಳಲು ತುಂಡು ಭೂಮಿಯನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಭೂಮಿಯ ಬೆಲೆ ಎಲ್ಲ ಎಲ್ಲೆ ಮೀರಿದೆ.

ಕೇರಳದಲ್ಲಿ ನಮ್ಮ ಸಂಘ ಇತ್ತೀಚೆಗೆ ಇನ್ನೊಂದು ಭೂ ಚಳುವಳಿಯನ್ನು ಯಶಸ್ವಿಯಾಗಿ ನಡೆಸಿತು. ಕೇರಳದಲ್ಲಿ 90% ರಷ್ಟು ಕುಟುಂಬಗಳಿಗೆ ಭೂಮಿ ಇದೆ. ಭೂಮಿ ಇಲ್ಲದ ಬಡವರ ಸಭೆಗಳನ್ನು ಏರ್ಪಡಿಸಲಾಯಿತು. ಸಾವಿರಾರು ಜನ ಬಂದು ಸೇರತೊಡಗಿದರು. ಸರ್ಕಾರಿ ಹಾಗೂ ಹೆಚ್ಚುವರಿ ಭೂಮಿಯನ್ನು ಗುರುತಿಸಲಾಯಿತು. ಒಂದು ಲಕ್ಷ ಮಂದಿ ಜೈಲಿಗೆ ಹೋಗಲು ಸಿದ್ಧತೆ ಮಾಡಿಕೊಂಡ ನಂತರ ಭೂ ಆಕ್ರಮಣ ಚಳುವಳಿಗೆ ಕರೆ ಕೊಡಲಾಯಿತು. ಚಳುವಳಿ 17 ದಿನಗಳವರೆಗೆ ನಡೆಯಿತು. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರ ಒಬ್ಬರನ್ನೂ ಬಂಧಿಸಿ ಜೈಲಿಗೆ ಕಳುಹಿಸಲು ಧೈರ್ಯ ತೋರಲಿಲ್ಲ. ಆಕ್ರಮಿತ ಭೂಮಿಯಿಂದ ಯಾರನ್ನೂ ಹೊರಗಟ್ಟಲು ಮುಂದಾಗಲಿಲ್ಲ- ಬದಲಾಗಿ ಚಳುವಳಿಯ ಮುಖಂಡರನ್ನು ಮಾತುಕತೆಗೆ ಆಹ್ವಾನಿಸಿ, ನಿರ್ದಿಷ್ಟ ಅವಧಿಯೊಳಗೆ ಆಕ್ರಮಿತ ಭೂಮಿಯನ್ನು ವಿತರಿಸುವ ಭರವಸೆಯನ್ನು ನೀಡಿತು. ಈ ರೀತಿಯ ಸಮರ ಶೀಲ ಹೋರಾಟಗಳನ್ನು ನಮ್ಮ ಸಂಘ ಆಂಧ್ರ ಪ್ರದೇಶದಲ್ಲಿಯೂ ಯಶಸ್ವಿಯಾಗಿ ಮಾಡಿದೆ. ಕರ್ನಾಟಕದಲ್ಲಿಯೂ ಇಂತಹ ಚಳುವಳಿಯನ್ನು ಕಟ್ಟಿ ಬೆಳೆಸುವ ಬಗ್ಗೆ ಸಮ್ಮೇಳನ ಚರ್ಚಿಸಬೇಕು ಎಂದು ಸಂಗಾತಿ ವಿಜಯ ರಾಘವನ್ ಹೇಳಿದರು.

ಎಡ ರಾಜಕೀಯ ಪಕ್ಷಗಳ ಮತ್ತು ಸಂಘಟನೆಗಳ ಒತ್ತಡದಿಂದಾಗಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕೇಂದ್ರ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿದ್ದರೂ ಅದನ್ನು ಮುಂದುವರೆಸುವ ಮತ್ತು ವಿಸ್ತರಿಸುವ ಆಸಕ್ತಿ ಅದಕ್ಕಿಲ್ಲ. ಪ್ರತಿ ವರ್ಷ ಯೋಜನೆಯ ಜಾರಿಗಾಗಿ ಹೆಚ್ಚು ಹೆಚ್ಚು ಹಣವನ್ನು ಒದಗಿಸುವ ಬದಲು ಕಡಿತ ಮಾಡುತ್ತಿದೆ. ಯೋಜನೆಯ ಹಣ ಪೋಲಾಗುವುದನ್ನು ತಡೆಯಲು ದೃಢವಾದ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಈ ಎಲ್ಲ ವಿಷಯಗಳನ್ನು ಜನರಿಗೆ ನಾವು ಮನವರಿಕೆ ಮಾಡಿ ಬಲಿಷ್ಠವಾದ ಚಳುವಳಿಯನ್ನು ಕಟ್ಟಬೇಕಾಗಿದೆ. ಮಹಿಳಾ ಕೃಷಿ ಕೂಲಿಕಾರರ ಸಮಸ್ಯೆಗಳಿಗಾಗಿ ಹಾಗೂ ಅವರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳ ವಿರುದ್ಧ ಮತ್ತು ದಲಿತರ ಬೇಡಿಕೆಗಳಿಗಾಗಿ ಹಾಗೂ ಅವರು ಅನುಭವಿಸುತ್ತಿರುವ ಅಸ್ಪೃಶ್ಯತಾ ಆಚರಣೆಗಳ



ಸಮ್ಮೇಳನದಲ್ಲಿ ಪ್ರತಿನಿಧಿಗಳು

ವಿರುದ್ಧ ಸಮರಶೀಲವಾದ ಹೋರಾಟಗಳನ್ನು ಸಂಘಟಿಸಬೇಕು ಎಂದು ಹೇಳಿದ ಅವರು ಸಮರಶೀಲವಾದ ಹೋರಾಟಗಳು ಸಾಧ್ಯವಾಗಬೇಕಾದರೆ ಸಂಘಟನೆಯನ್ನು ಸದಸ್ಯತ್ವ, ಗ್ರಾಮ ಘಟಕ ಹಾಗೂ ವಿವಿಧ ಹಂತದ ಸಮಿತಿಗಳ ಆಧಾರದಲ್ಲಿ ವಿಸ್ತರಿಸಿ ಬಲಪಡಿಸಬೇಕೆಂದು ಹೇಳಿದರು.

ಅನಂತರ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ 4 ವರ್ಷಗಳ ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ವರದಿಯ ಮೇಲೆ ಸುಮಾರು 5 ಗಂಟೆಗಳ ಕಾಲ ನಡೆದ ಚರ್ಚೆಯಲ್ಲಿ ಒಟ್ಟು 47 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಅವರ ಪೈಕಿ 6 ಜನ ಮಹಿಳಾ ಪ್ರತಿನಿಧಿಗಳು. ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಪ್ರತಿನಿಧಿಗಳು ವರದಿಯ ಮುಖ್ಯ ಅಂಶಗಳನ್ನು ಸಮರ್ಥಿಸಿ ಮಾತನಾಡಿದರಲ್ಲದೆ ಮುಂದಿನ ದಿನಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗಾಗಿ, ಕೂಲಿ ಹೆಚ್ಚಳಕ್ಕಾಗಿ, ರೇಷನ್ ವ್ಯವಸ್ಥೆಯ ಸಾರ್ವತ್ರೀಕರಣಕ್ಕಾಗಿ ಹಾಗೂ ಮನೆ ನಿವೇಶನ ಮತ್ತು ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಅಲ್ಲದೆ ಜಾತಿ ಅಸ್ಪೃಶ್ಯತೆಯ ವಿರುದ್ಧ ಸಂಘವು ರಾಜ್ಯವ್ಯಾಪಿ ಬಲಿಷ್ಠವಾದ ಹೋರಾಟಗಳನ್ನು ಹಮ್ಮಿಕೊಳ್ಳಬೇಕೆಂದು ಒತ್ತಾಯಿಸಿದರು.

ರಾಜ್ಯ ಸಮಿತಿಯ ಪರವಾಗಿ ಚರ್ಚೆಗೆ ಉತ್ತರ ನೀಡಿದ ಚಂದ್ರಪ್ಪ ಹೊಸ್ಕೇರಾ, ಪ್ರತಿನಿಧಿಗಳು ನೀಡಿದ ಎಲ್ಲ ಸಲಹೆ ಸೂಚನೆಗಳನ್ನು ಸ್ವಾಗತಿಸಿದರು. ಸಂಘಟನೆಯನ್ನು ಬಲಪಡಿಸುವ ಅಂಗವಾಗಿ ರಾಜ್ಯ ಕೇಂದ್ರವನ್ನು ಬಲಪಡಿಸುವ, ಪ್ರಥಮ ಆದ್ಯತೆಯ ತಾಲೂಕುಗಳಿಗೆ ತಲಾ ಇಬ್ಬರಂತೆ, ದ್ವಿತೀಯ ಆದ್ಯತೆಯ ತಾಲೂಕುಗಳಿಗೆ ಕನಿಷ್ಠ ತಲಾ ಒಬ್ಬರಂತೆ ಮತ್ತು ತೃತೀತ ಆದ್ಯತೆಯ ತಾಲೂಕುಗಳಿಗೆ ಸಂಘಟನೆಯ ಆವಶ್ಯಕತೆಗನುಗುಣವಾಗಿ ಪೂರ್ಣಕಾಲದ ಕಾರ್ಯಕರ್ತರನ್ನು ನೇಮಿಸುವುದು ಮತ್ತು ಮುಂದಿನ 3 ವರ್ಷಗಳ ಅವಧಿಯಲ್ಲಿ ಪ್ರಥಮ ಆದ್ಯತೆಯ ತಾಲೂಕುಗಳ ಪ್ರತಿಯೊಂದು ಗ್ರಾಮಕ್ಕೂ ಸಂಘಟನೆಯನ್ನು ವಿಸ್ತರಿಸುವುದು, ದ್ವಿತೀಯ ಆದ್ಯತೆಯ ತಾಲೂಕುಗಳ ಕನಿಷ್ಠ ಒಂದು ಜಿಲ್ಲಾ ಪಂಚಾಯತ್ ಕ್ಷೇತ್ರದ ಎಲ್ಲ ಗ್ರಾಮಗಳಲ್ಲಿ ಸಂಘದ ಸದಸ್ಯತ್ವ ನೊಂದಾಯಿಸಿ ಗ್ರಾಮ ಘಟಕಗಳನ್ನು ರಚಿಸುವ ಮತ್ತು ತೃತೀಯ ಆದ್ಯತೆಯ ತಾಲೂಕುಗಳಲ್ಲಿ ಸಹೋದರ ಸಂಘಟನೆಗಳ ಸಹಕಾರ ಪಡೆದು ಸಂಘಟನೆಯನ್ನು ವಿಸ್ತರಿಸುವ ವರದಿಯ ಪ್ರಸ್ತಾವಗಳನ್ನು ಜಾರಿಗೊಳಿಸಿ ಮುಂದಿನ 3 ವರ್ಷಗಳಲ್ಲಿ 3ಲಕ್ಷ ಸದಸ್ಯತ್ವವನ್ನು ನೋಂದಾಯಿಸಿ 600 ಗ್ರಾಮ ಘಟಕಗಳನ್ನು ನಿರ್ಮಾಣಮಾಡಿ ಕ್ರಿಯಾಶೀಲಗೊಳಿಸುವ ಗುರಿಯನ್ನು ಅನುಮೋದಿಸಬೇಕೆಂದು ಕೋರಿದರು. ಈ ಎಲ್ಲಾ ಪ್ರಸ್ತಾವಗಳನ್ನು ಒಳಗೊಂಡಂತೆ ವರದಿಯನ್ನು ಸಮ್ಮೇಳನ



ಪುಟ 10 ಕ್ಕೆ

ವಿಶಿಷ್ಟ ಬದಲಾವಣೆಯನ್ನು ಬಿಂಬಿಸಿದ ಸಿಐಟಿಯುನ ಶಿರಸಿ ರಾಜ್ಯ ಸಮ್ಮೇಳನ

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ನಡೆದ ಸಿಐಟಿಯುನ 12 ನೇ ರಾಜ್ಯ ಸಮ್ಮೇಳನ ಹಲವು ಅಂಶಗಳಲ್ಲಿ ವಿಶಿಷ್ಟವಾಗಿತ್ತು . 24 ವರ್ಷಗಳ ನಂತರ ಕರ್ನಾಟಕದ ಉತ್ತರ ಭಾಗದಲ್ಲಿ ನಡೆದ ಈ ಸಮ್ಮೇಳನ ಕಳೆದ ಮೂರು ದಶಕಗಳ ಹೋರಾಟಗಳ, ಸಂಘಟನೆಯ ಛಾಪನ್ನು ಹೊಂದಿತ್ತು; ಅಲ್ಲದೆ, ಕಳೆದೆರಡು ದಶಕಗಳಲ್ಲಿ ಸಿಐಟಿಯುನಲ್ಲಿ ಕಂಡು ಬಂದಿರುವ ವಿಶಿಷ್ಟ ಬದಲಾವಣೆಯನ್ನೂ ಅದು ತೋರಿಸಿದೆ.


ವಿ.ಜಿ.ಕೆ. ನಾಯರ್

ಸಿಐಟಿಯುನ 12ನೇ ಕರ್ನಾಟಕ ರಾಜ್ಯ ಸಮ್ಮೇಳನ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಜನವರಿ 27ರಿಂದ 29ರ ವರೆಗೆ ನಡೆದಿದೆ. ಬೇರೇನೂ ಮಹತ್ವ ಇಲ್ಲವೆಂದರೂ ಶಿರಸಿಯಲ್ಲಿ ಇದು ನಡೆದಿದೆಯೆಂಬುದೇ ಈ ಸಮ್ಮೇಳನದ ಒಂದು ಗಮನಾರ್ಹ ಸಂಗತಿ. ಏಕೆಂದರೆ ಕರ್ನಾಟಕದ ಮೊದಲ ಅರಸೊತ್ತಿಗೆ ಕದಂಬರ ರಾಜಧಾನಿ ಬನವಾಸಿ ಇಲ್ಲಿಂದ ಸ್ವಲ್ಪವೇ ದೂರದಲ್ಲಿದೆ. ಪಂಪ ಮಹಾಕವಿ ನೆಲೆಸಿದ್ದ ಬನವಾಸಿ ಕನ್ನಡ ಸಾಹಿತ್ಯದ ತೊಟ್ಟಿಲು. ಅಷ್ಟೇ ಅಲ್ಲ, ಕರ್ನಾಟಕದ ಕಲೆ, ಸಂಸ್ಕೃತಿ ಮತ್ತು ರಾಜಕೀಯವನ್ನು ಒಂದು ಸಹಸ್ರಮಾನದ ಹಿಂದೆಯೇ ಬೆಳಗಿದ್ದ ಪ್ರದೇಶ. ಸಹ್ಯಾದ್ರಿ ಗಿರಿಪಂಕ್ತಿಯ ಶಿಖರದಲ್ಲಿ ನೆಲೆ ನಿಂತಿರುವ ಶಿರಸಿ ಪೂರ್ವದಲ್ಲಿ ಧುಮ್ಮಿಕ್ಕುವ ಜಲಪಾತದಿಂದ ಹೊಮ್ಮುವ ವರದೆಯ ನೀರಿನಷ್ಟೇ ವಿಶಿಷ್ಟ. ತುಂಗಭದ್ರೆಯ ಈ ಉಪನದಿ ಮುಂದೆ ಕೃಷ್ಣೆಯನ್ನು ಸೇರಿ ವಿಜಯವಾಡದ ಮೂಲಕ ಹಾದು ಬಂಗಾಳ ಕೊಲ್ಲಿಗೆ ಸೇರುತ್ತದೆ. ಅದೇ ನೀರು ಪಶ್ಚಿಮಕ್ಕೆ ಹರಿದು ಅಘನಾಶಿನಿಯಾಗಿ ಬೆಟ್ಟ-ಗುಡ್ಡಗಳ ಮೂಲಕ ಹಾದು ಅರಬ್ಬೀ ಸಮುದ್ರವನ್ನು ಸೇರುತ್ತದೆ. ತುಂಗಭದ್ರೆಯ ಬಲಭಾಗಲ್ಲಿ ವಿಜಯನಗರ ಸಾಮ್ರಾಜ್ಯದ ಮಹಾನ್ ಹಂಪಿ('ವಿಶ್ವ ಪರಂಪರೆ'ಯ ಸ್ಥಳ), ಎಡಭಾಗದಲ್ಲಿ ಹಲವು ಪ್ರಾಚೀನ ಕಟ್ಟಡಗಳು, ಮಸ್ಕಿಯ ಅಶೋಕನ ದಕ್ಷಿಣ ತುದಿಯ ಶಿಲಾಲೇಖ. ನಂತರ ಇದು ಬಿಜಾಪುರದ ಅರಸೊತ್ತಿಗೆಯ ಭಾಗವಾಯಿತು, ನೋಡಿ ಅನುಭವಿಸಿದಾಗ ಮಾತ್ರವೇ ಅರ್ಥವಾಗಬಲ್ಲ ಅದ್ಭುತ ಗೋಲ್‌ಗುಂಬಝ್ ಮತ್ತು ವಿಜಯನಗರ ಸಾಮ್ರಾಜ್ಯದ ಪತನ ತಂದ ಕಾಳಗದ ತಾಳಿಕೋಟೆಯೊಂದಿಗೆ. ತುಂಗಭದ್ರ ಕೂಡಲ ಸಂಗಮದಲ್ಲಿ ಕೃಷ್ಣೆಯನ್ನು ಸೇರುತ್ತದೆ. ಇದು 12ನೇ ಶತಮಾನದ ಸುಧಾರಣಾ ಚಳುವಳಿಯ ಪವಿತ್ರ ಕ್ಷೇತ್ರ, ಅದರ ಸ್ಥಾಪಕ ಬಸವೇಶ್ವರರು ಹುತಾತ್ಮರಾದ ಸ್ಥಳ. ನಂತರ ಕೃಷ್ಣಾ ನದಿ ಪೂರ್ವಕ್ಕೆ ಹರಿದು ತನ್ನ ಬಲಭಾಗದಲ್ಲಿ ಗುಂಟೂರಿಗೆ ಉತ್ತರದಲ್ಲಿ ವಿಜಯವಾಡಕ್ಕೆ, ದಕ್ಷಿಣದಲ್ಲಿ ಕಮ್ಯುನಿಸ್ಟ್ ಆಂದೋಲನದ ತೊಟ್ಟಿಲಿಗೆ ನೀರುಣ್ಣಿಸುತ್ತ ಸಾಗುತ್ತದೆ. ಶಿರಸಿಯಲ್ಲಿ ಬೀಳುವ ನೀರು ಈ ಎಲ್ಲ ಅದ್ಭುತಗಳನ್ನು ನಿರ್ಮಿಸಲು ನೆರವಾಗಿದ್ದು, ಇಂತಹ ಒಂದು ಸ್ಥಳದಲ್ಲಿ ಸಿಐಟಿಯುನ 12ನೇ ರಾಜ್ಯ ಸಮ್ಮೇಳನವನ್ನು ಜನವರಿ 27ರಂದು ಸಂಸತ್ ಸದಸ್ಯ ಮತ್ತು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಉದ್ಘಾಟಿಸಿದರು.

ಕಾರ್ಮಿಕರ ಪ್ರತಿನಿಧಿಗಳು ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದ್ದ, ಉತ್ತಮವಾಗಿ ಸಂಘಟಿಸಿದ್ದ ಸಮ್ಮೇಳನ ಇದಾಗಿತ್ತು.

12 ನೇ ಸಮ್ಮೇಳನ ಒಂದಲ್ಲ ಹಲವು ಅಂಶಗಳಲ್ಲಿ ವಿಶಿಷ್ಟವಾಗಿತ್ತು. 1989ರ ನಂತರ, ಅಂದರೆ ಕಳೆದ 24 ವರ್ಷಗಳಲ್ಲಿ ಮೊದಲ ಬಾರಿಗೆ ಸಿಐಟಿಯು ಸಮ್ಮೇಳನವನ್ನು ಕರ್ನಾಟಕದ ಉತ್ತರ ಭಾಗದಲ್ಲಿ ನಡೆಸಲು ಈ ಬಾರಿ ಸಾಧ್ಯವಾಗಿದೆ. 5ನೇ ಸಮ್ಮೇಳನ 1989ರಲ್ಲಿ ಹುಬ್ಬಳ್ಳಿಯಲ್ಲಿ ನಡೆದಿತ್ತು. ಅದು ಕರ್ನಾಟಕದ ಕಾರ್ಮಿಕ ವರ್ಗದ ಆಂದೋಲನದಲ್ಲಿ ಅಚ್ಚಳಿಯದ ಗುರುತು ಬಿಟ್ಟು ಹೋಗಿದೆ. ಅದು ಕಾಂ. ಬಿಟಿಆರ್ ಭಾಗವಹಿಸಿದ ಕೊನೆಯ ಸಮ್ಮೇಳನ. ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ, ಜತೆಗೆ ಹರಿಹರದಲ್ಲಿ ತುಂಗಭದ್ರಾ ನದಿಯ ದಡದಲ್ಲಿ, ಕಾಳಿ ನದಿ ದಂಡೆಯ ಹಸಿರು ಅರಣ್ಯಗಳ ದಾಂಡೇಲಿಯಲ್ಲಿ ಮತ್ತು ಬೆಳಗಾವಿಯಲ್ಲಿ ನಡೆದ ಹೋರಾಟಗಳ ಒಂದು ಸರಣಿಯ ಅಂತಿಮ ಭಾಗವಾಗಿ ಆ ಸಮ್ಮೇಳನ ಜರುಗಿತ್ತು. ಸಮಸ್ತ ಉತ್ತರ ಭಾಗದ ಆಂದೋಲನದ ಸಮರಶೀಲರು ದೊಡ್ಡ ಸಂಖ್ಯೆಯಲ್ಲಿ ಹುಬ್ಬಳ್ಳಿ ಸಮ್ಮೇಳನದ ಕೊನೆಯಲ್ಲಿ ನಡೆದ ರ್‍ಯಾಲಿಯಲ್ಲಿ ಭಾಗವಹಿಸಲು ಬಂದರು. ಇದಕ್ಕೆ ಮೊದಲು 1983ರಲ್ಲಿ ಹರಿಹರದಲ್ಲಿ 3ನೇ ಸಮ್ಮೇಳನ ನಡೆದಿತ್ತು. ಅದರಲ್ಲಿ ಕಾಂ.ಬಿಟಿಆರ್ ಜೊತೆಗೆ ಕಾಂ. ಜ್ಯೋತಿ ಬಸು ಭಾಗವಹಿಸಿದ್ದರು. ಹರಿಹರ ಸಮ್ಮೇಳನ ನಡೆದ ಮೂರು ದಶಕಗಳ ನಂತರ ಶಿರಸಿ ಸಮ್ಮೇಳನ ನಡೆಯುವಾಗ ಕಳೆದ ಮೂರು ದಶಕಗಳ ಹೋರಾಟಗಳ, ಸಂಘಟನೆಯ ಛಾಪು ಅದರ ಮೇಲಿತ್ತು, ಅಲ್ಲದೆ, ಕಳೆದೆರಡು ದಶಕಗಳಲ್ಲಿ ಸಿಐಟಿಯುನಲ್ಲಿ ಕಂಡು ಬಂದಿರುವ ವಿಶಿಷ್ಟ ಬದಲಾವಣೆಯನ್ನೂ ಅದು ತೋರಿಸಿದೆ.

ಸಿಐಟಿಯು ಆಂದೋಲನ ತೀವ್ರ ಬದಲಾವಣೆಯನ್ನು ಕಂಡಿದೆ. ಈ ಹಿಂದೆ ಆಂದೋಲನಕ್ಕೆ ಸಂಘಟಿತ ಕಾರ್ಮಿಕ ವರ್ಗ ನೇತೃತ್ವ ನೀಡುತ್ತಿತ್ತು; ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದ ಅದರ ಹಿಡಿತ ಬದಲಾಗಿ ಈಗ ಅದು ಹೊಸ ದುಡಿಮೆಗಾರರು ಬೃಹತ್ ಸಂಖ್ಯೆಯಲ್ಲಿರುವ ಆಂದೋಲನವಾಗಿದೆ. ಇವರು, 'ಸ್ವಯಂಸೇವೀ ಶ್ರಮಿಕರು' ಎಂದು ಕರೆಯಲ್ಪಡುವವರು, ವಿಶ್ವದ ಹಣಕಾಸು ಬಂಡವಾಳದ ಮುತುವರ್ಜಿಯಿಂದ ಹುಟ್ಟಿಕೊಂಡ ವಿಭಾಗ. ನವ-ಉದಾರವಾದದ ಅವಧಿಯಲ್ಲಿ ವಿಶ್ವ ಹಣಕಾಸು ಬಂಡವಾಳ ಕಾರ್ಮಿಕ ಆಂದೋಲನದ ಶಕ್ತಿಯನ್ನು ಉಡುಗಿಸಲು ಕಾರ್ಮಿಕ ವರ್ಗದ ಪುನರ್‌ರಚನೆ ಮಾಡಿ, ಆಮೂಲಕ ದುಡಿಮೆಗಾರರನ್ನು ಹದ್ದುಬಸ್ತಿನಲ್ಲಿಡಬಹುದೆಂದು ಯೋಚಿಸಿದರು. ಸಾರ್ವಜನಿಕ ವಲಯದಲ್ಲಿ ಕಾರ್ಮಿಕರ ನೇಮಕಾತಿಯ ಮೇಲೆ ನಿಷೇಧ ತಂದರು ಮತ್ತು ಐಸಿಡಿಎಸ್, ಮಧ್ಯಾಹ್ನದ ಊಟ, ಸರ್ವಶಿಕ್ಷಣ ಅಭಿಯಾನ, ಆರೋಗ್ಯ ಪಾಲನೆ ಮುಂತಾದ ಅವರ ಯೋಜನೆಗಳ ಜಾರಿಗೆ ಅವರಿಗೆ ಕೆಲಸಗಾರರು ಬೇಕಾಗಿತ್ತು. ಅದಕ್ಕಾಗಿ ಈ ವಿಭಾಗಗಳಲ್ಲಿನ ಸಂಘಟಿತ ದುಡಿಮೆಗಾರರನ್ನು ಅವಲಂಬಿಸುವ ಬದಲು ಅವರು ಬಲವಂತದಿಂದ 'ಸ್ವಯಂಸೇವೀ ದುಡಿಮೆ' ಎಂಬುದನ್ನು ಆರಂಭಿಸಿದರು. ಅವರು ಸಂಬಳಕ್ಕೆ ಅಲ್ಲ, 'ಗೌರವ ಧನ'ದ ಮೇಲೆ ಕೆಲಸ ಮಾಡುವಂತೆ ಮಾಡಿದರು. ಹೀಗೆ ಸಂಘಟಿತ ಕಾರ್ಮಿಕ ವರ್ಗದ ಶಕ್ತಿಯನ್ನು ಉಡುಗಿಸಬಹುದು ಎಂದು ವಿಶ್ವ ಹಣಕಾಸು ಬಂಡವಾಳದ ಏಜೆಂಟರು ಭಾವಿಸಿದರು. ಆದರೆ ನಡೆದದ್ದು ತದ್ವಿರುದ್ಧ. ವಾಸ್ತವವಾಗಿ ಅವರು ದುಡಿಮೆಯನ್ನು ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಿದರು, ಮುಖ್ಯವಾಗಿ ಮಹಿಳೆಯರನ್ನೇ ಈ ಕೆಲಸಗಳಿಗೆ ನೇಮಿಸಿದರು. ಉದಾರೀಕರಣದ ಮೊದಲು ಅರ್ಧ ಲಕ್ಷಕ್ಕಿಂತ ಕಡಿಮೆ ಸದಸ್ಯತ್ವ ಇದ್ದ ಸಿಐಟಿಯು ಸಂಖ್ಯಾಬಲ ಐದು ಪಟ್ಟು ಹೆಚ್ಚಿ ಈಗ 2ಲಕ್ಷ 30 ಸಾವಿರ ತಲುಪಿದೆ. ಶಿರಸಿಯಲ್ಲಿ ನಾವು ಮುಂದಿನ ಸಮ್ಮೇಳನದ ವೇಳೆಗೆ ಸದಸ್ಯತ್ವವನ್ನು ದ್ವಿಗುಣಗೊಳಿಸುವ ನಿರ್ಧಾರ ಮಾಡಿದ್ದೇವೆ.


ಚರ್ಚೆಯಲ್ಲಿ ಸಮ್ಮೇಳನದ ಪ್ರತಿನಿಧಿ

ಶಿರಸಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಉತ್ಸಾಹೀ ಮತ್ತು ಸಮರ್ಪಿತ ಮಹಿಳೆಯರು, ವಿಶೇಷವಾಗಿ ಅಂಗನವಾಡಿ, ಅಕ್ಷರ ದಾಸೋಹ, ಆಶಾ ಇತ್ಯಾದಿ ಮಹಿಳೆಯರು, ಅದೇ ರೀತಿ ಸಿಐಟಿಯುವನ್ನು ಪ್ರತಿಯೊಂದು ಪಂಚಾಯತಿಗೆ ಒಯ್ದಿರುವ ಪಂಚಾಯತ್ ನೌಕರರು ಭಾಗವಹಿಸಿದ್ದರು. ಸಂಘಟಿತ ವಿಭಾಗದ ಕಾರ್ಮಿಕರೂ ಹಿಂದೆ ಬೀಳಲಿಲ್ಲ, ದಾಂಡೇಲಿಯ ದೊಡ್ಡ ಕಾರ್ಖಾನೆ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ಕಾರ್ಮಿಕರು ಹಾಜರಿದ್ದರು. ಮಹಿಳಾ ಸ್ವಯಂಸೇವಕರ, ಕಾರ್ಯಕರ್ತೆಯರ ಕೊಡುಗೆ ಎಲ್ಲೆಡೆಯೂ ಕಾಣಬರುತ್ತಿತ್ತು, ಅದು ಸಾಮೂಹಿಕ ರ್‍ಯಾಲಿಯಲ್ಲಿರಬಹುದು, ಆಹಾರ ಒದಗಿಸುವ ಕಡೆ ಹಿಂಡಾಗಿ ಹೋಗದೆ ತಂತಮ್ಮ ಸ್ಥಾನಗಳಿಗೆ ಹಿಂದಿರುಗಲು ಹೇಳಿದಾಗ ಅವರು ತೋರಿದ ಶಿಸ್ತಿನಲ್ಲಿರಬಹುದು, ಅವರು ನಮಗೆಲ್ಲ ಅವಿಸ್ಮರಣೀಯ ರುಚಿಕರ ಆಹಾರ ಸಿದ್ಧಪಡಿಸಲು ಶ್ರಮಿಸಿದ ರೀತಿ, ಪ್ರತಿನಿಧಿಗಳ ಪ್ರತಿಯೊಂದು ಅಗತ್ಯವನ್ನು ಪೂರೈಸಿದ ರೀತಿ, ಬರಮಾಡಿಕೊಂಡ, ವ್ಯವಸ್ಥೆ ಕಲ್ಪಿಸಿದ ಮತ್ತು ಬೀಳ್ಕೊಟ್ಟ ರೀತಿ, ಪ್ರತಿಯೊಂದೂ ವಿಶಿಷ್ಟ, ಬನವಾಸಿಯಂತೆ, ಜೋಗದ ಜಲಪಾತದಂತೆ, ತುಸು ದಕ್ಷಿಣಕ್ಕಿರುವ ಶರಾವತಿಯಂತೆ ಮತ್ತು ಈ ಮೇಲೆ ವರ್ಣಿಸಿದ ಹಲವು ಅದ್ಭುತಗಳಂತೆ.

ಸಮ್ಮೇಳನ ಸದಸ್ಯತ್ವ ಸಂಖ್ಯೆಯನ್ನು ದ್ವಿಗುಣಗೊಳಿಸಲು ಮಾತ್ರ ಕರೆ ನೀಡಿದ್ದಲ್ಲ, ಅದಕ್ಕೆ ಯೋಜನೆಗಳನ್ನೂ ರೂಪಿಸಿತು. ಸಮ್ಮೇಳನ ಮುಗಿದ ಕೂಡಲೇ ಸದಸ್ಯರು ಪ್ರಚಾರ ಕಾರ್ಯ ಆರಂಭಿಸಬೇಕು, ಅಖಿಲ ಭಾರತ ಮಟ್ಟದ ಫೆಬ್ರುವರಿ 20-21ರ ಮುಷ್ಕರವಲ್ಲದೆ, ಸ್ಥಳೀಯ, ತಾಲೂಕು ಮತ್ತು ವಿವಿಧ ಹಂತಗಳಲ್ಲಿ ಜಾಥಾಗಳನ್ನು ನಡೆಸಲು, ತಾಲೂಕುಗಳಿಂದ ಪಂಚಾಯತುಗಳವರೆಗೆ ಎಲ್ಲ ಸಿಐಟಿಯು ಸಂಘಗಳ ಸಮನ್ವಯ ಸಮಿತಿಗಳ ರಚನೆ ಮತ್ತು ಪಂಚಾಯತು ಮಟ್ಟದಲ್ಲಿ ಪ್ರಶ್ನೆಗಳ

ಪುಟ 15 ಕ್ಕೆ

ಮಾದಕವಸ್ತು ಮತ್ತು ಕೋಮುವಾದೀ ಅಮಲು!

ಬಾಲಕೃಷ್ಣ ಶೆಟ್ಟಿ

ಶಿಕ್ಷಣ ಕ್ಷೇತ್ರದಲ್ಲಿ ಪ್ರತಿಷ್ಠಿತ ಶಾಲಾ-ಕಾಲೇಜುಗಳನ್ನು ಹೊಂದಿರುವ ಉಡುಪಿ ಮತ್ತು ದ.ಕ. ಜಿಲ್ಲೆಯಲ್ಲಿ ಮಾದಕ ದ್ರವ್ಯದ ಹಾವಳಿ ವಿಪರೀತವಾಗಿದೆ. ಶಿಕ್ಷಣವೂ ಕೂಡ 'ಸೂಪರ್ ಲಾಭ' ದ ಉದ್ದಿಮೆಯಾಗುತ್ತಿರುವ ಹಿನ್ನಲೆಯಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ, ಹೊರರಾಜ್ಯಗಳಿಂದ ಅಲ್ಲದೇ ವಿದೇಶಗಳಿಂದಲೂ ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಅಂತೆಯೇ ಸಾಕಷ್ಟು ದೊಡ್ಡ ಮೊತ್ತದ ಹಣವೂ ಹರಿದು ಬರುತ್ತಿದೆ.

ಹೆತ್ತವರಿಂದ ದೂರವಿರುವ ಇಂತಹ ವಿದ್ಯಾರ್ಥಿಗಳ ಮನರಂಜನೆಗಾಗಿ ಡಿ.ಜೆ. ಪಾರ್ಟಿಗಳು, ವೀಕೆಂಡ್ ಪಾರ್ಟಿಗಳು, ಪಬ್‌ಗಳು ಹುಟ್ಟಿಕೊಂಡಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಬಂಡವಾಳಕ್ಕೆ ಲಾಭ ಮಾತ್ರವೇ ಬೇಕು. ಅದರ ಗುರಿ ಲಾಭ ಗಳಿಕೆ ಹೊರತು ಮೌಲ್ಯಗಳೆಂದೂ ಅದರ ಗುರಿಯಾಗಿಲ್ಲ. ಆದ್ದರಿಂದ ಪಾರ್ಟಿ ನಡೆಸುವ ಕೆಲವು ಕೇಂದ್ರಗಳಲ್ಲಿ ಮಾದಕ ದ್ರವ್ಯಗಳ ಸರಬರಾಜು ಆಗುತ್ತಿದೆ ಎಂದು ವರದಿಯಾಗಿದೆ. ಆದರೆ ಪೊಲೀಸರು ಮಾತ್ರ ದಿವ್ಯ ಮೌನವನ್ನು ಆಚರಿಸುತ್ತಿದ್ದಾರೆ.

ಇದು ಒಂದೆಡೆಯಾದರೆ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ತಮ್ಮ ಮಕ್ಕಳು ಕೈತುಂಬಾ ಸಂಬಳ ತರುವ ಇಂಜಿನಿಯರ್, ಡಾಕ್ಟರ್, ಎಂಬಿಎ ಆಗಬೇಕೆಂದು ಕನಸು ಕಾಣುವ ಹೆತ್ತವರು ಹೆಚ್ಚು ಅಂಕಗಳನ್ನು ಗಳಿಸುವ ಪ್ರತಿಭಾನ್ವಿತ ವಿದ್ಯಾರ್ಥಿಯಾಗಬೇಕೆಂದು ಬಯಸುತ್ತಾರೆ. ಅದಕ್ಕೆ ಇಂಬುಕೊಡುವಂತೆ 'ಮಾದಕ ದ್ರವ್ಯಗಳನ್ನು ಸೇವಿಸಿದರೆ ಚೆನ್ನಾಗಿ ಓದಬಹುದು. ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಬಹುದು' ಎಂಬ ಸುಳ್ಳು ಸುದ್ದಿಗಳನ್ನು ಡ್ರಗ್ಸ್ ಮಾರಾಟಮಾಡುವ ಲಾಭಕೋರರು ಹರಿಯ ಬಿಟ್ಟಿದ್ದಾರೆ. ಆದ್ದರಿಂದ ಈ ಜಿಲ್ಲೆಗಳ ಪ್ರತಿಷ್ಠಿತ ಕಾಲೇಜುಗಳಿಗೆ ಡ್ರಗ್ಸ್‌ನ ಒದಗಿಸುವ ವ್ಯಾಪಾರ ಅವ್ಯಾಹತವಾಗಿ ನಡೆಯುತ್ತಿದೆ. ಎಂಬ ದೂರು ಇದೆ. ಕಾಲೇಜುಗಳ ಬಳಿ ಇರುವ ಕೆಲವು ಗೂಡಂಗಡಿಗಳು ಡ್ರಗ್ಸ್ ಪೂರೈಸುವ ಕೇಂದ್ರಗಳಾಗಿವೆ ಎಂಬ ಆರೋಪ ಇದೆ.

ನಿಜಕ್ಕೂ ಇದೊಂದು ಸಾಮಾಜಿಕ ಅನಿಷ್ಟ ಎಂಬುದರಲ್ಲಿ ಅನುಮಾನವಿಲ್ಲ. ಕಳೆದ ವಾರ ಡ್ರಗ್ ವ್ಯಸನಿಯಾಗಿದ್ದ ಸ್ನೇಹಾ ಉಪಾಧ್ಯಾಯ ಎಂಬ 18 ವರ್ಷದ ಬಾಲಕಿ ತಾಯಿ ಹಣ ಕೊಡಲಿಲ್ಲ ಎಂಬ ಸಿಟ್ಟಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ನಂತರ ನೈತಿಕ ಪೊಲೀಸ್‌ಗಿರಿಯಲ್ಲಿ ಮುಂಚೂಣಿಯಲ್ಲಿರುವ ಕೋಮುವಾದಿ ಸಂಘಟನೆಗಳು ಇದರ ವಿರುದ್ಧ ಹೋರಾಟ ನಡೆಸುವುದಾಗಿ ಹೇಳಿಕೊಂಡಿವೆ.

ಆರ್.ಎಸ್.ಎಸ್.ನ ಪತ್ರಿಕೆಯೊಂದರ ವರದಿ ಪ್ರಕಾರ ಈ ಹಿಂದೆ ಡ್ರಗ್ ವ್ಯಸನಿಯಾಗಿದ್ದ ವಿದ್ಯಾರ್ಥಿಯೊಬ್ಬನ ತಂದೆ ಅರ್ಜುನ ಎಂಬುವರ ನೇತೃತ್ವದಲ್ಲಿ 'ಮಾದಕ ವಸ್ತು ವಿರೋಧಿ ತಂಡ'ವನ್ನು ರಚಿಸಲಾಗಿದೆ. ಆದರೆ ಈ ತಂಡ ಮದ್ಯವಸನಿಯಾಗಿರುವ ಹೆಣ್ಮಕ್ಕಳ ಬಗ್ಗೆ ಮಾತ್ರ ಗಮನ ಹರಿಸುತ್ತಿದೆ. ಇದು ಮೋಹನ್ ಭಾಗವತ್ ಅವರು ಹೇಳಿದಂತೆ 'ಪಾಶ್ಚಾತ್ಯ ಸಂಸ್ಕೃತಿಯನ್ನು ವಿರೋಧಿಸುವ, ಭಾರತೀಯ ಸಂಸ್ಕೃತಿಯಲ್ಲಿ ಮಾತ್ರ ಹೆಣ್ಣು ಮಕ್ಕಳು ಸುಸಂಸ್ಕೃತರು' ಎಂದು ಬಿಂಬಿಸುವ ಕುತಂತ್ರವೋ? ಅಥವಾ ಭಿನ್ನ ಕೋಮಿನವರು 'ನಮ್ಮಹೆಣ್ಣು ಮಕ್ಕಳನ್ನು ಹಾಳು ಮಾಡುತ್ತಾರೆ' ಎಂದು ಪ್ರಚಾರ ನಡೆಸುವ ತಂತ್ರವೋ ಎಂಬುದನ್ನು ಮುಂದಿನ ದಿನಗಳಲ್ಲಿ ಗಮನಿಸಬೇಕಾಗಿದೆ.

ದಾಳಿಯ ಸಮರ್ಥನೆ: ಮೂಲಭೂತವಾದಿ, ಕೋಮುವಾದಿ ಸಂಘಟನೆಗಳು ಡ್ರಗ್ಸ್ ಮಾಫಿಯಾ ವಿರುದ್ಧ ನಿಜವಾದ ಹೋರಾಟ ಕೈಗೊಳ್ಳುವುದನ್ನು ಬಿಟ್ಟು ಪ್ರಜಾಪ್ರಭುತ್ವ ವಿರೋಧಿ ಉದ್ದೇಶಗಳಿಗೆ ಸನ್ನಿವೇಶವನ್ನು ದುರ್ಬಳಕೆ ಮಾಡಿಕೊಳ್ಳುವ ಆತುರದಲ್ಲಿದ್ದಾರೆ. ಡ್ರಗ್ಸ್ ಮಾಫಿಯಾಗಳಿಗೆ ಕಡಿವಾಣ ಹಾಕುವುದಾಗಿ ಹೇಳಿಕೊಂಡು ಹೋಂ ಸ್ಟೇ, ಪಬ್, ಹೋಟೇಲುಗಳ ಮೇಲೆ ದಾಳಿ ನಡೆಸುವುದನ್ನು ಫೆಬ್ರುವರಿ 5 ರಂದು ಕರೆದ ಪತ್ರಿಕಾ ಗೋಷ್ಠಿಯಲ್ಲಿ ಬಜರಂಗದಳ ಮತ್ತು ಹಿಂದೂ ಜಾಗರಣ ವೇದಿಕೆಯ ಮುಖಂಡರು ನಾಚಿಕೆ ಇಲ್ಲದೆ ಸಮರ್ಥಿಸಿಕೊಂಡಿದ್ದಾರೆ. ಸ್ನೇಹಾ ಉಪಾಧ್ಯಾಯ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ಹಿಂದೂ ಜಾಗರಣ ವೇದಿಕೆಯ ಸಂಚಾಲಕ ಸತ್ಯಜಿತ್ ಸುರತ್ಕಲ್ ಜುಲೈ 28 2012 ರಂದು ನಡೆದ "ಹೋಂ ಸ್ಟೇ ಮೇಲಿನ ದಾಳಿಯ ಉದ್ದೇಶವೂ ಮಾದಕ ದ್ರವ್ಯಗಳಿಂದ ಹೆಣ್ಣು ಮಕ್ಕಳನ್ನು ರಕ್ಷಿಸುವುದೇ ಆಗಿತ್ತು" ಎಂದು ದಾಳಿಯನ್ನು ಸಮರ್ಥಿಸಿಕೊಂಡಿದ್ದಾರೆ. ಅವರ ಹೇಳಿಕೆಯ ಪ್ರಕಾರ, ಜುಲೈ 28ರ ಹೋಂ ಸ್ಟೇ ಚಿತ್ರೀಕರಣದ ನಂತರ ಬೇರೆ ಬೇರೆ ಕಡೆಗಳಲ್ಲಿ ದಾಳಿ ನಡೆಸುವ ಉದ್ದೇಶವಿತ್ತು. ಆದರೆ ಅವರ ಗುಂಪಿನ 35 ಕಾರ್ಯಕರ್ತರು ಇನ್ನೂ ಜೈಲಿನಲ್ಲೇ ಇರುವುದರಿಂದ ದಾಳಿಯ ಕಾರ್ಯಕ್ರಮವನ್ನು ಮುಂದಕ್ಕೆ ಹಾಕಬೇಕಾಯಿತು. ಅವರು ಮುಂದುವರಿದು "ಹೋಂ ಸ್ಟೇ ದಾಳಿ ಪ್ರಕರಣದ ವಿರುದ್ಧ ಗಲಾಟೆ ಎಬ್ಬಿಸಿದ ಬುದ್ಧಿಜೀವಿಗಳು, ಎಡಚಿಂತಕರು, ಸ್ನೇಹ ಉಪಾಧ್ಯಾಯ ಡ್ರಗ್ ಮಾಫಿಯಾಗಳಿಗೆ ಬಲಿಯಾದರೂ ಯಾಕೆ ಮಾತನಾಡುತ್ತಿಲ್ಲ" ಎಂದು ಪ್ರಶ್ನಿಸಿದ್ದಾರೆ. ಇವೆಲ್ಲವನ್ನೂ ಗಮನಿಸಿದರೆ ಮುಂದಿನ ದಿನಗಳಲ್ಲಿ ಸಂಸ್ಕೃತಿಯನ್ನು ಕಾಪಾಡುವ ನೆಪದಲ್ಲಿ ಹೆಣ್ಣು ಮಕ್ಕಳ ಮೇಲೆ ಇನ್ನಷ್ಟು ದಾಳಿಗಳು ನಡೆದರೆ ಆಶ್ಚರ್ಯವಿಲ್ಲ. ಇದು ಸಂಘ ಪರಿವಾರದ ರಾಜಕೀಯ ಪ್ರಚಾರಕ್ಕೂ ಅನುಕೂಲವಾಗುತ್ತದೆ.

"ನಮ್ಮ ಹೆಣ್ಣು ಮಕ್ಕಳನ್ನು ಭಿನ್ನ ಕೋಮಿನ ಹುಡುಗರು ಹಾಳುಮಾಡುತ್ತಿದ್ದಾರೆ" ಎಂಬ ವಂಚನೆಯ ಪ್ರಚಾರ ಬಡಜನರ ಮನೆಯಲ್ಲಿ ಈಗಾಗಲೇ ಚಾಲ್ತಿಯಲ್ಲಿದೆ. ಇದಕ್ಕೆ ಇನ್ನಷ್ಟು ಬಣ್ಣ ಕೊಟ್ಟು ಬೆಲೆಏರಿಕೆ, ಭ್ರಷ್ಟಾಚಾರ, ಜನವಿರೋಧಿ ಧೋರಣೆಗಳಿಂದ ಜನರ ಮನಸ್ಸನ್ನು ವಿಮುಖಗೊಳಿಸುವುದೇ ಇದರ ಹಿಂದಿನ ಉದ್ದೇಶವಾಗಿದೆ. ಮಾದಕ ವಸ್ತುಗಳ ಚಟಕ್ಕೆ ಬೀಳದಂತೆ ಯುಜನರನ್ನು ಜನರನ್ನು ರಕ್ಷಿಸುವ ಹೊಣೆಗಾರಿಕೆಯ ಜೊತೆಗೆ, ಕೋಮುವಾದ ಎಂಬ ಉನ್ಮಾದಕತೆಯಿಂದಲೂ ಅವರನ್ನು ರಕ್ಷಿಸುವ ಜವಾಬ್ದಾರಿ ಕರಾವಳಿಯ ಪ್ರಜ್ಞಾವಂತರು ಹಾಗೂ ಪ್ರಜಾಸತ್ತಾತ್ಮಕ ಚಳುವಳಿಯ ಮೇಲೆ ಇದೆ.

ಹಿಂದೂ ಜಾಗರಣಾ ವೇದಿಕೆಯ ಮುಖಂಡನೇ ಡ್ರಗ್ಸ್ ವ್ಯಾಪಾರಿ

ವಿಪರ್ಯಾಸವೆಂದರೆ ಹಿಂದೂ ಜಾಗರಣ ವೇದಿಕೆಯ ಮುಖಂಡನಾಗಿರುವ ಕೇಶವ ಕಾಟಿಪಳ್ಳ, ಸುರತ್ಕಲ್ ಆಸುಪಾಸಿನಲ್ಲಿ ಗಾಂಜಾ ವ್ಯಾಪಾರ ಮಾಡುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದಾನೆ. ಹಾಗೂ ಈತನ ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಆತನಿಗಾಗಿ ಹುಡುಕಾಟ ನಡೆಸಿದ್ದಾರೆ. ಕೇಶವ ಹಿಂದೂ ಜಾಗರಣಾ ವೇದಿಕೆಯ ಜಿಲ್ಲಾ ಅಧ್ಯಕ್ಷ, ಸತ್ಯಜಿತ್ ಸುರತ್ಕಲ್ ಅವರ ಆಪ್ತನಾಗಿದ್ದಾನೆ. ಈ ವಿಷಯವನ್ನು ಪ್ರಕಟಿಸಿದ ಪತ್ರಿಕಾ ವರದಿಗಾರ ಹರೀಶ್ ಪುತ್ರನ್ ಎಂಬುವವರನ್ನು ಗೂಂಡಾ ಪಡೆಗಳು ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದು, ಗಂಭೀರವಾಗಿ ಗಾಯಗೊಳಿಸಿದ್ದಾರೆ. ಈ ವರದಿಯನ್ನು ಸಿದ್ಧಗೊಳಿಸಿದ ನಂತರ, ಇನ್ನೋರ್ವ ಕರಾವಳಿ ಅಲೆಯ ಕೆಲಸಗಾರನೆ ಮೇಲೂ ಹಲ್ಲೆ ನಡೆಸಲಾಗಿದೆ.

ಇಷ್ಟು ಮಾತ್ರವಲ್ಲದೆ, ಮಂಗಳೂರು ತಾಲೂಕಿನ ಸುರತ್ಕಲ್ ಪ್ರದೇಶದಲ್ಲಿ ವಿತರಣೆಗೆಂದು ಬಂದ ಕರಾವಳಿ ಅಲೆ ಪತ್ರಿಕೆಗಳ ಕಟ್ಟನ್ನೇ ಮಂಗಮಾಯ ಮಾಡಿ ಓದುಗರಿಗೆ ತಲುಪದಂತೆ ಮಾಡಲಾಗಿದೆ.

ಬಿಜೆಪಿ ಸರ್ಕಾರದ ಚುನಾವಣಾ ಪ್ರಣಾಳಿಕೆ

ಪುಟ 5 ರಿಂದ

ಹಣದಿಂದ ಮನೆ ನಿರ್ಮಾಣ ಸಾಧ್ಯವಿಲ್ಲ. ನಿರ್ಮಾಣ ವೆಚ್ಚಕ್ಕೆ ಅನುಗುಣವಾಗಿ ಮನೆಗಳ ನಿರ್ಮಾಣಕ್ಕೆ ಹಣ ಒದಗಿಸುವ ಪ್ರಸ್ತಾಪವೂ ಇಲ್ಲ. ಒಟ್ಟು ವಸತಿ ಯೋಜನೆಗೆ 1,130 ಕೋಟಿ ಮಾತ್ರ ಮೀಸಲಿಟ್ಟಿರುವುದು ಈ ಬೃಹತ್ ಸಮಸ್ಯೆಯ ಪರಿಹಾರದ ದೃಷ್ಟಿಯಿಂದ ಏನೂ ಇಲ್ಲದಾಗಿದೆ. ಕಾರ್ಮಿಕರ ಕಲ್ಯಾಣಕ್ಕಾಗಿ ತೆಗೆದಿಟ್ಟಿರುವ ಹಣ ಯಾತಕ್ಕೂ ಸಾಕಾಗದು. ಇನ್ನು ಗ್ರಾಮೀಣಾಭಿವೃದ್ಧಿಗೆ ತೆಗೆದಿಟ್ಟ ಹಣ 7,354 ಕೋಟಿ. ನಗರಾಭಿವೃದ್ಧಿಗೆ 9,654 ಕೋಟಿ. ಇದೊಂದು ವಿಪರ್ಯಾಸವೇ ಸರಿ. ನಗರಗಳದ್ದು ಜನಸಂಖ್ಯೆಯ ಸು. ಶೇ. 40 ಪಾಲು(39.48) ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯ ಪಾಲು ಸುಮಾರು ಶೇ. 60 (60.52). ಆದರೆ ಹಣದ ಹಂಚಿಕೆಯ ಪ್ರಮಾಣ ಎಷ್ಟು ಅಂತರವನ್ನು ತೋರಿಸಿದೆ. ಇದು ಗ್ರಾಮೀಣ ಜನತೆಗೆ ಮಾಡಿದ ಮೋಸ.

ಮಧ್ಯ ಕರ್ನಾಟಕ:

ಶಾಶ್ವತ ನೀರಾವರಿಗೆ ಏನು ಕ್ರಮ ?

ಇನ್ನು ನಿರಂತರ ಬರಗಾಲ ಪೀಡಿತ ಮಧ್ಯ ಕರ್ನಾಟಕದ ಜನರ ದೀರ್ಘಕಾಲದ ಬೇಡಿಕೆಯಾಗಿರುವ ಶಾಶ್ವತ ನೀರಾವರಿ ಯೋಜನೆಯನ್ನು ಜಾರಿ ಮಾಡಲು ಮುಖ್ಯವಾಗಿ ಡಾ. ಜಿ. ಪರಮಶಿವಯ್ಯ ವರದಿಯನ್ನು ಜಾರಿ ಮಾಡುವ ಯಾವ ಪ್ರಸ್ತಾಪವೂ ಇಲ್ಲ. ಈ ಏಳು ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಲು 2,160 ಕೋಟಿ ಹಣ ಒದಗಿಸುವ ಪ್ರಸ್ತಾಪವಿದೆ. ಆದರೆ ನೀರನ್ನು ಎಲ್ಲಿಂದ ತರುವುದು ಎಂಬುದರ ಬಗ್ಗೆ ಪ್ರಸ್ತಾಪವಿಲ್ಲ. ಹಾಗಾಗಿ 2013-14ರ ಬಜೆಟ್ ರಾಜ್ಯದ ಅಭಿವೃದ್ಧಿಗೆ ಯಾವ ರೀತಿಯಲ್ಲೂ ಪೂರಕವಾಗಿಲ್ಲ. ಜೊತೆಗೆ ರಾಜ್ಯದ ಜನತೆಯ ಮೇಲೆ ಋಣಬಾರ ಹೇರುವಂತಹದ್ದಾಗಿದೆ. ಬೆಲೆ ಏರಿಕೆ ಮತ್ತು ತೆರಿಗೆಗಳ ಭಾರದಿಂದ ಕೂಡಿದೆ.

ಈ ಆಯ-ವ್ಯಯದಿಂದ ಮತಮಾನ್ಯಗಳಿಗೆ ಬಿಟ್ಟರೆ, ಬೇರೆ ಯಾರಿಗೂ ಪ್ರಯೋಜನವಿಲ್ಲ. ಈ ಬಜೆಟ್ ಕೊನೆಗಾಲದಲ್ಲಿರುವ ಬಿಜೆಪಿ ಸರ್ಕಾರದ ಚುನಾವಣಾ ಪ್ರಣಾಳಿಕೆ ಆಗಿದೆ. ಯಾವ ಘನ ಉದೇಶಕ್ಕಾಗಿ ಹಠಕ್ಕೆ ಬಿದ್ದು ಜಗದೀಶ್ ಶೆಟ್ಟರ್, ಈ ಬಜೆಟ್‌ನ್ನು ಮಂಡಿಸಿದರೋ ಅವರಿಗೆ ಗೊತ್ತು. ಆದುದರಿಂದ ಆಯ-ವ್ಯಯವು ಅಪ್ರಜಾಪ್ರಭುತ್ವ ಮತ್ತು ಅನೈತಿಕ.

ಕೇರಳ: ಬೇಡಿಕೆಗಳಿಗೆ ಬಾಗಿದ ಸರ್ಕಾರ – ಭೂ ಆಕ್ರಮಣ ಚಳುವಳಿ ಅಂತ್ಯ

ಕೇರಳದಲ್ಲಿ ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಆದಿವಾಸಿ ಕ್ಷೇಮ ಸಮಿತಿ ಮತ್ತು ಪರಿಶಿಷ್ಟ ಜಾತಿ ಕ್ಷೇಮ ಸಮಿತಿಗಳ ನೇತೃತ್ವದಲ್ಲಿ ಭೂ ಸಂರಕ್ಷಣಾ ಸಮಿತಿ ನಾಯಕತ್ವದಲ್ಲಿ ನಡೆಸಿದ 16 ದಿನಗಳ ಭೂ ಆಕ್ರಮಣ ಚಳುವಳಿಯನ್ನು ತಾತ್ಕಾಲಿಕವಾಗಿ ಅಂತ್ಯಗೊಳಿಸಲಾಗಿದೆ. ಹೋರಾಟದ ತೀವ್ರತೆ ಬಗ್ಗಿದ ಸರ್ಕಾರ ಬೇಡಿಕೆಗಳನ್ನು ಈಡೇರಿಸಲು ಒಪ್ಪಿಗೆ ಸೂಚಿಸಿದೆ.

ಸತತ 16 ದಿನಗಳ ನಿರಂತರ ಹೋರಾಟದ ನಂತರ ಮುಖ್ಯ ಮಂತ್ರಿಗಳು ಮತ್ತು ಕಂದಾಯ ಸಚಿವರು ಭೂ ಸಂರಕ್ಷಣಾ ಸಮಿತಿಯ ಮುಖಂಡರೊಂದಿಗೆ ಸಭೆ ನಡೆಸಿ ಎಲ್ಲ ಬೇಡಿಕೆಗಳನ್ನು ಈಡೇರಿಸಿ ಸರ್ಕಾರಿ ಭೂಮಿಯನ್ನು ಭೂಹೀನರಿಗೆ ವಿತರಿಸಲು ಒಪ್ಪಿದ ನಂತರ ಈ ಹೋರಾಟವನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿದ್ದು ಸರ್ಕಾರ ತನ್ನ ಭರವಸೆಯಂತೆ ಭೂಮಿಯನ್ನು ವರ್ಗಾಯಿಸದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟಗಳನ್ನು ರೂಪಿಸಬೇಕಾಗುತ್ತದೆಂದು ಭೂ ಸಂರಕ್ಷಣಾ ಸಮಿತಿಯ ಮುಖಂಡರಾದ ಇ.ಪಿ.ಜಯರಾಜನ್ ಮತ್ತು ಎ.ವಿಜಯರಾಘವನ್ ಹೇಳಿದ್ದಾರೆ.

ಇದುವರೆಗೂ ಭೂ ಸಂರಕ್ಷಣಾ ಸಮಿತಿ ಗುರುತಿಸಿರುವ 139 ಸೆಂಟ್ ಜಾಗವನ್ನು ವಿತರಿಸಲು ಒಪ್ಪಿದ್ದು ಜೊತೆಗೆ ಒಂದು ಲಕ್ಷ ಭೂಹೀನರಿಗೆ ತಲಾ 3 ಸೆಂಟ್ ನಂತೆ ಭೂಮಿಯನ್ನು ಹಂಚಿಕೆ ಮಾಡಲಾಗುವುದು. ಇದಕ್ಕಾಗಿ ಭೂಹೀನರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಇವರಿಗೆ ಪಟ್ಟಾಗಳನ್ನು ವಿತರಿಸಲಾಗುತ್ತದೆಂದು ಮುಖ್ಯಮಂತ್ರಿ ಹೇಳಿದ್ದಾರೆ.

ಚಂದಾ ಪಿಂಚಣಿ ಯೋಜನೆ ವಿರೋಧಿಸಿ ಸರ್ಕಾರಿ ನೌಕರರಿಂದ ಅರ್ಧಿಷ್ಟಾವಧಿ ಮುಷ್ಕರ

ಕೇರಳದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರ ಜಾರಿಗೊಳಿಸಲು ಹೊರಟಿರುವ ಚಂದಾ ಪಿಂಚಣಿ ಯೋಜನೆ (ಕಾಂಟ್ರ್ಯಿಬ್ಯೂಟ್ರಿ ಪೆನ್ಷನ್ ಸ್ಕೀಮ್) (ಸಿಪಿಎಸ್) ವಿರೋಧಿಸಿ ಇತ್ತೀಚೆಗೆ ರಾಜ್ಯದ ಶೇಕಡ 70 ಕ್ಕಿಂತ ಹೆಚ್ಚು ಸರ್ಕಾರಿ ನೌಕರರು ಮತ್ತು ಶಿಕ್ಷಕರು ಅನಿರ್ಧಿಷ್ಟಾವಧಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಈ ಹೋರಾಟಕ್ಕೆ ಸೌಹಾರ್ದ ಬೆಂಬಲವನ್ನು ಸೂಚಿಸಿ ಶಿಕ್ಷಕರು ಮತ್ತು ಸಿಬ್ಬಂದಿವರ್ಗ, ಕೇರಳ ಜಲಮಂಡಳಿ ನೌಕರರು, ಕೇರಳ ವಿದ್ಯುತ್ ನಿಗಮ ಮಂಡಳಿ ಮತ್ತು ಕೇರಳ ರಸ್ತೆ ಸಾರಿಗೆ ಸಂಸ್ಥೆ ನೌಕರರು ಡಿಸೆಂಬರ್ 8 ರಂದು ಒಂದು ದಿನದ ಮುಷ್ಕರವನ್ನು ನಡೆಸುವುದರ ಮೂಲಕ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡಿದರು.

ಮುಷ್ಕರದಿಂದ ರಾಜ್ಯದ ಸರ್ಕಾರಿ ಕಛೇರಿಗಳು, ಶಾಲೆಗಳು ಮುಚ್ಚಿದ್ದು ಕೆಲಸ ಸಂಪೂರ್ಣ ಸ್ಥಗಿತಗೊಂಡಿತ್ತು. ಶೇ 90 ರಷ್ಟು ಗ್ರಾಮ ಪಂಚಾಯ್ತಿಗಳು, ವಿಶ್ವ ವಿದ್ಯಾಲಯಗಳು, ಸರ್ಕಾರದ ಕಾರ್ಯದರ್ಶಿ ಕಛೇರಿಗಳು, ನಗರಸಭೆ ಮತ್ತು ಮಹಾನಗರಪಾಲಿಕೆಗಳಲ್ಲಿ ಕೆಲಸ ಮಾಡುವ ನೌಕರರು ತಮ್ಮ ಕೆಲಸವನ್ನು ಸ್ಥಗಿತಗೊಳಿಸಿ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಯನ್ನು ಧಿಕ್ಕರಿಸಿ ಅವರವರ ಕಛೇರಿಗಳ ಮುಂದೆ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸಿದರು. ಸರ್ಕಾರದ ದಮನಕಾರಿ ಕ್ರಮಗಳನ್ನು ಖಂಡಿಸಿದರು.

ಕೃಷಿ ಕೂಲಿಕಾರರ 5ನೇ ರಾಜ್ಯ ಸಮ್ಮೇಳನ....


ಪುಟ 9 ರಿಂದ

ಸರ್ವಾನುಮತದಿಂದ ಅಂಗೀಕರಿಸಿತು.

ಮಹಿಳಾ ಕೃಷಿ ಕೂಲಿಕಾರರ ಸಮಾವೇಶ :


ಕೃಷಿ ಕೂಲಿಕಾರರ 5ನೇ ರಾಜ್ಯ ಸಮ್ಮೇಳನದ ಅಂಗವಾಗಿ ಮಹಿಳಾ ಕೃಷಿ ಕೂಲಿಕಾರರು ಮಹಿಳೆಯರಾಗಿ ಅನುಭವಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಲು ಪ್ರತ್ಯೇಕ ಗೋಷ್ಠಿಯೊಂದನ್ನು ನಡೆಸಲಾಯಿತು. 'ಮಹಿಳಾ ಲೋಕ' ಪತ್ರಿಕೆಯ ಸಂಪಾದಕಿ ಶ್ರೀಮತಿ ಸಾವಿತ್ರಿ ಮುಜುಂದಾರ್ ಗೋಷ್ಠಿಯನ್ನು ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ (ಸಿಐಟಿಯು)ಯ ಕೊಪ್ಪಳ ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ಶಿವಮ್ಮ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಮಲ್ಲಮ್ಮ ಕೋಡ್ಲಿ, ಸೋಮಮ್ಮ, ಸರೋಜಮ್ಮ, ನಾಗರತ್ನ, ಪಾರ್ವತಿ ಮತ್ತು ಜಯಮ್ಮ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯು ಗೋಷ್ಠಿಯ ಕಲಾಪಗಳನ್ನು ನಡೆಸಿಕೊಟ್ಟಿತು. ಒಟ್ಟು 21 ಜನ ಮಹಿಳಾ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ಮಹಿಳಾ ಕೃಷಿ ಕೂಲಿಕಾರರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರು.

ಮಹಿಳೆಯರ ಮೇಲೆ ಅತ್ಯಾಚಾರದ ಪ್ರಕರಣಗಳು ಹೆಚ್ಚುತ್ತಿರುವುದನ್ನು ಖಂಡಿಸುವ ಮತ್ತು ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸುವಂತೆ ಒತ್ತಾಯಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಕೊನೆಯಲ್ಲಿ ಹಲವು ತಿದ್ದುಪಡಿಗಳೊಂದಿಗೆ, ಮಹಿಳಾ ಕೃಷಿ ಕೂಲಿಕಾರರ ಬೇಡಿಕೆಗಳನ್ನು ಅನುಮೋದಿಸಲಾಯಿತು. ಮಲ್ಲಮ್ಮ ಕೋಡ್ಲಿ, ಸರೋಜಮ್ಮ, ಸೋಮಮ್ಮ, ಅಮಿನಾಬಿ, ನಾಗರತ್ನಮ್ಮ (ಗೌರಿಬಿದನೂರು), ಪ್ರಮಿಳಾ, ಕರಿಯಮ್ಮ ಗುರಿಕಾರ, ಪಾರ್ವತಿ ಮದ್ದೂರು (ಚಿತ್ತಾಪುರ), ಚಂದ್ರಮ್ಮ ಪೂಜಾರಾಮ, ಜಯಶ್ರೀ ಕಟ್ಟಿಮನಿ, ಶುಭಾವತಿ, ಮಹದೇವಮ್ಮ, ಜಯಮ್ಮ (ಮದ್ದೂರು), ನಾಗಮಣಿ, ಜೈನಬಿ (ಸಿಂಧನೂರು), ಕೆ. ಹನುಮಂತಮ್ಮ (ಕುರುಗೋಡು), ಹಾಸಿಂಬಿ ಸಿಕಂದರ್ (ಸವದತ್ತಿ), ನಾಗರತ್ನ (ಕುಂದಾಪುರ) ಯಶೋಧ ಆಲೂರು, ಕಮಲ ಬಸ್ರೂರು ಮತ್ತು ಪದ್ಮಾವತಿ (ಬೆಳ್ತಂಗಡಿ) ಅವರನ್ನು ಒಳಗೊಂಡ ರಾಜ್ಯ ಮಟ್ಟದ ಮಹಿಳಾ ಕೃಷಿ ಕೂಲಿಕಾರರ ಉಪಸಮಿತಿಯನ್ನು ಆಯ್ಕೆ ಮಾಡಲಾಯಿತು.



ಶುಭಕೋರಿಕೆಗಳು :

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ 5ನೇ ರಾಜ್ಯ ಸಮ್ಮೇಳನಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಸಂಗಾತಿ ಸಂಗಾತಿ ಜಿ.ಸಿ. ಬಯ್ಯಾರೆಡ್ಡಿ, ಡಿವೈಎಫ್ಐ ರಾಜ್ಯ ಅಧ್ಯಕ್ಷರಾದ ಭರತ್‌ರಾಜ್, ಎಸ್ಎಫ್ಐ ರಾಜ್ಯ ಅಧ್ಯಕ್ಷರಾದ ಸಂಗಾತಿ ಅನಂತನಾಯಕ್, ಜೀವ ವಿಮಾ ಪ್ರತಿನಿಧಿಗಳ ಸಂಘದ ರಾಜ್ಯ ಅಧ್ಯಕ್ಷರಾದ ಸಂಗಾತಿ ಎಲ್. ಮಂಜುನಾಥ ಶುಭಕೋರಿ ಮಾತನಾಡುತ್ತಾ ಸಮ್ಮೇಳನದ ತೀರ್ಮಾನಗಳನ್ನು ಜಾರಿಮಾಡುವ ಭಾಗವಾಗಿ ಹಮ್ಮಿಕೊಳ್ಳುವ ಎಲ್ಲಾ ಹೋರಾಟಗಳಲ್ಲಿ ಕೃಷಿ ಕೂಲಿಕಾರರ ಜೊತೆಗೆ ನಿಲ್ಲುವ ಭರವಸೆಯನ್ನು ವ್ಯಕ್ತಪಡಿಸಿದರು.



ಸಿಐಟಿಯು ರಾಜ್ಯ ಸಮಿತಿಯ ಪರವಾಗಿ ಶುಭಕೋರಿ ಮಾತನಾಡಿದ ಸಂಗಾತಿ ಆರ್.ಎಸ್.ಬಸವರಾಜ, ಸಿಐಟಿಯು ತನ್ನ ಸದಸ್ಯರಿಂದ ಇನ್ನು ಮುಂದೆ ಪ್ರತಿ ವರ್ಷ ತಲಾ ಒಂದು ರೂಪಾಯಿಯಂತೆ ಸಂಗ್ರಹಮಾಡಿ ಕೃಷಿ ಕೂಲಿಕಾರರ ಸಂಘಕ್ಕೆ ನೆರವು ರೂಪದಲ್ಲಿ ನೀಡಲು ಇತ್ತೀಚೆಗೆ ಸಿರಸಿಯಲ್ಲಿ ನಡೆದ ಸಿಐಟಿಯು ರಾಜ್ಯ ಸಮ್ಮೇಳನ ತೀರ್ಮಾನಿಸಿದೆ ಎಂದು ಪ್ರಕಟಿಸಿದರು. ಇವರೆಲ್ಲರಿಗೂ ಮತ್ತು ಅವರು ಪ್ರತಿನಿಧಿಸುವ ಸಂಘಟನೆಗಳಿಗೆ ಸಂಘದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಲಾಯಿತು.

ನೂತನ ರಾಜ್ಯ ಸಮಿತಿಯ ಆಯ್ಕೆ :


ಸಮ್ಮೇಳನ ಕೊನೆಯಲ್ಲಿ 47 ಜನ ಸದಸ್ಯರುಳ್ಳ ನೂತನ ರಾಜ್ಯ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಇವರಲ್ಲಿ 5 ಜನ ಮಹಿಳೆಯರು. ಅಧ್ಯಕ್ಷರಾಗಿ ನಿತ್ಯಾನಂದಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ಚಂದ್ರಪ್ಪ ಹೊಸ್ಕೇರಾಮರು ಆಯ್ಕೆಯಾದರು, ಉಪಾಧ್ಯಕ್ಷರುಗಳಾಗಿ ಜಿ.ಎನ್.ನಾಗರಾಜ, ಎಂ.ಪುಟ್ಟಮಾದು, ಭೀಮಶೆಟ್ಟಿ ಯಂಪಳ್ಳಿ, ಗಂಗಾಧರಸ್ವಾಮಿ, ಕರಿಯಪ್ಪ ಅಚ್ಚೊಳ್ಳಿ ಮತ್ತು ವೆಂಕಟೇಶ್ ಕೋಣಿ, ಅಲ್ಲದೆ ಸಹ ಕಾರ್ಯದಶಿಗಳಾಗಿ ಕೆ. ನಾಗರಾಜ, ದಾವಲ್‌ಸಾಬ್ ನಧಾಪ್, ಪುಟ್ಟಮಾದೇಗೌಡ, ಮಲ್ಲಮ ಕೋಡ್ಲಿ, ಎಂ. ಬಸವರಾಜ, ಕೆ. ಬಸವರಾಜ ಮತ್ತು ಅಶೋಕ್ ಮ್ಯಾಗೇರಿ ಆಯ್ಕೆಯಾದರು.

ಇದೇ ಫೆಬ್ರವರಿ 20 ಮತ್ತು 21 ರಂದು ನಡೆಯಲಿರುವ ದೇಶವ್ಯಾಪಿ ಎರಡು ದಿನಗಳ ಮುಷ್ಕರವನ್ನು ಕೃಷಿ ಕೂಲಿಕಾರರು ಕೆಲಸವನ್ನು ಬಹಿಷ್ಕರಿಸಿ, ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ತಡೆ ನಡೆಸಿ, ಹರತಾಳ ಆಚರಿಸಿ ಯಶಸ್ವಿಗೊಳಿಸಬೇಕೆಂದು ಸಮ್ಮೇಳನ ತೀರ್ಮಾನಿಸಿತು. ಕೊನೆಯಲ್ಲಿ ಸಂಘದ ಅಖಿಲ ಭಾರತ ಅಧ್ಯಕ್ಷರ ಸಮಾರೋಪ ಭಾಷಣದೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ಹೆಲಿಕಾಪ್ಟರ್ ಖರೀದಿಯಲ್ಲಿ 352 ಕೋಟಿ ಲಂಚ

ಮತ್ತೊಂದು ಹಗರಣ: ಮತ್ತೊಮ್ಮೆ ನಿಷ್ಕ್ರಿಯತೆಯ ಪ್ರದರ್ಶನ

ಯುಪಿಎ ಸರಕಾರದ ಹಗರಣಗಳ ದೊಡ್ಡ ಪಟ್ಟಿಗೆ ಇನ್ನೊಂದು ಸೇರ್ಪಡೆಯಾಗಿದೆ. ಇದು ಕೂಡ ಬಯಲಿಗೆ ಬಂದಿರುವುದು ಇಟೆಲಿಯಲ್ಲಿ ಅಲ್ಲಿಯ ಫಿನ್‌ಮೆಕಾನಿಕ ಎಂಬ ಕಂಪೆನಿಯ ಮುಖ್ಯಸ್ಥನನ್ನು



ಕೃಪೆ : ದಿ ಹಿಂದು

ಬೃಹತ್ ಲಂಚದ ಆರೋಪದ ಮೇಲೆ ಬಂಧಿಸಿದ ಮೇಲೆಯೇ. ಅತಿಗಣ್ಯ ವ್ಯಕ್ತಿಗಳ(ವಿವಿಐಪಿ) ಭದ್ರತೆಗಾಗಿ 12 ಅಗಸ್ಟಾ–ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರುಗಳ ಖರೀದಿಯ 3,600 ಕೋಟಿ ರೂ.ಗಳ ಕಾಂಟ್ರಾಕ್ಟಿನಲ್ಲಿ 352 ಕೋಟಿರೂ.ಗಳ ಲಂಚದ ವ್ಯವಹಾರ ನಡೆದಿದೆ ಎಂದೀಗ ತಿಳಿದು ಬಂದಿದೆ.


ಇಟೆಲಿಯಲ್ಲಿ ಈ ಬಗ್ಗೆ ತನಿಖೆ ಕೆಲವು ತಿಂಗಳುಗಳಿಂದ ನಡೆಯುತ್ತಿದೆ. ಇದು ಗೊತ್ತಿದ್ದರೂ ಯುಪಿಎ–2 ಸರಕಾರ ಈ ವಿಷಯದಲ್ಲಿ ತೆಪ್ಪಗೆ ಕೂತಿತ್ತು. ಈಗ ಎಚ್ಚೆತ್ತಿರುವ ರಕ್ಷಣಾ ಇಲಾಖೆ ಈ ಬಗ್ಗೆ ಸಿಬಿಐ ತನಿಖೆಗೆ ಮುಂದಾಗಿದ್ದರೂ ಇದುವರೆಗೆ ಇಟೆಲಿ ಅಥವ ಇಂಗ್ಲೆಂಡಿನ ಸರಕಾರಗಳಿಂದ ಈ ಬಗ್ಗೆ ನಿರ್ದಿಷ್ಟ ಮಾಹಿತಿ ಸಿಕ್ಕಿಲ್ಲವೆಂದು ಹೇಳುತ್ತಲೇ ಇದೆ. ಇಟೆಲಿಯಲ್ಲಿ ನಡೆದಿರುವ ಈ ...ಖೆಗಳ ವಿವರಗಳೆಲ್ಲ ಮಾಧ್ಯಮಗಳಲ್ಲಿ ಪ್ರಕಟವಾಗಿರುವಾಗಲೂ ಇಂತಹ ನೆಪದ ಹಿಂದೆ ಆಶ್ರಯ ಪಡೆಯಲು ಯುಪಿಎ ಸರಕಾರ ಪ್ರಯತ್ನಿಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಟೀಕಿಸಿದೆ.

ಕಳೆದ ಎಂಟು ವರ್ಷಗಳ ತನ್ನ ಆಳ್ವಿಕೆಯಲ್ಲಿ ಯುಪಿಎ ಸರಕಾರ ರಕ್ಷಣಾ ಕಾಂಟ್ರಾಕ್ಟುಗಳಲ್ಲಿ ಉನ್ನತ ಮಟ್ಟಗಳಲ್ಲಿನ ಭ್ರಷ್ಟಾಚಾರವನ್ನು ತಡೆಯುವಲ್ಲಿ ವಿಫಲವಾಗಿದೆ ಎಂಬುದು ಇದರಿಂದ ಸ್ಪಷ್ಟ ಹೆಲಿಕಾಪ್ಟರ್ ಹಗರಣ ಇತ್ತೀಚಿನ ಉದಾಹರಣೆಯಷ್ಟೇ ಎಂದಿರುವ ಅದು ಸಿಬಿಐ ತನಿಖೆ ಸುಪ್ರಿಂ ಕೋರ್ಟಿನ ಉಸ್ತುವಾರಿಯಲ್ಲಿ ನಡೆಯಬೇಕು, ಆಗ ಮಾತ್ರವೇ ಈ ಅವ್ಯವಹಾರದ ತಳಕ್ಕೆ ಹೋಗುವ ಆಮೂಲಾಗ್ರ ತನಿಖೆ ನಡೆಯುತ್ತದೆ ಎಂಬ ಭರವಸೆ ಜನರಲ್ಲಿ ಮೂಡಲು ಸಾಧ್ಯ ಎಂದಿದೆ.

ಈ ಹಗರಣದ ಹಿನ್ನೆಲೆಯಲ್ಲಿ 197 ಹೆಲಿಕಾಪ್ಟರುಗಳನ್ನು ಖರೀದಿಸುವ 8,000 ಕೋಟಿರೂ.ಗಳ ಇನ್ನೊಂದು ರಕ್ಷಣಾ ಕಾಂಟ್ರಾಕ್ಟಿನ ಬಗ್ಗೆ ನಿರ್ಣಯವನ್ನು ಮುಂದೂಡಲಾಗಿದೆ. ಇದರ ಟೆಂಡರ್ ಪ್ರಕ್ರಿಯೆಯಲ್ಲಿಯೂ ಅಡ್ಡದಾರಿಗಳ ಆಪಾದನೆಗಳಿವೆಯಂತೆ. ಈ ಬಗ್ಗೆ ದೂರು ಬಂದಿರುವುದು ಅದೇ ಆಗಸ್ಟಾ–ವೆಸ್ಟ್‌ಲ್ಯಾಂಡ್ ...ನಿಯಿಂದ ಎಂಬುದು ಗಮನಾರ್ಹ. ಈ ಕಾಂಟ್ರಾಕ್ಟ್ ಪಡೆಯುವ ಸ್ಪರ್ಧೆಯಲ್ಲಿ ಮೊದಲ ಸುತ್ತಿನಲ್ಲಿ ಅದು ಹೊರಗಾಗಿತ್ತು, ಸ್ಪರ್ಧೆಯಲ್ಲಿ ಉಳಿದಿದ್ದ ಯುರೋಪಿಯನ್ ಕಂಪನಿ ಯುರೋಕಾಪ್ಟರ್ ಮತ್ತು

ಎಂಬ ಆರೋಪಗಳಿದ್ದವು. ಇದರ ತನಿಖೆ ನಡೆಸಿದ್ದ ವಿಶೇಷ ತಾಂತ್ರಿಕ ಉಸ್ತುವಾರಿ ಸಮಿತಿ(ಎಸ್‌ಟಿಒಸಿ) ವರದಿಯನ್ನು ರಕ್ಷಣಾ ಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ರಕ್ಷಣಾ ಖರೀದಿ ಮಂಡಲಿ(ಡಿಎಸಿ) ಪರಿಶೀಲಿಸಿ ನಿರ್ಧಾರ ಕೈಗೊಳ್ಳಬೇಕಾಗಿತ್ತು. ಅದನ್ನು ಮುಂದೂಡಲಾಗಿದೆ. ಸೇನಾಧಿಪತಿಗಳು ಪ್ರವಾಸದಲ್ಲಿರುವುದರಿಂದ ಹಾಗೆ ಮಾಡಲಾಗಿದೆ ಎಂದರೂ, ಹಲಿಕಾಪ್ಟರ್ ಹಗರಣ ಹಿನ್ನೆಲೆಯಲ್ಲಿ ಇದು ನಡೆದಿದೆ ಎನ್ನಲಾಗಿದೆ.

ಉನ್ನತ ಹಂತಗಳಲ್ಲಿ ಭ್ರಷ್ಟಾಚಾರ ಉನ್ನತ ಬೆಳವಣಿಗೆ ದರಗಳ ಪರಿಣಾಮ ಎಂದು ಇದಕ್ಕೆ ಕೆಲವು ದಿನಗಳ ಹಿಂದೆ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರು ವಿಚಾರ ಸಂಕಿರಣವೊಂದರಲ್ಲಿ ಹೇಳಿರುವುದಾಗಿ ವರದಿಯಾಗಿದೆ. 1950ರಿಂದ 1980ರ ವರೆಗೆ ಭಾರತದ ಜಿಡಿಪಿ ಬೆಳವಣಿಗೆ ದರ ಸರಾಸರಿ 3.5ಶೇ. ಮಾತ್ರವಿತ್ತು. 1991ರಲ್ಲಿ ಈಗಿನ ಪ್ರಧಾನಿಗಳು ಹಣಕಾಸು ಮಂತ್ರಿಯಾಗಿ ಆರ್ಥಿಕ ಸುಧಾರಣೆಗಳನ್ನು ಆರಂಭಿಸಿದ ನಂತರ 1996ರಿಂದ ಅದು 5ಶೇ. ದಾಟಿತು, ಈ ಬೆಳವಣಿಗೆಯೊಂದಿಗೆ ಭ್ರಷ್ಟಾಚಾರಕ್ಕೂ ಅವಕಾಶಗಳು ಹೆಚ್ಚಿದವು ಎನ್ನುವ



ವೇದರಾಜ ಎನ್.ಕೆ.

ಅವರು ಭ್ರಷ್ಟಾಚಾರ ಇಲ್ಲದ ದೇಶಗಳು ಕಡಿಮೆ, ಕೆಲವು ದೇಶಗಳು ಭ್ರಷ್ಟಾಚಾರವನ್ನು ತೊಡೆಯಲು ಸಾಧ್ಯವಾದದ್ದು ಅವು ಶ್ರೀಮಂತ ದೇಶಗಳಾದ ಮೇಲೆಯೇ, ಭಾರತದಲ್ಲಿಯೂ ಸಿಎಜಿ, ಸಿವಿಸಿಯಂತಹ ಸಂಸ್ಥೆಗಳು ಸರಿಯಾದ ಪ್ರಶ್ನೆಗಳನ್ನು ಕೇಳಲಾರಂಭಿಸಿವೆ, ಇದರಿಂದ ಭ್ರಷ್ಟಾಚಾರದ ಮೇಲೆ ತಡೆ ಬರಬಹುದು ಎಂಬುದು ಅವರ ನಿರೀಕ್ಷೆ.

ಅವರು ಹೀಗೆ ಹೇಳುತ್ತಿದ್ದಾಗಲೇ, ಯುಪಿಎ ವಕ್ತಾರರೊಬ್ಬರು ಸಿಎಜಿ ಮೇಲೆ ಹರಿ ಹಾಯುತ್ತಿದ್ದರು, ಸರಕಾರ ತಮ್ಮನ್ನು ಕೇವಲ ಲೆಕ್ಕ ಪರಿಶೋಧನೆಯ ಕೆಲಸ ಮಾಡಿ, ಅದಕ್ಕಿಂತ ಹೆಚ್ಚಿನ ಪ್ರಶ್ನೆ ಕೇಳಬೇಡಿ ಎನ್ನುತ್ತಿದೆ ಎಂದು ಅವರು ಹೇಳಿದ್ದಕ್ಕಾಗಿ. 2ಜಿ ಹಗರಣದಲ್ಲಿ 1.76 ಲಕ್ಷ ಕೋಟಿ ರೂ.ಗಳ ನಷ್ಟದ ಲೆಕ್ಕಾಚಾರವನ್ನು ಅವರು ಸಾಬೀತು ಮಾಡಿಲ್ಲ, ಅವರಿಗೆ ಹೀಗೆ ಹೇಳುವ ಹಕ್ಕಿಲ್ಲ ಎಂಬುದು ಆ ಯುಪಿಎ ವಕ್ತಾರನ ಕುತರ್ಕ. ಇಂತಹವರ ಆಳ್ವಿಕೆ ಇರುವ ವರೆಗೆ ಮುಖ್ಯ ಆರ್ಥಿಕ ಸಲಹೆಗಾರರ ಮುಗ್ಧ ನಿರೀಕ್ಷೆ ಈಡೇರಬಹುದೇ?.

ಎರಡಂಕಿ ದಾಟಿದ ಹಣದುಬ್ಬರ: 5ಶೇ.ಕ್ಕಿಳಿಯಲಿದೆ ಜಿಡಿಪಿ ಬೆಳವಣಿಗೆ

ಚಿಲ್ಲರೆ ಮಾರಾಟದಲ್ಲಿ ಎಫ್‌ಡಿಐಗೆ ಅವಕಾಶದಿಂದ ಆರಂಭಿಸಿದ 'ಎರಡನೇ ತಲೆಮಾರಿನ ಆರ್ಥಿಕ ಸುಧಾರಣೆ'ಗಳು ದೇಶದ ಆರ್ಥಿಕವನ್ನು ಮೇಲೆತ್ತುತ್ತದೆ ಎಂಬ ಯುಪಿಎ–2 ಪ್ರಮುಖರ ನಿರೀಕ್ಷೆಗಳು ತಲೆಕೆಳಗಾಗುತ್ತಿವೆ. ಬಳಕೆದಾರ ಬೆಲೆ ಸೂಚ್ಯಂಕವನ್ನು ಆಧರಿಸಿದ ಹಣದುಬ್ಬರ ದರ ಏರುತ್ತಲೇ ಇದೆ, ಜತೆಗೆ ಕೈಗಾರಿಕಾ ಬೆಳವಣಿಗೆಯ ದರ ಇಳಿಯುತ್ತಿದೆ. ಸಾಲದ್ದಕ್ಕೆ ಸಿಎಸ್‌ಒ(ಕೇಂದ್ರೀಯ ಸಾಂಖ್ಯಿಕ ಸಂಸ್ಥೆ)ಯ ಅಂದಾಜಿನ ಪ್ರಕಾರ ಜಿಡಿಪಿ ಬೆಳವಣಿಗೆ ದರ 5ಶೇ.ಕ್ಕೆ ಇಳಿಯಲಿದೆ. ಇದು ಈ ದಶಕದಲ್ಲೇ ಅತಿ ಕಡಿಮೆ ಬೆಳವಣಿಗೆ ದರ.

ಹಣದುಬ್ಬರ ಕಳೆದ ನಾಲ್ಕು ತಿಂಗಳಿಂದ ಏರುತ್ತಲೇ ಇದೆ. ಅಕ್ಟೋಬರ್‌ನಲ್ಲಿ ಅದು 9.75ಶೇ. ಇತ್ತು, ನವಂಬರಿನಲ್ಲಿ 9.9ಶೇ. ಆಯಿತು, ಡಿಸೆಂಬರಿನಲ್ಲಿ 10.56ಶೇ.ಕ್ಕೇರಿತು. ಇತ್ತೀಚಿನ ಸೂಚ್ಯಂಕದ ಪ್ರಕಾರ ಜನವರಿಯಲ್ಲಿ ಹಣದುಬ್ಬರ ಇನ್ನಷ್ಟು ಏರಿ 10.79ಶೇ. ಆಗಿದೆ. ಇನ್ನೂ ಗಮನಾರ್ಹ ಸಂಗತಿಯೆಂದರೆ ಅತೀ ಹೆಚ್ಚು ಬೆಲೆಯೇರಿಕೆ ಆಗಿರುವುದು ಆಹಾರ ಸಾಮಗ್ರಿಗಳ ಬೆಲೆಗಳಲ್ಲಿ–ತರಕಾರಿ ಬೆಲೆಗಳಲ್ಲಿ 26.11ಶೇ. ಏರಿಕೆಯಾಗಿದೆ, ಅಡುಗೆ ತೈಲ/ಕೊಬ್ಬಿನ ಪದಾರ್ಥಗಳಲ್ಲಿ 14.98ಶೇ., ಮೀನು–ಮಾಂಸ ಇತ್ಯಾದಿಗಳಲ್ಲಿ 13.73ಶೇ., ಆಹಾರಧಾನ್ಯಗಳ ಬೆಲೆಗಳಲ್ಲಿ 14.9ಶೇ. ಹಾಗೂ ಬೇಳೆಕಾಳುಗಳ ಬೆಲೆಗಳಲ್ಲಿ 12.76ಶೇ. ಏರಿಕೆಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹಣದುಬ್ಬರ ನಗರಗಳಿಗಿಂತಲೂ ಹೆಚ್ಚು–ಡಿಸೆಂಬರಿನಲ್ಲಿ 10.74ಶೇ. ಇದ್ದದ್ದು ಜನವರಿಯಲ್ಲಿ 10.88 ಶೇ. ಆಗಿದೆ.

ಕೈಗಾರಿಕಾ ಉತ್ಪಾದನೆಯ ಇತ್ತೀಚಿನ ಅಂಕಿ–ಅಂಶವೂ ಈವಾರ ಪ್ರಕಟವಾಗಿದ್ದು, ಡಿಸೆಂಬರ್ 2012ರಲ್ಲಿ 0.6ಶೇ.ದಷ್ಟು ಇಳಿದಿದೆ. ಅದರಲ್ಲೂ ಸರಕು ತಯಾರಿಕಾ ವಲಯದಲ್ಲಿ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಗಿದೆ. ಡಿಸೆಂಬರ್ 2011ರಲ್ಲಿ ಅದು 2.7ಶೇ.ದಷ್ಟು ಏರಿತ್ತು ಎಂಬುದನ್ನು ಗಮನಿಸಬಹುದು.

ದೇಶದ ಜಿಡಿಪಿ ಬೆಳವಣಿಗೆ ದರ ಇಳಿಯುತ್ತದೆ ಎಂಬ ಭಯ ಯುಪಿಎ–2 ಸ್ರಕಾರಕ್ಕೂ ಇತ್ತು. ಆದರೂ 5.7ರಿಂದ 5.9ಶೇ. ಇರುತ್ತದೆ ಎಂದು ಅದು ನಿರೀಕ್ಷಿಸಿತ್ತು. ರಿಝರ್ವ್ ಬ್ಯಾಂಕ್ ಈ ನಿರೀಕ್ಷೆಯನ್ನು 5.5ಶೇ.ಕ್ಕೆ ಇಳಿಸಿತು. ಈಗ ಸಿಎಸ್‌ಒ ಪ್ರಕಟಿಸಿರುವ ಆರ್ಥಿಕ ಅಂಕಿ–ಅಂಶಗಳ ಪ್ರಕಾರ 2012–13ರಲ್ಲಿ ಅದು 5ಶೇ.ಕ್ಕೆ ಇಳಿಯುತ್ತದೆ. ಕಳೆದ ಹಣಕಾಸು ವರ್ಷದಲ್ಲಿ ಅದು 6.2 ಶೇ. ಇತ್ತು.

ಕೈಗಾರಿಕಾ ಬೆಳವಣಿಗೆ ದರ 2.7ಶೇ.ದಿಂದ 1.9ಶೇ. ಕ್ಕೆ ಇಳಿಯಲಿದೆಯಂತೆ. ಕೃಷಿ ಮತ್ತು ಸಂಬಂಧಿತ ವಲಯದ ಬೆಳವಣಿಗೆ ದರ 1.8ಶೇ.ಕ್ಕೆ ಇಳಿಯುತ್ತದೆ. ಕಳೆದ ವರ್ಷ ಇದು 3.6ಶೇ. ಇತ್ತು. ಅಂದರೆ ಅರ್ಧಕ್ಕಿಳಿಯುತ್ತದೆ. ಇತ್ತೀಚಿನ ವರ್ಷಗಳಲ್ಲಿ ಜಿಡಿಪಿ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಸೇವಾ ವಲಯದ ಬೆಳವಣಿಗೆ ದರವೂ ಕುಂಠಿತಗೊಳ್ಳುತ್ತಿದೆ. 11.7ಶೇ.ದಿಂದ 8.6ಶೇ.ಕ್ಕೆ ಇಳಿಯುವ ಭಯವಿದೆ.

8–9ಶೇ. ಜಿಡಿಪಿ ಬೆಳವಣಿಗೆಯ ರಾಗಾಲಾಪನೆ ಮಾಡುತ್ತಿದ್ದ ಯುಪಿಎ ಪ್ರಭೃತಿಗಳನ್ನು ಈ ಸಿಎಸ್‌ಒ ಅಂದಾಜುಗಳು ನಿರಾಶೆಗೊಳಿಸಿವೆ. ಆದರೆ ಈ ಅಂದಾಜುಗಳು ತಪ್ಪಿರಬಹುದು ಎಂದು ಅವರು ಹೇಳುತ್ತಿದ್ದಾರೆ, ಅಥವ ತಪ್ಪಿರಲಿ ಎಂದು ಆಶಿಸುತ್ತಿದ್ದಾರೆ! ಜಿಡಿಪಿ ಬೆಳವಣಿಗೆ ದರ ಅಷ್ಟು ಕಡಿಮೆಯಾಗಲಿಕ್ಕಿಲ್ಲ, 5.5ಶೇ. ದಷ್ಟಾದರೂ ಇರುತ್ತದೆ ಎಂದು ಹಣಕಾಸು ಮಂತ್ರಾಲಯ ಹೇಳಿದರೆ, ಯೋಜನಾ ಆಯೋಗದ ಉಪಾಧ್ಯಕ್ಷರು ಈ ಅಂದಾಜಿನಲ್ಲಿಯೇ ಎಲ್ಲೋ ತಪ್ಪಾಗಿದೆ ಎಂದಿದ್ದಾರೆ!

ಜನಶಕ್ತಿ
ಕನ್ನಡ ವಾರಪತ್ರಿಕೆ

ಶಿಕ್ಷಣದ ಕಡೆಗಣನೆ – ವಿದ್ಯಾರ್ಥಿಗಳ ಧಿಕ್ಕಾರದ ಮೊಳಗು

ರಾಜ್ಯ ಬಜೆಟ್‌ನಲ್ಲಿ ಶೇ.30ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಲು ಮತ್ತು ಖಾಸಗಿ ವಿ.ವಿ.ಗಳ ಸ್ಥಾಪನೆ ವಿರೋಧಿಸಿ, ಹಾಸ್ಟೆಲ್ ವಿದ್ಯಾರ್ಥಿಗಳ ಆಹಾರ ಭತ್ಯೆಯನ್ನು ರೂ.3500 ಕ್ಕೆ ಹೆಚ್ಚಿಸಲು, ಹಾಗು ವಿವಿಧ ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ)ಕರ್ನಾಟಕ ರಾಜ್ಯ ಸಮಿತಿ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾ ಮೆರವಣಿಗೆ ಬೆಂಗಳೂರು ರೈಲು ನಿಲ್ದಾಣದಿಂದ ಆರಂಭಗೊಂಡು ಫ್ರೀಡಂ ಪಾರ್ಕ್‌ನಲ್ಲಿ ಸಮಾವೇಶಗೊಂಡಿತು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜಾಧ್ಯಕ್ಷರಾದ ಅನಂತ್ ನಾಯ್ಕ್, ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್, ರಾಜ್ಯ ಉಪಾಧ್ಯಕ್ಷ ಗುರುರಾಜ್ ದೇಸಾಯಿ, ಜಗದೀಶ್ ಸೂರ್ಯ, ಬೆಂಗಳೂರು ಜಿಲ್ಲಾಧ್ಯಕ್ಷ ಮುನಿರಾಜ್ ಜಿಲ್ಲಾ ಕಾರ್ಯದರ್ಶಿ ಚಿಕ್ಕರಾಜು ಮುಖಂಡರಾದ ರೇಣುಕಾ ಕಹಾರ್ ಮಾತನಾಡಿ ರಾಜ್ಯದ ಶೈಕ್ಷಣಿಕ ಕ್ಷೇತ್ರ ಸಮಸ್ಯೆಗಳ ಗೂಡಾಗಿದೆ. 36 ಸಾವಿರ ಶಿಕ್ಷಕರ ಹುದ್ದೆಗಳು ಮತ್ತು ಶೇ 27 ರಷ್ಟು ಕಾಲೇಜು ಹಾಗೂ ವಿ.ವಿ. ಪ್ರಾಧ್ಯಾಪಕರ ಹುದ್ದೆಗಳು ಖಾಲಿಯಿವೆ. ಶೇ. 68 ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ. 11 ಲಕ್ಷ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿದು ಬಾಲಕಾರ್ಮಿಕರಾಗಿದ್ದಾರೆ. ಶಿಕ್ಷಕ–ಉಪನ್ಯಾಸಕರು ಕೆಲಸದ ಹೊರೆಯಿಂದ ನರಳುತ್ತಿದ್ದಾರೆ. ಬಹುತೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಕಾನೂನು ಬಾಹಿರವಾಗಿ ಡೊನೇಷನ್ ವಸೂಲಿಯಲ್ಲಿ ತೊಡಗಿವೆ. ಆರ್.ಟಿ.ಇ ಕಾಯ್ದೆ ಜಾರಿಗೊಳಿಸಲು ಖಾಸಗಿ ಶಿಕ್ಷಣ ಸಂಸ್ಥೆಗಳು ಹಿಂದೇಟು ಹಾಕುತ್ತಿವೆ. ರಾಜ್ಯದಲ್ಲಿ 3174 ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ. ಅಲ್ಲದೆ ಪ್ರೊ.ಗೋವಿಂದ ವರದಿ ಶಿಫಾರಸ್ಸಿನಂತೆ ರಾಜ್ಯ ಸರ್ಕಾರ ರಾಜ್ಯದ 12,740 ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿದೆ. ರಾಜ್ಯದ ಶಾಲಾ–ಕಾಲೇಜು–ಹಾಸ್ಟೆಲ್ ಹಾಗೂ ವಿಶ್ವವಿದ್ಯಾಲಯಗಳು ಮೂಲ ಸೌಕರ್ಯಗಳ ಕೊರತೆಯಿಂದ ಬಳಲುತ್ತಿವೆ. ಅಲ್ಲಿರುವ ವಿದ್ಯಾರ್ಥಿ–ಶಿಕ್ಷಕ ಸಮುದಾಯ ಸಮಸ್ಯೆಗಳ ಸುಳಿಯಲ್ಲಿ ಪರದಾಡುವಂತಾಗಿದೆ. ವಿ.ವಿ. ಗಳಲ್ಲಿ ಸಂಶೋಧನಾ ಶಿಕ್ಷಣ ಕುಸಿಯುತ್ತಿದೆ. ಭ್ರಷ್ಟಾಚಾರ ಹೆಚ್ಚಿದೆ. ಸರ್ಕಾರಿ ವಿ.ವಿ.ಗಳನ್ನು ಬಲಪಡಿಸುವುದರ ಬದಲಾಗಿ 18 ಖಾಸಗಿ ವಿ.ವಿ.ಗಳನ್ನು ಸ್ಥಾಪನೆ ಮಾಡುವುದರ ಮೂಲಕ ಉನ್ನತ ಶಿಕ್ಷಣವನ್ನು ವ್ಯಾಪಾರೀಕರಿಸಲು ಹೊರಟಿರುವ ರಾಜ್ಯ ಸರ್ಕಾರದ ನಿರ್ಧಾರ ಖಂಡನೀಯ. ಬಡ, ದಲಿತ, ಮಧ್ಯಮ

ಬಜೆಟ್‌ನಲ್ಲಿ ಶೇ.30ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಲು ಮತ್ತು ಖಾಸಗಿ ವಿ.ವಿ.ಗಳ ಸ್ಥಾಪನೆ ವಿರೋಧಿಸಿ, ಹಾಸ್ಟೆಲ್ ವಿದ್ಯಾರ್ಥಿಗಳ ಆಹಾರ ಭತ್ಯೆಯನ್ನು ರೂ.3,500 ಕ್ಕೆ ಹೆಚ್ಚಿಸಲು, ಹಾಗು ವಿವಿಧ ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಎಸ್‌ಎಫ್‌ಐ ಪ್ರತಿಭಟನೆ



ವರ್ಗವನ್ನು ಶಿಕ್ಷಣದಿಂದ ವಂಚಿಸುವ ಈ ಖಾಸಗಿ ಮಸೂದೆಗಳನ್ನು ರಾಜ್ಯಪಾಲರು ತಿರಸ್ಕರಿಸಬೇಕೆಂದು ಒತ್ತಾಯಿಸಿದರು.

ರಾಜ್ಯದಲ್ಲಿ ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟೆಲ್ ಸೌಲಭ್ಯ ಸಿಗುತ್ತಿಲ್ಲ. ಹಾಸ್ಟೆಲ್‌ಗಳಲ್ಲಿ ಕನಿಷ್ಠ ಮೂಲ ಸೌಕರ್ಯಗಳು ಹಾಗು ಪೌಷ್ಠಿಕ ಆಹಾರದ ಕೊರತೆಯಿಂದಾಗಿ ವಿದ್ಯಾರ್ಥಿಗಳು ನರಕಯಾತನೆ ಅನುಭವಿಸುತ್ತಿದ್ದಾರೆ. ಜೈಲಿನಲ್ಲಿರುವ ಖೈದಿಗಳ ಊಟಕ್ಕೆ ಪ್ರತಿದಿನ 120 ರೂಪಾಯಿ ಖರ್ಚು ಮಾಡುತ್ತಿರುವ ಸರ್ಕಾರ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕೇವಲ 28 ರೂಪಾಯಿ ಮಾತ್ರ ಖರ್ಚು ಮಾಡುತ್ತಿರುವುದು ವಿಪರ್ಯಾಸದ ಸಂಗತಿ. ದಿನದಿಂದ ದಿನಕ್ಕೆ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೆರುತ್ತಿದ್ದು ಬೆಲೆಯೇರಿಕೆಗೆ ತಕ್ಕಂತೆ ಆಹಾರ ಭತ್ಯೆ ಹೆಚ್ಚಳ ಆಗುತ್ತಿಲ್ಲ. ರಾಜ್ಯದಲ್ಲಿರುವ ಜ್ವಲಂತ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಮುಂದಾಗುತ್ತಿಲ್ಲವೆಂದು ತೀವ್ರವಾಗಿ ಖಂಡಿಸಿದರು.

ವಿವಿಧ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೇರಿದ್ದರು. ಸರಕಾರದ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇ.ವೆಂಕಟಯ್ಯ ಧರಣಿ ಸ್ಥಳಕ್ಕೆ ಆಗಮಿಸಿ ಮುಖ್ಯಮಂತ್ರಿಗಳಿಗೆ ಬರೆದಿದ್ದ ಮನವಿ ಪತ್ರ ಸ್ವೀಕರಿಸಿದರು. ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿ ಮುಖ್ಯಮಂತ್ರಿಗಳ ಜೊತೆ ಮಾತನಾಡುವುದಾಗಿ ತಿಳಿಸಿದರು.

ಬೇಡಿಕೆಗಳು

ಶಿಕ್ಷಣ ತಜ್ಞರಾದ ಡಾ.ಕೊಠಾರಿ ಆಯೋಗದ ಶಿಫಾರಸ್ಸಿನಂತೆ ಶಿಕ್ಷಣಕ್ಕಾಗಿ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಶೇ.30 ರಷ್ಟು ಹಣ ಮೀಸಲಿಡಬೇಕು.

30 ವಿದ್ಯಾರ್ಥಿಗಳಗಿಂತ ಕಡಿಮೆ ಮಕ್ಕಳಿರುವ ಸರ್ಕಾರಿ ಶಾಲೆಗಳನ್ನು (ವಿಲೀನ ಮಾಡಲು)ಮುಚ್ಚಲು ಶಿಫಾರಸ್ಸು ಮಾಡಿರುವ ಪ್ರೊ.ಗೋವಿಂದ ವರದಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು. ಸರ್ಕಾರಿ ಶಾಲಾ–ಕಾಲೇಜು–ಹಾಸ್ಟೆಲ್‌ಗಳನ್ನು ಮುಚ್ಚುವ ಬದಲು ಅವುಗಳನ್ನು ಬಲಪಡಿಸಿ ಮತ್ತು ಅಗತ್ಯ ಮೂಭೂತ ಸೌಲಭ್ಯಗಳಾದ ಶುದ್ಧ ಕುಡಿಯುವ ನೀರು, ಶೌಚಾಲಯ, ಕೊಠಡಿಗಳು, ಗ್ರಂಥಾಲಯ, ಆಟದ ಮೈದಾನ ಒದಗಿಸಬೇಕು.

ಶಿಕ್ಷಣ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ಖಾಸಗಿ ಶಾಲೆಗಳ ಒತ್ತಡಕ್ಕೆ ಮಣಿಯದೇ ಮಕ್ಕಳ ಹಕ್ಕುಗಳನ್ನು ರಕ್ಷಿಸಬೇಕು.

ಮೆಟ್ರಿಕ್ ಪೂರ್ವ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ರೂ.3000, ಮೆಟ್ರಿಕ್ ನಂತರದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ರೂ. 3500 ಆಹಾರ ಭತ್ಯೆ ನೀಡಬೇಕು ಮತ್ತು ರಾಜ್ಯದ ಹಾಸ್ಟೆಲ್‌ಗಳಿಗೆ ಶುದ್ಧ ಕುಡಿಯುವ ನೀರು, ಶೌಚಾಲಯ, ಸ್ವಂತಕಟ್ಟಡ, ಗ್ರಂಥಾಲಯ, ಕಂಪ್ಯೂಟರ್ ಸೇರಿದಂತೆ ಎಲ್ಲಾ ರೀತಿಯ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಬೇಕು.

ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿ ನಿಯಂತ್ರಿಸಲು 'ಜಿಲ್ಲಾ ಶಿಕ್ಷಣ ರೆಗ್ಯೊಲೇಟಿಂಗ್ ಪ್ರಾಧಿಕಾರ'ವನ್ನು ರಚಿಸಿ



ನಿಯಮ ಬಾಹಿರವಾಗಿ ಡೊನೇಷನ್ ವಸೂಲಿ ಮಾಡುವ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದುಗೊಳಿಸಬೇಕು.

ಖಾಸಗೀ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಸ್ಥಾಪನೆಯನ್ನು ಕೈಬಿಟ್ಟು ಸರ್ಕಾರಿ ವಿ.ವಿ. ಗಳಿಗೆ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಿ, ಬಲಪಡಿಸಬೇಕು. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿನ ಭ್ರಷ್ಟಾಚಾರ ಹಗರಣಗಳನ್ನು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥ ವಿರುದ್ಧ ಕ್ರಮಕೈಗೊಳ್ಳಬೇಕು.

ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿನಿಯ ಮೇಲಾಗುತ್ತಿರುವ ಲೈಂಗಿಕ ದೌರ್ಜನ್ಯಗಳನ್ ತಡೆಗಟ್ಟಲು ಸುಪ್ರೀಂ ಕೋರ್ಟ್ ನಿರ್ದೇಶನದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ 'ಲೈಂಗಿಕ ಕಿರುಕು ವಿರೋಧಿ ಸಮಿತಿ'ಯನ್ನು ರಚಿಸಲ ಆದೇಶಿಸಬೇಕು. ತ'ಮಿಳ'ನಾಡಿನ ಮಾದರಿಯಂತೆ ಪದವಿ ಹಂತದವರೆಗೂ ಉಚಿ ಬಸ್ ಪಾಸ್ ವ್ಯವಸ್ಥೆ ಕಲ್ಪಿಸಿ, ಏರಿಕೆಯಾಗಿರು ಬಸ್ ಪಾಸ್ ದರ ಕಡಿತಗೊಳಿಸಿ, ವಿದ್ಯಾರ್ಥಿ ಪಾಸ್ ಪ್ರಯಾಣ ದೂರವನ್ನು 100 ಕಿ.ಮಿ. ವಿಸ್ತರಿಸಿ, ಸೂಕ್ತ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು

ಖಾಲಿ ಇರುವ ಶಿಕ್ಷಕ–ಉಪನ್ಯಾಸಕ ಭೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿ ಅತಿಥಿ ಉಪನ್ಯಾಸಕ ಹಾಗೂ ಹೊರಗುತ್ತಿ ಪದ್ಧತಿಯನ್ನು ಕೈಬಿಟ್ಟು, ನೇಮಕಾ ಖಾಯಂಗೊಳಿಸಿ, ವೇತನ ತಾರತಮ್ಯ ನಿವಾ ಹಾಗೂ ಸೇವಾ ಭದ್ರತೆ ಒದಗಿಸಬೇಕು.

ಶಿಕ್ಷಣದ ಕೋಮುವಾದೀಕರಣ ಬಿಟ ವೈಜ್ಞಾನಿಕ, ಪ್ರಗತಿಪರ ಮತ್ತು ಉದ್ಯೋಗಾಧಾರಿ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸಬೇಕು.

ಕಾಲೇಜು ವಿದ್ಯಾರ್ಥಿಗಳಿಗೆಲ್ಲರಿಗ ಲ್ಯಾಪ್‌ಟಾಪ್ ನೀಡಬೇಕು.

ಬಾಕಿಯಿರುವ ವಿದ್ಯಾರ್ಥಿ ವೇತನ ಹಾಗು ಸಹಾಯಧನ ಬಿಡುಗಡೆಗೊಳಿಸಬೇಕು.

ವೃತ್ತಿಶಿಕ್ಷಣ(ಸಿ.ಇ.ಟಿ) ಸೀಟು ಹಂಚಿ ಸರ್ಕಾರಿ75 ಆಡಳಿತ ಮಂಡಳಿ 25 ಅನುಪಾತದಲ್ಲಿರಬೇಕು. ಖಾಸಗಿ ಶಿಕ್ಷ ಸಂಸ್ಥೆಗಳನ್ನು ನಿಯಂತ್ರಿಸಲು ಸೂಕ್ತ ಶಾಸ ರಚಿಸಬೇಕು. ಬಡ, ಮಧ್ಯಮ ವರ್ಗದ ವಿದ್ಯಾರ್ಥಿಗಳ ಕೈಗೆಟುಕುವಂತೆ ಶುಲ್ಕಗಳನ್ನು ನಿಗದಿಪಡಿಸಬೇಕು. ಸರ್ಕಾ ಇಂಜಿನಿಯರಿಂಗ್–ಮೆಡಿಕಲ್ ಕಾಲೇಜುಗಳಿಗೆ ಮೂಲಸೌಕರ್ಯಗ ನೀಡಬೇಕು.

ರಾಜ್ಯದಲ್ಲಿ ಪ್ರತಿ ತಾಲೂಕ ಕೇಂದ್ರಗಳಿಗೊಂದರಂತೆ ಸರ್ಕಾ ಐಟಿಐ, ಪಾಲಿಟೆಕ್ನಿಕ್, ನರ್ಸಿಂಗ ಕಾಲೇಜುಗಳನ್ನು ಪ್ರಾರಂಭಿಸಬೇಕು ಎಲ್ಲಾ ಸರ್ಕಾರಿ ವೃತ್ತಿಶಿಕ್ಷಣ ಹಾಗ ತಾಂತ್ರಿಕ ಕಾಲೇಜುಗಳಿಗ ಮೂಲಸೌಕರ್ಯಗಳನ್ನು ನೀಡಬೇಕು ಐಟಿಐ ವಿದ್ಯಾರ್ಥಿಗಳ ಸ್ಟೈಫಂಡ ಹೆಚ್ಚಿಸಬೇಕು.

ರಾಜ್ಯದ ಜ್ವಲಂತ ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚಿಸಲು ಮಾನ್ಯ ಮುಖ್ಯಮಂತ್ರಿಯವ ಅಧ್ಯಕ್ಷತೆಯಲ್ಲಿ ಶಿಕ್ಷಣ ಸಚಿವರುಗಳು, ಸಮಾಜ ಕಲ್ಯಾಣ ಸಚಿವರು, ಶಿಕ್ಷಣ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಎಸ್‌ಎಫ್‌ಐ ರಾಜ್ಯ ಮುಖಂಡರುಗಳ ಜಂಟಿ ಸಭೆ ತಕ್ಷಣದಲ್ಲಿ ಕರೆಯಬೇಕು.

ನಂದಿ ಹೀಗೇಕೆ ಹೇಳಿದರು?

ಟ 16 ರಿಂದ

ಮೇಲ್ಜಾತಿಗಳ ಜನ ದಕ್ಕಿಸಿಕೊಳ್ಳಬಲ್ಲರು. ಮೇಲಾಗಿ ಅಂತಹವರ ಪ್ರಕರಣಗಳು ಹೊರಗೆ ರದಷ್ಟು ನಯವಾಗಿ ಅಲ್ಲಲ್ಲೇ ಕಣ್ಮರೆಯಾಗಿ ಮುಚ್ಚಿ ಹೋಗುತ್ತವೆ. ಆದರೆ ಕೆಳ ಮಟ್ಟದಲ್ಲಿನ, ಳ ಜಾತಿಗಳಿಗೆ ಸೇರಿದವರ ಪ್ರಕರಣಗಳಲ್ಲಿ ಇಂತಹದ್ದನ್ನು ಕಾಣಲಾಗುವುದಿಲ್ಲ, ಅದು ನಿದ್ದರೂ ಇಲ್ಲವೆನ್ನುವಷ್ಟು ತೀರಾ ಅಪರೂಪ.

ಇದನ್ನು ಗಮನಿಸಬೇಕೆನ್ನುವಾಗಲೇ ಅದನ್ನು ಮರ್ಥಿಸಬೇಕಿಲ್ಲ. ಒಟ್ಟಾರೆ ಭ್ರಷ್ಟಾಚಾರ ಇಡೀ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ. ಇದು ಪ್ರಜಾಪ್ರಭುತ್ವವನ್ನೇ ನಾಶಗೊಳಿಸುತ್ತದೆ. ಆದ್ದರಿಂದ ಅದರ ಪೂರ್ಣ ಸ್ವರೂಪದ ವಿರುದ್ಧ, ಎಲ್ಲಾ ಹಂತಗಳಲ್ಲಿಯೂ ಒಂದಾಗಿ ರಾಡಬೇಕಾಗುತ್ತದೆ. ನಂದಿಯವರ ವಾದಗಳು ಇದನ್ನೇ ಛಿದ್ರಗೊಳಿಸುತ್ತವೆ.

ಇದೇ ಹೊತ್ತಿನಲ್ಲಿ ನಂದಿಯವರು ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ಆಡಳಿತದಲ್ಲಿರುವಷ್ಟು ಅವಧಿಯಲ್ಲಿ ಭ್ರಷ್ಟಾಚಾರ ಇಲ್ಲದಿರುವುದ್ಧಕ್ಕೆ ಕಾರಣ ಕೆಳಜಾತಿಗಳು ಅಧಿಕಾರದಲ್ಲಿ ಇಲ್ಲದಿದ್ದುದು ಅರ್ಥಾತ್ ಮೇಲ್ಜಾತಿ ಆಡಳಿತ ಎಂಬ ಅಪ್ಪಟ ಸುಳ್ಳಿನ, ವಿಕೃತವಾದವನ್ನು ಮಾಡಿದ್ದಾರೆ. ಎಡರಂಗ ಅಧಿಕಾರಕ್ಕೆ ಬಂದುದೇ ಪ.ಜಾತಿ,ಪ.ಪಂಗಡ, ಬುಡಕಟ್ಟು ಜನರು, ಹಿಂದುಳಿದ, ಅಲ್ಪಸಂಖ್ಯಾತ ಜನಸಮುದಾಯಗಳ ಭೂಮಿ, ಕೂಲಿಯಂತಹ ಮೂಲಭೂತ ಪ್ರಶ್ನೆಗಳನ್ನೆತ್ತಿ ಹೋರಾಟ ನಡೆಸಿದ್ದರಿಂದ. ಅದರ ಯಶಸ್ಸಿನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಅಧಿಕಾರದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಎಂಬುದು ನಂದಿಯವರಿಗೆ ತಿಳಿಯದ್ದೇನಲ್ಲ. ಪಕ್ಷದ ಮೂಲ ವರ್ಗ ಸಂಯೋಜನೆಯಲ್ಲಿ ಈ ಜಾತಿ ಜನಾಂಗಗಳದ್ದೇ ಸಿಂಹಪಾಲು. ಈಗಲೂ, ಹಿಂದೆಮತ್ತೊಂದು ಸಂಗತಿಯೆಂದರೆ ಎಡಪಕ್ಷಗಳ ನಾಯಕತ್ವ ಸಾಮೂಹಿಕವಾಗಿರುತ್ತದೆ. ಇತರೆ ಪಕ್ಷಗಳಂತೆ ವ್ಯಕ್ತಿ ವಿಜೃಂಭಣೆ ಇರುವುದಿಲ್ಲ. ನಂದಿಯಂತಹ ಬುದ್ಧಿಜೀವಿಗಳಿಗೆ ಅದನ್ನು ಅರಿಯುವ ಇಚ್ಚೆ ಇರುವುದಿಲ್ಲ. ಇಂತಹ ಸತ್ಯಗಳನ್ನು ಡಂಗುರ ಹೊಡೆಯುವುದು ಎಡ ಪಕ್ಷಗಳ ಜಾಯಮಾನವಲ್ಲ. ಸರಕಾರದಲ್ಲಿಯೂ, ಪಕ್ಷದ ಪ್ರಮುಖ ಸ್ಥಾನದಲ್ಲಿಯೂ ಇದೇ ವರ್ಗ, ವಿಭಾಗಗಳು ಅತಿ ಹೆಚ್ಚಿನ ಪ್ರಾಧಾನ್ಯತೆಯನ್ನು ಹೊಂದಿವೆ. ಮೂರುವರೆ ದಶಕ ಆಡಳಿತ ನಡೆಸಿದರೂ ಯಾವುದೇ ಎಡ ನೇತೃತ್ವದ ಸರಕಾರವಾಗಲೀ, ಮುಖ್ಯಮಂತ್ರಿ, ಸಚಿವರು, ಶಾಸಕರಾಗಲೀ ಹಗರಣಗಳನ್ನು ನಡೆಸಿಲ್ಲ. ಇಂತಹದ್ದು ಸಾಧ್ಯವಾದದ್ದು ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಸಿದ್ಧಾಂತ, ಬದ್ಧತೆ ಮತ್ತು ಜನತೆಗೆ ಸಮರ್ಪಿಸಿಕೊಂಡಿರುವುದು ಮತ್ತು ಬಂಡವಾಳಶಾಹಿ ಪಕ್ಷಗಳಿಗೆ ಸವಾಲು ಹಾಕಿ ಪರ್ಯಾಯ ನೀತಿಗಳ ಆಧಾರದಲ್ಲಿ ಮುನ್ನಡೆಯುತ್ತಿರುವುದರಿಂದ.

ಹಾಗೆ ತಮ್ಮ ಗುರುವನ್ನು ಅಭಿಮಾನಿಸಿ, ಅನುಮಾನಿಸಿ, ಪ್ರಶ್ನಿಸಿ ಅಂಕಣದಲ್ಲಿ ಬರೆದಿರುವ ದಿನೇಶ್ ಅಮೀನ್ ಮಟ್ಟು ರವರೂ ಸಹ ನಂದಿಯವರ ಕೆಲ ವಾದ ವಿರೋಧಿಸುವ ಭರದಲ್ಲಿ ಎಡಪಕ್ಷಗಳ ಶೇ. 90ರಷ್ಟು ಜನಪ್ರತಿನಿಧಿಗಳು ಪ್ರಾಮಾಣಿಕರೆಂದೂ, ಆದರೆ ಸಿಪಿಐ(ಎಂ)ನ ಲೋಕಲ್ ಸೆಕ್ರೆಟರಿಗಳು ಭ್ರಷ್ಟರೆಂದು ವಿಚಿತ್ರ ಹೇಳಿಕೆ ನೀಡಿದ್ದಾರೆ. ಜನಪ್ರತಿನಿಧಿಗಳು ಪ್ರಾಮಾಣಿಕರಾಗಿರುವುದು ಪಕ್ಷದ ಸ್ಥಳೀಯ ಮುಖಂಡರು ಭ್ರಷ್ಟರಾಗಿರುವುದು ಹೇಗೆ ಸಾಧ್ಯವೆಂಬುದನ್ನು ಆದರ್ಶಪೂರ್ಣವಾಗಿ ಅವರು ಹೇಳಬೇಕು. ಬಂಡವಾಳಶಾಹೀ ಪಕ್ಷಗಳಲ್ಲಿರುವಂತೆ ಜನಪ್ರತಿನಿಧಿಗಳು ಮತ್ತು ಪಕ್ಷದ ಪದಾಧಿಕಾರಿಗಳಲ್ಲಿ ವ್ಯತ್ಯಾಸವಿರುವುದಿಲ್ಲ. ಪಕ್ಷದ ಸಂಘಟನಾ ನೀತಿಗಳು, ಶಿಸ್ತು ಎಲ್ಲರಿಗೂ ಒಂದೆ. ಇದೇ ಹೊತ್ತಿನಲ್ಲಿ ಪಕ್ಷವೇ ಆಂತರಿಕವಾಗಿ ಮತ್ತು ಸಾರ್ವಜನಿಕವಾಗಿ ವಿಮರ್ಶೆ ಮಾಡಿದಂತೆ ಎಡಶಕ್ತಿಗಳಲ್ಲಿಯೂ ಪರಕೀಯ ಮೌಲ್ಯಗಳ ಪ್ರವೇಶಿಕೆಯನ್ನು ಗುರುತಿಸಿದೆ ಮತ್ತು ಅದನ್ನ ತಡೆಯಲು ತಿದ್ದುಪಡಿ ಚಳುವಳಿಯನ್ನು ಮನಃಪೂರ್ವಕವಾಗಿ ಸಾರಿದೆ. ಅದರಲ್ಲಿ ಪ್ರಗತಿ ಇದೆ. ಇದರರ್ಥ ಇಂತಹ ಪರಕೀಯ ಪ್ರವೃತ್ತಿಗಳು ಪೂರ್ಣ ಮೇಲುಗೈ ಪಡೆದಿವೆಯೆಂದಲ್ಲ, ಪಡೆದಿಲ್ಲ. ಅದಕ್ಕೆ ಅವಕಾಶವಿಲ್ಲ ಹಾಗೇ ಅವೆಲ್ಲಾ ಮಂಗಮಾಯವಾಗಿ ಬಿಟ್ಟಿವೆ ಎಂದೂ ಅರ್ಥವಲ್ಲ. ಆದರೆ ಅವು ಸಣ್ಣ ಪ್ರಮಾಣದ ನುಸುಳುವಿಕೆ ಎಂಬುದನ್ನು ವಸ್ತುನಿಷ್ಟವಾಗಿ ಗುರುತಿಸಬೇಕು. ಇಲ್ಲಿರಬಹುದಾದ ಭ್ರಷ್ಟಾಚಾರದ ಸ್ವರೂಪ, ಪ್ರಮಾಣದ ಬಗ್ಗೆ ಮತ್ತು ಬೇರೆಡೆಯ ಪ್ರಮಾಣದ ಬಗ್ಗೆ ಇದನ್ನು ಬಂಗಾಳಕ್ಕೆ ಹಲವು ಭೇಟಿ ನೀಡಿ ಅಧ್ಯಯನ ಮಾಡಿದ ಮಟ್ಟು ರವರಿಗೂ ಗೊತ್ತು ಅಂದುಕೊಳ್ಳುತ್ತೇವೆ. ಇನ್ನು, ಈ ಕೆಳವರ್ಗಗಳ ಬಡತನ ಎಡರಂಗದ ಆಡಳಿತದಿಂದ ಎನ್ನುವುದಾಗಲೀ, ದೇಶದಲ್ಲಿಯೇ ಅಸಾಧ್ಯವಾದ ಬೆಳವಣಿಗೆಯನ್ನು ಇಲ್ಲಿಯೇ ಸಾಧಿಸಬೇಕಿತ್ತು ಎಂಬುದೂ ಸಮಂಜಸವಲ್ಲ. ಬಂಡವಾಳಶಾಹಿ ಪ್ರಭುತ್ವದಡಿ, ಅದೂ ಕೇಂದ್ರ ಸರಕಾರದ ಸತತ ಆರ್ಥಿಕ, ರಾಜಕೀಯ ತಾರತಮ್ಯ, ದಮನಗಳನ್ನೆದುರಿಸಿ, ಆದಾಗ್ಯೂ ಸ್ವಾಯತ್ತತೆ, ಸ್ವಾವಲಂಬನೆ, ಸಾರ್ವಭೌಮತೆಯನ್ನು ಬಿಟ್ಟು ಕೊಡಲಿಲ್ಲ. ವಿದೇಶಿ ಹಣಕಾಸು ಸಂಸ್ಥೆಗಳಿಗೆ, ಕಾರ್ಪೋರೇಟ್ ಕಂಪನಿಗಳಿಗೆ ತಮ್ಮನ್ನು ಒಪ್ಪಿಸದೇ ಕಾಪಾಡಿಕೊಂಡು ಬಂದ ಎಡರಂಗವನ್ನು ಅಭಿನಂದಿಸಬೇಕು. ಹೀಗೆ ಹೇಳುವಾಗಲೂ ಇನ್ನಷ್ಟು ಹೆಚ್ಚಿನದನ್ನು ಮಾಡಬಹುದಿತ್ತು ಎಂಬುದನ್ನು ನಾವೇನೂ ನಿರಾಕರಿಸುವುದಿಲ್ಲ. ಅವೆಲ್ಲಾ ಏನಿದ್ದರೂ ಎಡರಂಗ, ಎಡ ಶಕ್ತಿಗಳು ಕೆಲಸ ಮಾಡಬೇಕಾದ ಸಂಕೀರ್ಣ ಸನ್ನಿವೇಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಈ ವಾಸ್ತವಗಳಿಗೆ ಕುರುಡಾಗುವುದು ವಿಶ್ಲೇಷಣೆಯನ್ನು ಕುರುಡಾಗಿಸುತ್ತದೆ. ಅಂತಹವರು ನಂದಿಯವರ ಜಾಡಿನಲ್ಲೇ ಮುಗ್ಗರಿಸಬೇಕಾಗುತ್ತದೆ.

ಫೆಬ್ರವರಿ 20, 21 2013
ದೇಶವ್ಯಾಪಿ ಸಾರ್ವತ್ರಿಕ
ಮಹಾ ಮುಷ್ಕರವನ್ನು
ಯಶಸ್ವಿಗೊಳಿಸಿ.

ಶಾಲಾ-ಕಾಲೇಜು ಬಂದ್‌ಗೆ
ಎಸ್.ಎಫ್.ಐ. ಕರೆ

ಬದಲಾವಣೆಯನ್ನು ಬಿಂಬಿಸಿದ ಸಿಐಟಿಯು ರಾಜ್ಯ ಸಮ್ಮೇಳನ

ಪುಟ 11 ರಿಂದ

ಎತ್ತಿಕೊಳ್ಳಲು ಕಾರ್ಯಕರ್ತರ ಹೋರಾಟ ಸಮಿತಿಗಳನ್ನು ರಚಿಸಬೇಕು ಎಂದು ಯೋಜಿಸಲಾಗಿದೆ. ಎರಡು ದಿನಗಳ ಅಖಿಲ ಭಾರತ ಮುಷ್ಕರ ಮತ್ತು ಹರತಾಳವನ್ನು ಯಶಸ್ವಿಗೊಳಿಸಲು ಲಕ್ಷಾಂತರ ಕರಪತ್ರಗಳು, ಸಾವಿರಾರು ಪೋಸ್ಟರುಗಳನ್ನು ಮುದ್ರಿಸಲಾಗುವುದು. ಹತ್ತಾರು ಸಾವಿರ ಕಾರ್ಯಕರ್ತರು ಶ್ರಮಿಸಲಿದ್ದಾರೆ.

ಶಿರಸಿ ಸಮ್ಮೇಳನ ಎಲ್ಲ ಕಾರ್ಮಿಕರಿಗೆ ಅಗತ್ಯ ಆಧಾರಿತ ಕನಿಷ್ಟ ಕೂಲಿಗಳನ್ನು ಈಡೇರಿಸಿಕೊಳ್ಳಲು ಕಾರ್ಯಾಚರಣೆ ನಡೆಸಲು, ಸತತ ಪ್ರಚಾರ-ಪ್ರಕ್ಷೋಭೆ ನಡೆಸಲು ಕರೆ ನೀಡಿತು. ವಾಗಿ ರೂಪಿಸಿದ, ಪ್ರತಿನಿಧಿಗಳಿಗೆ ವಿವರಿಸಿದ ಕನಿಷ್ಟ ಕೂಲಿಗಳನ್ನು ಕುರಿತ ನಿರ್ಣಯ ಅವರಲ್ಲಿ ವಿದ್ಯುತ್ ಸಂಚಾರ ತಂದಿತು. ಈ ಕುರಿತ ವಾಸ್ತವಿಕ ಘೋಷಣೆಗಳಿಂದ ಆಕರ್ಷಿತರಾಗಿದ್ದಾರೆ, ಅವನ್ನು ಸಾಧಿಸಲು ಭವಿಷ್ಯದಲ್ಲಿ ಹೋರಾಟಗಳನ್ನು ನಡೆಸುವ ನಿರೀಕ್ಷೆ ಇದೆ.

ಇನ್ನೊಂದು ವಿಶಿಷ್ಟ ಅಂಶವೆಂದರೆ ಕೆ.ಜಿ.ಎಫ್.ನ ಭಾರತ್ ಗೋಲ್ಡ್ ಮೈನ್ಸ್ ಪುನರಾರಂಭ ಮಾಡಬೇಕು ಎಂದು ಆಗ್ರಹಿಸುವ ನಿರ್ಣಯ. ಈ ನಿರ್ಣಯ ಮತ್ತು ಸಮ್ಮೇಳನದ ಕರೆ ಸಂಗಾತಿಗಳ ಪ್ರಜ್ಞೆಯನ್ನು ಕಲಕಿತು, ಸುಪ್ರಿಂ ಕೋರ್ಟಿನಲ್ಲಿ ಸಿಐಟಿಯು ಏಕಾಂಗಿಯಾಗಿ ನಡೆಸುತ್ತಿರುವ ಸಮರದೊಂದಿಗೆ ಸೌಹಾರ್ದ ವ್ಯಕ್ತಪಡಿಸಲು ಸ್ಥಳದಲ್ಲಿಯೇ ನಲ್ವತ್ತು ಸಾವಿರ ರೂಪಾಯಿಗಳ ಸಂಗ್ರಹವಾಯಿತು.

ಇನ್ನೂ ಇತರ 33 ನಿರ್ಣಯಗಳನ್ನು ಅಂಗೀಕರಿಸಲಾಯಿತು. ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿ ಕುರಿತ ನಿರ್ಣಯವೂ ಸೇರಿದೆ. ಸಮ್ಮೇಳನದಲ್ಲಿ ಮಂಡಿಸಿ ಅಂಗೀಕರಿಸಿದ 12 ನಿರ್ಣಯಗಳಲ್ಲದೆ, ವಿಜೆಕೆಯವರು ಮಂಡಿಸಿದ ಭಯೋತ್ಪಾದನೆ ಕುರಿತ ನಿರ್ಣಯವೂ ಸೇರಿದಂತೆ ಇತರ ನಿರ್ಣಯಗಳನ್ನು ಅಂತಿಮಗೊಳಿಸಲು ಹೊಸದಾಗಿ ಚುನಾಯಿತರಾಗಿರುವ ಪದಾಧಿಕಾರಿಗಳಿಗೆ ಅಧಿಕಾರ ನೀಡಲಾಯಿತು. ಅವನ್ನು 12 ನೇ ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳೆಂದು ಪ್ರಕಟಿಸಲಾಗುವುದು.

ಕಾಂ. ಎ.ಕೆ.ಪದ್ಮನಾಭನ್, ಸಿಐಟಿಯು ಅಧ್ಯಕ್ಷರು, ಜನವರಿ 28 ಮತ್ತು 29ರಂದು ಪ್ರತಿನಿಧಿ ಅಧಿವೇಶನದಾದ್ಯಂತ ಕೂತಿದ್ದು 35 ಪದಾಧಿಕಾರಿಗಳ ನವೀನ ತಂಡದ ಸುಮಾರಾಗಿ ಸುಲಲಿತವಾಗಿ ನಡೆದ ಚುನಾವಣೆಯ ಉಸ್ತುವಾರಿ ವಹಿಸಿದರು. ವಿ ಜೆ ಕೆ ನಾಯರ್ ಅಧ್ಯಕ್ಷರು, ಎಸ್.ವರಲಕ್ಷ್ಮಿ ಮತ್ತು ಇತರ ಉಪಾಧ್ಯಕ್ಷರು, ಎಸ್.ಪ್ರಸನ್ನಕುಮಾರ್ ಪ್ರಧಾನ ಕಾರ್ಯದರ್ಶಿ ಮತ್ತು ಪರಮೇಶ್ವರ್ ಖಜಾಂಚಿಯಾಗಿ ಆಯ್ಕೆಗೊಂಡರು. 70 ಸದಸ್ಯರಿರುವ ರಾಜ್ಯಸಮಿತಿಯನ್ನು ಚುನಾಯಿಸಲಾಯಿತು. ಕಣ್ಣೂರು ಸಮ್ಮೇಳನಕ್ಕೆ 76 ಪ್ರತಿನಿಧಿಗಳನ್ನು ಕೂಡ ಆರಿಸಲಾಯಿತು. ಸಹಜವಾಗಿಯೇ ಈ ಐತಿಹಾಸಿಕ ಸಮ್ಮೇಳನದ ಸಮಾರೋಪವನ್ನು ಜನವರಿ 29ರ ಸಂಜೆ 5ರ ವೇಳೆಗೆ ಅವರು ಒಂದು ದೀರ್ಘ, ಉಪಯುಕ್ತ ಭಾಷಣದ ಮೂಲಕ ಮಾಡಿದರು. ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಸಭಿಕರು ಮತ್ತು ಎಕೆಪಿ ಹಾಗೂ ವಿಜೆಕೆಯವರಿಂದ ಗೌರವಿಸಲ್ಪಟ್ಟ ಸ್ವಯಂಸೇವಕಿಯರ ಅನಂತವೆಂಬಂತೆ ಕಾಣುತ್ತಿದ್ದ ಸಾಲು, ಉತ್ತರ ಕನ್ನಡ ಜಿಲ್ಲೆಯ ಭರವಸೆ ಮೂಡಿಸುವ ಕಾರ್ಯಕರ್ತರನ್ನು ಪ್ರತಿನಿಧಿಗಳಿಗೆ ಪರಿಚಯ ಮಾಡಿಸಿ ಕೊಟ್ಟಿತು. ಅವರಿಗೆ ನೇತೃತ್ವ ನೀಡಿರುವವವರು ಮಹಿಳಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ.ಯಮುನಾ ಗಾಂವ್ಕರ್, ಸಮರ್ಥ ನೆರವು ನೀಡಿದವರು ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ಕಾರ್ಮಿಕ ನಾಯಕರಾಗಿದ್ದ ಹರೀಶ್ ನಾಯ್ಕ, ಸ್ವಾಗತ ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯಾಧ್ಯಕ್ಷರಾಗಿದ್ದ ಕಾಂ.ಸಿ.ಆರ್.ಶಾನುಭಾಗ್ ಮತ್ತು ಕಾಂ. ಶಾಂತಾರಾಂ ನಾಯಕ್.

ನಂದಿ ಹೀಗೇಕೆ ಹೇಳಿದರು?

ಜೈಪುರದ ಸಾಹಿತ್ಯ ಉತ್ಸವದಲ್ಲಿ ಅಶೀಶ್ ನಂದಿಯವರಾಡಿದ ಮಾತುಗಳು ತೀವ್ರ ಸ್ವರೂಪದ ವಿವಾದಕ್ಕೆ ಕಾರಣವಾಗಿವೆ. ಇಂತಹ ಮಾತುಗಳ ಉದ್ದೇಶವಾದರೂ ಏನು?

ಎಸ್.ವೈ.ಗುರುಶಾಂತ್

ವಾರಗಳೆರಡು ಕಳೆದರೂ ಅಶೀಶ್ ನಂದಿಯವರು ಜೈಪುರ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಆಡಿದ ಮಾತಿನ ಸುತ್ತ ವಿವಾದದ ಬೆಂಕಿ ಆರಿಲ್ಲ. ಅವರು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವ ಓಘದಲ್ಲಿ ತೀರಾ ಹಾದಿ ತಪ್ಪಿದ ಅರ್ಥಹೀನ ಹೇಳಿಕೆಗಳನ್ನು ನೀಡುತಿದ್ದರೆ, ಅದನ್ನು ವಿರೋಧಿಸುವವರಲ್ಲಿ ಅವರನ್ನು ಜೈಲಿಗಟ್ಟುವವರೆಗಿನ ಕ್ರಮಗಳು ಮತ್ತೊಂದು ಅತಿರೇಕವನ್ನು ಕಾಣಿಸುತ್ತವೆ.

'ಆಲೋಚನೆಗಳ ಪ್ರಜಾಪ್ರಭುತ್ವ' ಎಂಬ ವಿಷಯುಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಪತ್ರಕರ್ತ ತರುಣ್ ತೇಜ್ ಪಾಲ್‌ರಾಗಲೀ, ಖ್ಯಾತ ಸಮಾಜಶಾಸ್ತ್ರಜ್ಞ ಆಶೀಶ್ ನಂದಿಯವರು ಆಡಿದ ಮಾತುಗಳು ವಿವಾದ, ಗೊಂದಲಗಳನ್ನು ಹುಟ್ಟು ಹಾಕಿವೆ. ' ಭಾರತದಂತಹ ದೇಶದಲ್ಲಿ ಭ್ರಷ್ಟಾಚಾರ ಎನ್ನುವುದು ವರ್ಗ ಸಮಾನತೆಯ ಒಂದು ಸಾಧನ" ಎಂದು ತರುಣ್ ತೇಜಪಾಲ್ ಹೇಳಿದರೆ ಅವರ ಹೇಳಿಕೆಯ ಎಳೆಗಳನ್ನು ಹಿಡಿದು '. . .ಅತೀ ಹೆಚ್ಚಿನ ಸಂಖ್ಯೆಯ ಭ್ರಷ್ಟರು ಹಿಂದುಳಿದ ಜಾತಿ, ಪರಿಶಿಷ್ಟ ಜಾತಿ, ಪ.ಪಂಗಡಕ್ಕೆ ಸೇರಿದವರು' ಎಂದು ಒಂದು ಗಂಭೀರವಾದ ಆರೋಪದ ಮೂಲಕ ಬೀಸು ಹೇಳಿಕೆಯನ್ನು ನೀಡಿದ್ದಾರೆ. 'ಭ್ರಷ್ಟ ವ್ಯವಸ್ಥೆಯಲ್ಲಿ ಪಾಲು ಪಡೆಯಲು ಕೆಳ ವರ್ಗದವರಿಗೆ ಸಾಧ್ಯವಾಗುತ್ತಿಲ್ಲ' ಎಂದು ತೇಜಪಾಲ್ ಹೇಳಿದ್ದರೆ ನಂದಿ ಅವರು ತಾವು ಹೇಳಿದ ಸ್ಥಿತಿ ಮುಂದುವರಿಯುವವರೆಗೂ ಪ್ರಜಾಪ್ರಭುತ್ವ ಸುರಕ್ಷಿತವಾಗಿರುತ್ತದೆ ಎಂದು ಹೇಳುತ್ತಾ ಅದಕ್ಕೆ ಉದಾಹರಣೆಯಾಗಿ ಪ.ಬಂಗಾಲವನ್ನು, ಎಡಪಕ್ಷಗಳನ್ನು ಎಳೆದು ತಂದಿದ್ದಾರೆ. ಇಲ್ಲಿ ಹುಟ್ಟುವ ಪ್ರಶ್ನೆಯೆಂದರೆ ಇಂತಹ ಬೀಸು ಹೇಳಿಕೆಗಳು ಅಗತ್ಯವಿತ್ತೇ? ದೇಶ, ವಿದೇಶಗಳಲ್ಲಿನ ಭ್ರಷ್ಟಾಚಾರ, ಭಾರೀ ಹಗರಣಗಳ ಮೂಲ ಮತ್ತು ಸ್ವರೂಪಗಳನ್ನು ಅರಿಯಲಾರದಷ್ಟು ದಡ್ಡರೇನಲ್ಲ ಇವರು. ಹೀಗಿರುವಾಗ ಯದ್ವಾ ಬಿದ್ರಿಯಾಗಿ ದೊಣ್ಣೆ ಬೀಸುವ ಇಂತಹ ಹೇಳಿಕೆಯ ಹಿಂದಿನ ಉದ್ದೇಶವಾದರೂ ಏನಿತ್ತು?

ನಿಜ, ಇದು ಅವರ ವಿಶ್ಲೇಷಣೆಯ ವಿಧಾನ ಎಂದು ಅಂದುಕೊಂಡರೂ ಅವರ ಉದ್ದೇಶ ಅಷ್ಟು ಸರಳವೆನಿಸುವುದಿಲ್ಲ. ನಂದಿಯೇ ಮಾತಿಗೆ ಮುನ್ನ 'ತಮ್ಮ ಮುಂದಿನ ಹೇಳಿಕೆಯು ಅಘಾತ ತರಬಹುದು, ಘನತೆಗೆ ತಕ್ಕುದಲ್ಲ, ಅಶ್ಲೀಲವೆನಿಸಬಹುದು' ಎಂಬಂತಹ ಪೀಠಿಕೆಯನ್ನು ಹಾಕಿದ್ದಾರೆ. ದೇಶದಲ್ಲಿ ಹತ್ತಾರು ಮಹಾ ಭ್ರಷ್ಟಾಚಾರದ ಹಗರಣಗಳು ಒಂದಾದ ನಂತರ ಮತ್ತೊಂದರಂತೆ ಸ್ಫೋಟಿಸುತ್ತಿರುವಾಗ, ಅಧಿಕಾರಸ್ಥರು, ಕಾರ್ಪೋರೇಟ್ ಕಂಪನಿಗಳ ಕರಾಳ ಮುಖ ಅನಾವರಣಗೊಳ್ಳುತ್ತಿರುವಾಗ ಅದರ ಬಗ್ಗೆ ಇಬ್ಬರೂ ಮಾತನಾಡಲಿಲ್ಲ.ಮಧು ಕೋಡಾ,ಲಲ್ಲೂ,ಮಾಯಾವತಿಯಂತಹ ಅಧಿಕಾರದ ಮೆಲಂತಸ್ತಿನಲ್ಲಿರುವವರು ನಡೆಸದ ಭ್ರಷ್ಟಾಚಾರದ ಬಗ್ಗೆ ಪ್ರಸ್ಥಾಪಿಸಿ ಅವರನ್ನೇ ಇಡೀ ಸಮುದಾಯದ ಪ್ರತಿನಿಧಿಗಳು, ಸಮಗ್ರ ವಾರಸುದಾರರರು ಎಂಬಂತೆ ಸಮೀಕರಿಸಿದರು. ಯಡಿಯೂರಪ್ಪನಂಥವರು ಇಡೀ ಲಿಂಗಾಯತರ, ಕುಮಾರಸ್ವಾಮಿ ಒಕ್ಕಲಿಗರ ಪ್ರತಿನಿಧಿ ಹೇಗೆ ಆಗಲಾರರೋ ಹಾಗೇ ಕೋಡಾ, ಮಾಯಾವತಿ. . . ಇತ್ಯಾದಿ ಕೂಡ. ಇದಲ್ಲದೇ ತೀರಾ ಕೆಳಹಂತದಲ್ಲಿರುವ ಕೆಲವು ಪ್ರಮಾಣದ ಭ್ರಷ್ಟಾಚಾರವನ್ನೇ ದೈತ್ಯ ಸ್ವರೂಪಿಯಾಗಿ ವ್ಯಾಖ್ಯಾನಿಸುವುದು ಮತ್ತು ಉತ್ಪ್ರೇಕ್ಷಿಸುವುದು ಆ ಮೂಲಕ ಗೊಂದಲ ಹುಟ್ಟಿಸಿ ಹಾದಿ ತಪ್ಪಿಸುವ ದುರುದ್ದೇಶವನ್ನು ತಳ್ಳಿ ಹಾಕುವಂತಿಲ್ಲ.

ಈಗ ಅವರು ಎಬ್ಬಿಸಿದ ವಿವಾದದ ಕಿಡಿಯು ಯಾವುದೇ ಜಾತಿ, ಮತಗಳಿಗೆ ಸೇರಿದ್ದರೂ ಭ್ರಷ್ಟಾಚಾರದ ವಿರುದ್ಧವಿರುವ ಎಲ್ಲರ ಒಗ್ಗಟ್ಟನ್ನು ಒಡೆದು ಮೇಲ್ಜಾತಿ, ಕೆಳಜಾತಿ ಎಂಬ ವಿಭಜನೆಯನ್ನು ತರುತ್ತಿದೆ. ಹೀಗೆ ಇಡೀ ಸಮುದಾಯಗಳನ್ನೇ ಆರೋಪಿ ಸ್ಥಾನದಲ್ಲಿ ನಿಲ್ಲಿಸುವುದು ಅಥವಾ ಅದನ್ನು ಒಂದು ಪರಿಹಾರವೆಂಬಂತೆ ಬಿಂಬಿಸುವುದು ಅಪಾಯಕಾರಿ. ಇದು ಸಾಮಾಜಿಕ ನ್ಯಾಯಕ್ಕಾಗಿ, ಸಮಾನತೆಗಾಗಿ ನಡೆಯಬೇಕಿರುವ ನೈಜ ಹೋರಾಟವನ್ನೇ ಹಾದಿ ತಪ್ಪಿಸುತ್ತದೆ.

ಇಂತಹ ಆಧುನಿಕೋತ್ತರ ವಾದಗಳ ಮೂಸೆಯಲ್ಲಿ ಮಿಂದೆದ್ದಿರುವ ನಂದಿಯವರು ವಿಚಿತ್ರ, ವಿಲಕ್ಷಣವಾದಗಳನ್ನು ಹೊಸೆಯುವುದರಲ್ಲಿ ಸಿದ್ಧಹಸ್ತರು. ಹಿಂದೆ ಗುಜರಾತ್‌ನ ಗೋದ್ರ ಪ್ರಕರಣದಲ್ಲಿನ ಹತ್ಯಾಕಾಂಡದ ಮೋದಿ 'ಪೋಗ್ರಾಂ' ಬಗ್ಗೆ ಜನವರಿ 8, 2008 ರ ಟೈಮ್ಸ್ ಆಫ್ ಇಂಡಿಯಾದಲ್ಲಿ ಬರೆಯುತ್ತಾ 'ನಿಜವಾದ ಕೊಲೆಗಾರರು ಅತ್ಯಂತ ಕೆಳಗಿನಲ್ಲೇ





ಕೆಳಗಿನವರು, ಬಹುತೇಕ ಬುಡಕಟ್ಟು ಜನರು(ಪ.ಪಂಗಡಗಳಿಗೆ' ಸೇರಿರುವ) ದಲಿತರು, ಮಾಧ್ಯಮ ಮತ್ತು ಶಿಕ್ಷಣ ನಿಯಂತ್ರಿಸುವ ಮಧ್ಯಮವರ್ಗಗಳು, ಇವರು ದ್ವೇಷದ ಕೈಗಾರಿಕೆ ನಡೆಸುವವರು, ಇವರಿಗೆ ಅತೀ ಉತ್ಸಾಹದ ಬೆಂಬಲ ನೀಡುವವರು ದೇಶದಿಂದ ದೂರವಿರುವ ಬಹಳ ರಾಷ್ಟ್ರೀಯವಾದಿಗಳಾದ ಅನಿವಾಸಿ ಭಾರತೀಯರು, ರಕ್ತದಾಹಿಗಳಿವರು, ಹೊಣೆಗೇಡಿಗಳು . .' ಎಂದಿದ್ದಾರೆ. ತೀರಾ ಇತ್ತೀಚೆಗೆ ದೆಹಲಿಯಲ್ಲಿನ ಅತ್ಯಾಚಾರದ ಪ್ರಕರಣದ ಹಿನ್ನೆಲೆಯಲ್ಲಿ ಆರೆಸ್ಸೆಸ್ ನ ಮುಖ್ಯಸ್ಥ ಮೋಹನ್ ಭಾಗವತ್ ರವರ 'ಇಂಡಿಯಾದಲ್ಲಿಯೇ ಅತ್ಯಾಚಾರ ನಡೆಯುವುದು, ಭಾರತದಲ್ಲಿ ಅಲ್ಲ' ಎಂಬ ಹೇಳಿಕೆಯನ್ನು ನಂದಿ ಪರಿ ಪರಿಯಾಗಿ ಸಮರ್ಥಿಸಿದ್ದರು. ಮಾತ್ರವಲ್ಲ, ಅತ್ಯಾಚಾರಗಳನ್ನು ಹಿಂಸಾತ್ಮಕ ಹಾಗೂ ಅಹಿಂಸಾತ್ಮಕ ವೆಂದು ವಿಂಗಡನೆಯನ್ನೂ ಮಾಡಿದ್ದರು! ಇಂತಹ ವಿಚಿತ್ರವಾದಿಗಳಿಂದ ಅದೆಂತಹ ಪ್ರಗತಿಪರತೆ, ಸಾಮಾಜಿಕ ಚಲನೆ ಮೂಡುತ್ತದೆಯೋ ಎಂದು ಅವರ 'ಏಕಲವ್ಯ'ಶಿಷ್ಯರೇ ಹೇಳಬೇಕು!

ಈಗಲೂ ಅವರ ಎಲ್ಲಾ ವಾದಗಳು ಭ್ರಷ್ಟಾಚಾರವನ್ನು ಸಮರ್ಥಿಸುತ್ತವೆ. ಭ್ರಷ್ಟಾಚಾರವು ಯಾವುದೇ ಜಾತಿ, ಸಮುದಾಯಗಳಿಗೆ ಮಾತ್ರ ಸೀಮಿತವಲ್ಲ. ಭ್ರಷ್ಟಾಚಾರವೆಂಬುದು ಈ ವ್ಯವಸ್ಥೆಯ ಮೂಲದಲ್ಲೇ ಇದೆ. ಅದು ಉತ್ಪಾದನಾ ವಿಧಾನ, ಹಂಚಿಕೆ , ಸಂಪತ್ತಿನ ಸೃಷ್ಟಿಗೆ ಆಧಾರವಾಗಿರುವ ಶ್ರಮ ಶೋಷಣೆಯಲ್ಲಿದೆ. ಇಂತಹ ಉತ್ಪಾದನಾ ಸಂಬಂಧಗಳುಳ್ಳ, ಶೋಷಣೆಯನ್ನೇ ತಳಹದಿಯಾಗಿರುವ ಈ ವರ್ಗ ವಿಭಜನೆಯ ವ್ಯವಸ್ಥೆಯೇ ಮೂಲದಲ್ಲೇ ಭ್ರಷ್ಟವಾದುದು. ಇದರ ಬಹುತೇಕ ಪಾಲು ಆಸ್ತಿವಂತ ವರ್ಗಗಳ ಕೈಯಲ್ಲೆ ಇರುತ್ತದೆ. ಇದರ ಪ್ರಭಾವ, ಪರಿಣಾಮ ಇತರೆ ವರ್ಗಗಳ ಮೇಲೂ ಬೀರುತ್ತದೆ. ಖಾಸಗಿ ಆಸ್ತಿ ಮೂಲಭೂತವಾದ ಹಕ್ಕಾಗಿರುವಾಗ ಮತ್ತು ಅದಕ್ಕೆ ಯಾವುದೇ ನಿಯಂತ್ರಣವಿಲ್ಲದಿರುವಾಗ ಪ್ರತಿಯೊಬ್ಬರೂ ತಮ್ಮ ಶಕ್ತ್ಯಾನುಸಾರ ದೋಚಲು ಯತ್ನಿಸುವರು. ಹೀಗಾಗಿ ಅಧಿಕಾರದ ಯಂತ್ರದಲ್ಲಿರುವವರು ಸಿಕ್ಕ ಅಲ್ಪ ಅವಕಾಶಗಳಲ್ಲೇ ಒಂದಿಷ್ಟು ಸಂಪತ್ತಿನ ಕ್ರೋಢಿಕರಣಕ್ಕೆ ಪ್ರಯತ್ನಿಸುವರು.

ಭ್ರಷ್ಟಾಚಾರವೆಂಬುದು ಬಂಡವಾಳ ಕ್ರೋಢಿಕರಣದ ಒಂದು ವಿಧ, ಶ್ರಮಕ್ಕೆ ತಕ್ಕ ಪ್ರತಿಫಲ ನೀಡದೇ ಶೋಷಣೆಯ ಮೂಲಕ ಸಂಪತ್ತನ್ನು ಸೂರೆ ಮಾಡುವ ಆಳುವವರ್ಗಗಳಿರುವಾಗ ಕೊಳ್ಳುವ ಶಕ್ತಿಯನ್ನು ಪಡೆಯಲಾಗದ ಆಯಕಟ್ಟಿನಲ್ಲಿರುವ ವಿಬಾಗಗಳು, ಅಧಿಕಾರಶಾಹಿ ಯಂತ್ರದ ಭಾಗಗಳು ಅಕ್ರಮ ದಾರಿಗಳ ಮೂಲಕ ಸಂಪತ್ತು ಪಡೆಯ ಬಯಸುತ್ತವೆ. ಹೀಗಿರುವಾಗಲೂ ಅದೇನಿದ್ದರೂ ಮೇಲಿನವರೊಂದಿಗೆ ಈ ವಿಭಾಗಗಳನ್ನು ಹೋಲಿಸಲಾಗದು. ಮೇಲ್ ಹಂತದಲ್ಲಿರುವ ಅದರ ಪ್ರಮಾಣವೇ ಬೇರೆ. ಇದನ್ನು 2 ಜಿ ಹಗರಣ, ಗೋದಾವರಿ ಬೇಸಿನ್ ಹಗರಣ, ದೇಶದಲ್ಲಿನ ವಿವಿಧ ಅಕ್ರಮ ಭೂ ಹಾಗೂ ಗಣಿ ಹಗರಣಗಳು ಮುಂತಾದವುಗಳಲ್ಲಿ ಕಾಣಬಹುದು. ಉದಾರೀಕರಣದ ಪ್ರಕ್ರಿಯೆಯಲ್ಲಿ ಇವು ದೇಶವನ್ನೇ ನಡುಗಿಸುವಷ್ಟು ಮಹಾ ಹಗರಣಗಳಾಗಿವೆ.

ಇಂತಹ ಹಗರಣ, ಭ್ರಷ್ಟಾಚಾರವನ್ನು ಮೇಲ್ವರ್ಗದ, ಒಂದು ಹಂತದಲ್ಲಿನ

ಪುಟ 15 ಕ್ಕೆ

JANASHAKTHI KANNADA VARA PATRIKE: Printed by **G.N.NAGARAJ**, No.12, 18th Cross, S.R.Nagar, BANGALORE-560027
Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027
Editor **S.Y.GURUSHANTH**